ಗೌರಿ ಲಂಕೇಶರ

ಲಂಕೇಶ್

ಜುಲೈ 25, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ


ನಟಿ ಜೊತೆ ಅನ್ಸಾರಿಯ ಚಿನ್ನವೀಡು



ಪಂಚಮಸಾಲಿಗಳ ಬೀದಿ ರಂಪ







ಮೆಣಸಿನಹಾಡ್ಯ ಎಂಬ ನಕ್ಸಲ್‌ಬರಿ



ಪೋಲೀಸ್ ಟೆರ್ರರ್

ಲಂಕೇಶ್

ಬುದ್ಧದೇವ ಬ್ಲೂಸಲಾಂ ಬ್ಲೂಸಲಾಂ!!

ಇಂದು ಈ ದೇಶ ಮತ್ತು ಕಾಲ ಅತ್ಯಂತ ಸಂಕ್ರಮಣ ಕಾಲಘಟ್ಟದಲ್ಲಿ ಸಾಗುತ್ತಿದೆ. ಯಾವ ಪದಕ್ಕೆ ಯಾವ ಅರ್ಥ ಯಾವ ಅರ್ಥಕ್ಕೆ ಯಾವ ಪದ ಎಂದು ಅರ್ಥವಾಗದ, ಪ್ರತಿಯೊಂದೂ ಮರು ನಿರ್ವಚನಕ್ಕೆ ಗುರಿಯಾಗಬೇಕಾದ ಸಂದರ್ಭವಿದು. ಈ ದೇಶವನ್ನು ಸಮಾಜವಾದಿ ದೇಶವೆನ್ನುತ್ತಾರೆ. ಆದರೆ ಅತ್ಯಂತ ತ್ವರಿತಗತಿಯಲ್ಲಿ ಬಂಡವಾಳವಾದವನ್ನು ಕಟ್ಟುತ್ತಿರುವ ಏಷಿಯಾ ದೇಶಗಳಲ್ಲಿ ಚೀನಾವನ್ನು ಬಿಟ್ಟರೆ ಭಾರತವೇ ಎರಡನೆಯದು. ಆದರೆ ತಮಾಷೆ ಏನು? ಭಾರತ ಸಮಾಜವಾದಿ ಮತ್ತು ಚೀನಾ ಕಮ್ಯುನಿಸ್ಟ್! ಎರಡೂ ಸಿದ್ಧಾಂತಗಳು ಬಂಡವಾಳ ವಿರೋಧಿ ಸಿದ್ಧಾಂತಗಳೇ. ಆದರೆ ಕಟ್ಟುತ್ತಿರುವುದು ಮಾತ್ರ ಬಂಡವಾಳಶಾಹಿಯನ್ನೇ..!!



ಆದರಷ್ಟೇ ಸೋಜಿಗ ನಮ್ಮ ಬಂಗಾಳದ ಬುದ್ಧದೇವರದು. ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರದ ಮುಖ್ಯಮಂತ್ರಿಯಾಗಿರುವ ಬುದ್ಧದೇವರನ್ನು ಈ ದೇಶದ ಎರಡೇ ಕಮ್ಯುನಿಸ್ಟ್ ಮುಖ್ಯಮಂತ್ರಿಗಳಲ್ಲಿ ಒಬ್ಬರೆಂದು ಕರೆಯಲಾಗುತ್ತದೆ. ಕಮ್ಯುನಿಸ್ಟ್ ಸಿದ್ಧಾಂತವು ವರ್ಗ ಸಂಘರ್ಷದ ಸಿದ್ಧಾಂತ. ಬಂಡವಾಳಶಾಹಿ ಮತ್ತು ದುಡಿಯುವ ವರ್ಗದ ನಡುವೆ ರಾಜಿಯಾಗಬಹುದಾದ ಯಾವುದೇ ಅಂಶಗಳಿಲ್ಲ. ಅವುಗಳ ನಡುವಿನ ವೈರುಧ್ಯ ಬಂಡವಾಳವಾದ ನಾಶಗೊಂಡು ಸಮಾಜವಾದ ಸ್ಥಾಪನೆಯಾಗುವ ಮೂಲಕ ಮಾತ್ರ ಪರಿಹಾರವಾಗುತ್ತದೆಂಬುದು ಕಮ್ಯುನಿಸಮ್ಮಿನ ಮೂಲತತ್ವ. ಹೀಗಾಗಿಂತೇ ಬಂಡವಾಳಶಾಹಿಗಳೆಲ್ಲಾ ಕಮ್ಯುನಿಸ್ಟರ ಬದ್ಧವೈರಿಗಳೆ ಆಗಿರುತ್ತಾರೆ ಮತ್ತು ಬಂಡವಾಳಶಾಹಿಯನ್ನು ದುಡಿಯುವ ವರ್ಗದ ದಮನ ಮಾಡಿಯಾದರೂ ಉಳಿಸಬೇಕೆಂಬ ಫ್ಯಾಸಿಸ್ಟರು ಬಂಡವಾಳಶಾಹಿಗಳ ನಂಬರ್ ಒನ್ ಮಿತ್ರರಾಗಿರುತ್ತಾರೆ. ಕಮ್ಯುನಿಸ್ಟರು ನಂಬರ್ ಒನ್ ಶತ್ರುಗಳಾಗಿರುತ್ತಾರೆ.

ಆದರೆ ಈ ಕಾಲ ಮತ್ತು ದೇಶದಲ್ಲಿ ಒಂದು ವಿಚಿತ್ರ ಸಂಭವಿಸಿಬಿಟ್ಟಿದೆ. ಮೊನ್ನೆ ಈ ದೇಶದ ಅಂಬಾನಿ, ಟಾಟಾ, ಬಿರ್ಲಾ ಇನ್ನಿತ್ಯಾದಿ 150 ದೊಡ್ಡ ಉದ್ಯಮಪತಿಗಳನ್ನು ತಾವು ಮೆಚ್ಚುವ ಅತ್ಯಂತ ಮೆಚ್ಚಿನ ಮುಖ್ಯಮಂತ್ರಿ ಯಾರು ಎಂದು ಕೇಳಲಾಗಿತ್ತು, ಮುಖ್ಯಮಂತ್ರಿಗಳ ರಾಜಕೀಯ ಮತ್ತು ಆರ್ಥಿಕ ಕ್ರಮಗಳ ಆಧಾರವೇನು ಎಂದು ಕೇಳಲಾಗಿತ್ತು, ಈ ಉದ್ಯಮಪತಿಗಳು ಓಟು ಹಾಕಿದ್ದು ಯಾರಿಗೆ ಗೊತ್ತೆ? ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರಿಗೆ!! ಬುದ್ಧದೇವರ ರಾಜಕೀಯ ಮತ್ತು ಆರ್ಥಿಕ ನೀತಿಗಳನ್ನು ಈ ದೇಶದ ಉದ್ಯಮಪತಿಗಳು ಎಷ್ಟೊಂದು ಮೆಚ್ಚಿಕೊಂಡಿದ್ದಾರೆಂದರೆ ಬುದ್ಧದೇವರು ಈ ದೇಶದ ನಂಬರ್ ಒನ್ ಮುಖ್ಯಮಂತ್ರಿಯಂತೆ. ನಂಬರ್ ಎರಡನೇ ಸ್ಥಾನದಲ್ಲಿ ಫ್ಯಾಸಿಸ್ಟ್ ನರೇಂದ್ರ ಮೋದಿಯಂತೆ!

ಅಂದರೆ ಈ ದೇಶದ ಕಮ್ಯುನಿಸ್ಟರು ಈ ದೇಶದ ಫ್ಯಾಸಿಸ್ಟರಿಗಿಂತ ನಿಷ್ಠರಾಗಿ ಬಂಡವಾಳಿಗರ ಸೇವೆಯಲ್ಲಿ ನಿರತರಾಗಿದ್ದಾರೆ ಎಂದಾಯಿತು! ನರೇಂದ್ರ ಮೋದಿ ಗುಜರಾತ್ ಫೇಮಸ್! ಬುದ್ಧದೇವ ಸಿಂಗೂರ್, ನಂದಿಗ್ರಾಮ್ ಫೇಮಸ್. ಇಬ್ಬರೂ ತಾವು ಮಾಡಿದ್ದು ತಪ್ಪೆಂದು ಒಪ್ಪಿಕೊಳ್ಳುವುದಿಲ್ಲ, ತಮ್ಮ ರಾಜ್ಯದ ಹಿತಾಸಕ್ತಿಗೆ ಇದರಿಂದ ಅತ್ಯಂತ ಒಳ್ಳೆಯದಾಗಿದೆ ಎಂದೇ ಇಬ್ಬರೂ ವಾದಿಸುತ್ತಾರೆ. ಅದರಲ್ಲೂ ಇಬ್ಬರಿಗೂ ಸಾಮ್ಯವಿದೆ. ಅಡ್ವಾನಿಯವರೂ ಗೃಹಮಂತ್ರಿಗಳಾಗಿದ್ದಾಗ ತಾವೂ ಅತ್ಯಂತ ಮೆಚ್ಚಿಕೊಳ್ಳುವ ಮುಖ್ಯಮಂತ್ರಿ ಬುದ್ಧದೇವ ಎಂದಿದ್ದರು. ಕೆಂಪು ದುಡಿಯುವ ಜನರ ಹೋರಾಟದ ಸಂಕೇತ. ಈಗ ಆ ಜನ ಬುದ್ಧದೇವರ ವಿರುದ್ಧ ತಿರುಗಿ ಬದ್ದಿದ್ದಾರೆ. ಈಗ ಅವರ ಸ್ನೇಹಿತರು ಉದ್ಯಮಪತಿಗಳು ಮತ್ತು ವಿದೇಶಿ ಬಂಡವಾಳಿಗರು. ಅಮೆರಿಕನ್ ಬಂಡವಾಳಿಗರ ಸಂಕೇತ ಬ್ಲ್ಯೂ ಅಲ್ಲವೇ? ಆದಕ್ಕೆ ನಮ್ಮ ಬುದ್ಧದೇವ ಬ್ಲೂಸಲಾಂ. ಬ್ಲ್ಯೂ ಸಲಾಂ!!

■



ಅವಕಾಶವಾದ ಮತ್ತು ಅಹಿಂಸಾವಾದ!

ನಕ್ಸಲರ ಬೆಂಬಲಿಗರ ಪಟ್ಟಿ ಬಿಡುಗಡೆಯಾದ ಬೆನ್ನಿಗೆ ಮೆಣಸಿನಹಾಡ್ಯದಲ್ಲಿ ಒಬ್ಬ ನಕ್ಸಲೀಯನನ್ನು ಮತ್ತು ನಾಲ್ವರು ಶರಣಾಗತ ಆದಿವಾಸಿಗಳನ್ನು ಪೊಲೀಸರು ಗುಂಡಿಟ್ಟು ಕೊಂದಿದ್ದಾರೆ. ಎಲ್ಲಾ ಹಿಂಸೆಗಳನ್ನು ತಾತ್ವಿಕವಾಗಿ ವಿರೋಧಿಸುತ್ತಿದ್ದ ಮಹಾತ್ಮ ಬುದ್ಧಿಜೀವಿಗಳು ಯಾಕೋ ಮೌನವಹಿಸಿಬಿಟ್ಟಿದ್ದಾರೆ. ಹಾಗಿದ್ದಲ್ಲಿ ಅವರು ವಿರೋಧಿಸುತ್ತಿದ್ದದ್ದು ಕೇವಲ ನಕ್ಸಲ್ ಹಿಂಸೆಯನ್ನು ಮಾತ್ರವೇ? ಎಲ್ಲಾ ಹಿಂಸೆಗಳನ್ನು ವಿರೋಧಿಸಬೇಕೆಂದಲ್ಲಿ ಪ್ರಭುತ್ವ ಹಿಂಸೆಯನ್ನೂ ವಿರೋಧಿಸಬೇಕಲ್ಲವೇ? ಕನಿಷ್ಠ ಅತ್ಯಂತ ಬರ್ಬರವಾಗಿ ನಾಲ್ವರು ಅಮಾಯಕ ನಿಶಸ್ತ್ರಧಾರಿ ಆದಿವಾಸಿಗಳನ್ನು ಕೊಂದ ಅನಾಗರಿಕ ಪೊಲೀಸ್ ಹಿಂಸೆಯನ್ನಾದರೂ ವಿರೋಧಿಸಬೇಕಲ್ಲವೇ? ಎಲ್ಲಾ ಹಿಂಸೆಯನ್ನು ವಿರೋಧಿಸುತ್ತೇವೆ ಎನ್ನುವವರು ಪ್ರಭುತ್ವ ಹಿಂಸೆಯನ್ನು ಮಾತ್ರ ಪರೋಕ್ಷವಾಗಿ ಬೆಂಬಲಿಸುವುದು ಅವಕಾಶವಾದವಲ್ಲವೇ? ಇರಲಿ, ಈ ನಾಡಿನ ಹಲವು ಖ್ಯಾತ ಬುದ್ಧಿಜೀವಿಗಳಲ್ಲಿ ಅವಕಾಶವಾದವು ಜೀವನದ ಶೈಲಿಯೇ ಆಗಿಬಿಟ್ಟಿದೆ..!

ಆದರೆ ಈ ಬುದ್ಧಿಜೀವಿಗಳದ್ದು ವ್ಯಕ್ತಿಗತ ಅವಕಾಶವಾದರೆ ಈ ರಾಜ್ಯದ ಎರಡು ಕಮ್ಯುನಿಸ್ಟ್ ಪಕ್ಷಗಳ ಕೆಲವರಲ್ಲಿ ಮತ್ತೊಂದು ಬಗೆಯ ವ್ಯವಸ್ಥಿತ ಅವಕಾಶವಾದವಿದೆ. ಬೆಂದ ಮನೆಯಲ್ಲಿ ಗಳ ಹಿಡಿಯಲು ಹೊರಟಿರುವ ಈ ಪಕ್ಷಗಳ ಕೆಲವರು ಪೊಲೀಸ್ ಕ್ರೌರ್ಯದಲ್ಲಿ ಸತ್ತ ಆದಿವಾಸಿಗಳನ್ನು ತಮ್ಮ ಪಕ್ಷಕ್ಕೆ ರಿಕ್ರೂಟ್ ಮಾಡಿಕೊಳ್ಳುವ ಸಾಧ್ಯತೆಯನ್ನು ಅರಸುತ್ತಿದ್ದಾರೆ. ಈ ಕಮ್ಯುನಿಸ್ಟರ ಅವಕಾಶವಾದ ಈ ನಾಡಿನ ಬುದ್ಧಿಜೀವಿಗಳ ಅವಕಾಶವಾದಕ್ಕಿಂತ ಹೀನವಾದದ್ದು.

ಗಾಂಧೀವಾದವನ್ನು ತಮ್ಮ ಕೆರಿಯರ್ ಮಾಡಿಕೊಂಡಿರುವ ಬುದ್ಧಿಜೀವಿಗಳು ಹೇಗೆ ತಮಗೆ ಹಾನಿಯಾಗದೆ ಇದ್ದಾಗ ಗ್ಲಾಮರಸ್ ಹಿಂಸಾವಾದ ಮತ್ತು ಗ್ಲಾಮರಸ್ ಅಹಿಂಸಾವಾದವನ್ನು ಅನುಸರಿಸುತ್ತಾರೆಂಬುದನ್ನು ನಾಡಿನ ಜನ ಇತ್ತೀಚಿನ ದಿನಗಳಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ಆದರೆ ಕಮ್ಯುನಿಸ್ಟ್ ಪಕ್ಷಗಳು ಮತ್ತು ಈ ಅವಕಾಶವಾದಿ ಅಹಿಂಸಾವಾದಿಗಳು ಹಿಂಸಾ ವಿರೋಧಿ ನೆಲೆಯಲ್ಲಿ ಒಂದಾಗಿರುವುದೇ ಈ ಸಂದರ್ಭದ ದೊಡ್ಡ ಅವಕಾಶವಾದವನ್ನು ಎತ್ತಿ ತೋರಿಸುತ್ತಿದೆ.

ಈ ಕಮ್ಯುನಿಸ್ಟರೂ ಸಹಾ ನಕ್ಸಲ್ ಹಿಂಸೆಯನ್ನು ವಿರೋಧಿಸುತ್ತಾರೆ. ಆದರೆ ಇವರೂ ಗಾಂಧಿವಾದಿಗಳ ತರ ತಾತ್ವಿಕವಾಗಿ ಎಲ್ಲಾ ಬಗೆಯ ಹಿಂಸೆಯ ವಿರೋಧಿಗಳೇ? ಖಂಡಿತಾ ಇಲ್ಲ, ಆದರೆ ಸಮಾಜ ಬದಲಾವಣೆ ಮತ್ತು ದುಡಿಯುವ ಜನರಿಗೆ ಅಧಿಕಾರ ಹಸ್ತಾಂತರಕ್ಕೆ ಹಿಂಸಾ ಪ್ರಯೋಗ ಬೇಕು. ಕೇವಲ ಅಹಿಂಸಾತ್ಮಕ ಹೋರಾಟಗಳಿಂದ ಮಾತ್ರ ಸಾಧ್ಯವಿಲ್ಲ ಎಂದೇ ಈ ಪಕ್ಷಗಳ ಪ್ರಣಾಳಿಕೆಗಳು ಹೇಳುತ್ತವೆ. ಹೀಗಾಗಿ ತಾತ್ವಿಕವಾಗಿ ಅವರದ್ದು ಹಿಂಸೆಯ ಬಗ್ಗೆ ಗಾಂಧೀವಾದಿಗಳ ನಿಲುವಲ್ಲ.

ನಕ್ಸಲರು ಮಾಡುವ ಹಿಂಸೆ ಅಥವಾ ಹೋರಾಟಗಳಲ್ಲಿ ಜನರ ಪಾತ್ರವಿರುವುದಿಲ್ಲ..ಹೀಗಾಗಿ ಪ್ರಭುತ್ವ ಬಹಳ ಸುಲಭವಾಗಿ ಅವರನ್ನು ದಮನಿಸಬಹುದು. ರೋಚಕ ಹೋರಾಟ ಮತ್ತು ಬಲಿದಾನಗಳಿಂದ ಸಾಮಾನ್ಯ ಜನರನ್ನು ಅತ್ಯಗತ್ಯ ಪ್ರಜಾತಾಂತ್ರಿಕ ಹೋರಾಟದಿಂದ ದಾರಿ ತಪ್ಪಿಸುತ್ತಾರೆ ಎಂಬುದು ನಕ್ಸಲ್‌ವಾದದ ಬಗ್ಗೆ ಅವರಿಗೆ ಇರುವ ಆಕ್ಷೇಪ. ಈ ವಿಮರ್ಶೆಗಳನ್ನು ಕಮ್ಯುನಿಸ್ಟ್ ಪಕ್ಷಗಳು ಕ್ರಾಂತಿಯ ಸದುದ್ದೇಶದಿಂದೇನೂ ಹೇಳುತ್ತಿಲ್ಲವಾದರೂ ಇವುಗಳಲ್ಲಿ ಕೆಲವು ವಿಮರ್ಶೆಗಳನ್ನಾದರೂ ನಕ್ಸಲ್ ಹೋರಾಟವೂ ಸಹ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ ಎಂಬುದೂ ಸತ್ಯವೇ.

ಆದರೆ ಈ ಕಾಮ್ರೇಡುಗಳೂ ಸಹ ಥೇಟ್ ಗಾಂಧೀವಾದಿಗಳ ತರ ಹಿಂಸೆಯ ಬಗ್ಗೆ ಆಕ್ಷೇಪಗಳನ್ನು ಎತ್ತುತ್ತಿರುವುದೂ ಮತ್ತು ಈ ತಥಾಕಥಿತ ಗಾಂಧೀವಾದಿಗಳು ತಾತ್ವಿಕವಾಗಿ ಅಹಿಂಸಾವಾದಿಗಳೇನೂ ಅಲ್ಲದ ಮತ್ತು ಕಾರ್ಯತಾಂತ್ರಿಕವಾಗಿ ಮಾತ್ರ ನಕ್ಸಲರ ಹಿಂಸೆಯನ್ನು ವಿರೋಧಿಸುವ ಕಮ್ಯುನಿಸ್ಟರ ಜೊತೆಗೂಡಿ ಶಾಶ್ವತ ಅಹಿಂಸೆಯ ಬಗ್ಗೆ ತಾತ್ವಿಕವಾದ ಹೂಡುತ್ತಿರುವುದನ್ನು ನೋಡಿದರೆ ಏನು ಅರ್ಥವಾಗುತ್ತದೆ? ಆ ಕಮ್ಯುನಿಸ್ಟರು ತಾವೇ ನಂಬಿಕೊಳ್ಳುವ ಬದಲಾವಣೆಯ ಸಿದ್ಧಾಂತಕ್ಕಾಗಲೀ, ಈ ಗಾಂಧೀವಾದಿಗಳು ತಾವೇ ನಂಬಿಕೊಳ್ಳುವ ಶಾಶ್ವತ ಅಹಿಂಸೆಯ ಸಿದ್ಧಾಂತಕ್ಕಾಗಲೀ ಬದ್ಧರಲ್ಲವೆಂಬುದು ಸ್ಪಷ್ಟವಾಗುತ್ತದೆ.

■

ಚಾರ್ವಾಕ
ಶಿವಸುಂದರ್

365 ದಿನಗಳು ಮತ್ತು 372 ರೈತರ ಆತ್ಮಹತ್ಯೆಗಳು!!

ಇನ್ನು ಯಾವುದೇ ರೈತ ಆತ್ಮಹತ್ಯೆ ಮಾಡಿಕೊಂಡರೂ ನಾನೇ ಆತ್ಮಹತ್ಯೆ ಮಾಡಿಕೊಳ್ಳುತ್ತೀನಿ ಅಥವಾ ಅಧಿಕಾರ ತ್ಯಾಗ ಮಾಡುತ್ತೀನಿ ಎಂದು ಹೇಳಿದ್ದ ಕುಮಾರಸ್ವಾಮಿಯವರು ಜೀವಂತವಾಗಿದ್ದಾರೆ. ಅಲ್ಲದೆ ಅಕ್ಟೋಬರ್ ನಂತರ ಅಧಿಕಾರ ಹೇಗೆ ಉಳಿಸಿಕೊಳ್ಳುವುದು ಎಂಬ ಕಸರತ್ತಿನಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಮತ್ತೊಂದು ಕಡೆ ರೈತರು ಮಾತ್ರ ದಿನನಿತ್ಯ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಲೇ ಇದ್ದಾರೆ.

ಇತ್ತೀಚೆಗೆ ಸದನದಲ್ಲಿ ಸರ್ಕಾರ ಕೊಟ್ಟ ಅಂಕಿಅಂಶದ ಪ್ರಕಾರ ಕಳೆದ 365ದಿನಗಳಲ್ಲಿ 372ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ದಿನಕ್ಕೆ ಒಬ್ಬರಿಗಿಂತ ಜಾಸ್ತಿ! ಆದರೆ ಅಧಿಕಾರದಲ್ಲಿ ಇರುವುದು ಮಾತ್ರ ರೈತರ ಸರ್ಕಾರವೇ ಅಂತೆ. ಮೊನ್ನೆ ದೇವೇಗೌಡರಂತೂ ರೈತರು ಆತ್ಮಹತ್ಯೆ ಮಾಡಿಕೊಂಡು ತನ್ನನ್ನು ಹೆದರಿಸಲಾಗುವುದಿಲ್ಲ ಎಂದು ಗುಡುಗಿದ್ದಾರೆ. ಎಷ್ಟೆಲ್ಲಾ ರೈತರ ಪರವಾಗಿದ್ದರೂ ರೈತರು ಆತ್ಮಹತ್ಯೆ ಮಾಡಿಕೊಂಡು ಗೌಡರ ನಿದ್ದೆಗೆಡಿಸುತ್ತಿದ್ದಾರಂತೆ. ಇಷ್ಟಾದ ಮೇಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಾದಲ್ಲಿ ಮಾಡಿಕೊಳ್ಳಲಿ ಎಂದಿದ್ದಾರೆ.



ಈ ಸರ್ಕಾರ ಹಾಗಿದ್ದಲ್ಲಿ ರೈತರಿಗಾಗಿ ಏನೇನು ಮಾಡಿದೆ? ಇನ್ನೇನೂ ಬೇಡ, ಸತ್ತ ಎಷ್ಟು ರೈತರಿಗೆ ಪರಿಹಾರ ಕೊಟ್ಟಿದ್ದಾರೆ? ಸದನದಲ್ಲಿ ನೀಡಿದ ಅಂಕಿಅಂಶದ ಪ್ರಕಾರವೇ ಇದುವರೆಗೆ ಕೇವಲ 52 ರೈತರಿಗೆ ಮಾತ್ರ ಪರಿಹಾರವನ್ನು ಕೊಡಲಾಗಿದೆಯಂತೆ. ಆದರೂ ಆತ್ಮಹತ್ಯೆ ಜಿಲ್ಲೆಗಳ ಅಧಿಕಾರಿಗಳು ಮಾತ್ರ ರೈತರು ಪರಿಹಾರದಾಸೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದೇ ವಾದಿಸುತ್ತಿದ್ದಾರೆ.

ಈ ವರ್ಷವೂ ರೈತರಿಗೆ ಸಾಲ ನೀಡಲು ಬ್ಯಾಂಕಿನ ಬಳಿ ಹಣವಿಲ್ಲ, ಬೆಳೆಗೆ ಸರಿಯಾದ ಬೆಲೆ ಇಲ್ಲ, ಆತ್ಮಹತ್ಯೆಯ ಹೊಸ ಋತುಮಾನ ಪ್ರಾರಂಭವಾಗುತ್ತಿದೆ.

■

No Comments



"ರೈತ ಸಮುದಾಯಕ್ಕೆ ಮಾನಸಿಕ ಸ್ಥೈರ್ಯ ನೀಡಬೇಕು ಎಂಬ ಉದ್ದೇಶದಿಂದಲೇ ನಾನು ರಾಜೀನಾಮೆ ನೀಡುತ್ತೇನೆಂದು ಹೇಳಿದ್ದೆ"

-ಎಚ್.ಡಿ.ಕುಮಾರಸ್ವಾಮಿ

"ಯಾವುದೇ ಕಾಲಕ್ಕೂ ಸಾಲ ಮನ್ನಾ ಯೋಜನೆ ನೀಡಬಾರದೆಂಬ ತೀರ್ಮಾನವನ್ನು ಎಲ್ಲಾ ರಾಜಕೀಯ ಪಕ್ಷಗಳು ಒಟ್ಟುಗೂಡಿ ಕೈಗೊ... ಬೇಕಾದ ತೀರ್ಮಾನ"

-ಜಿ.ಟಿ.ದೇವೇಗೌ...

"ಸತ್ರೂ ಗೌಡ್ರೆ, ಬದುಕಿದ್ರೂ ಗೌಡ್ರೆ, ಕಡೆ ಉಸಿರಿರು... ವರೆಗೂ ಪಕ್ಷ ಬಿಡಲ್ಲ, ಗೌಡ್ರು ಹೆಂಗೇಳ್ತಾರೋ ಹಂ... ಕೇಳ್ತೀನಿ."

-ಚನ್ನಿಗಪ...

"ನೀನೊಬ್ಬ ಭೂಗಳ್ಳ. ನಾನು ನೇರವಾಗಿ ಆರೋ... ಮಾಡುತ್ತೇನೆ."

-ಉಗ್ರಪ್ಪ, ಕಾಂಗ್ರೆಸ್ ಶಾಸ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಜನತಾದರ್ಶನದಲ್ಲಿ ಉದ್ಯೋಗ ಕೋರಿ ಬಂ... ಅಂಗವಿಕಲರ ಪೈಕಿ 600 ಮಂದಿಗೆ ಉದ್ಯೋಗ ನೀಡಲು ಆದೇಶಿಸಲಾಗಿದೆ."

-ಎಚ್.ಡಿ.ಕುಮಾರಸ್ವಾಮಿ

"ನನಗೆ ಗಾಲ್ಫ್ ಆಡಲು ಬರುವುದಿಲ್ಲ, ಆದ್ದರಿಂದ ಆಡಲು ಗಾಲ್ಫ್ ಕೋರ್ಸ್ ಹುಡುಕುವ ಪ್ರಮೇಯವೇ ಬರುವುದಿಲ್ಲ"

-ಟಿ.ಎಂ.ಶಿವಕುಮಾರ್, ಆರೋಪಿತ ಐ.ಎ.ಎಸ್.ಅಧಿಕಾರಿ



"ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ ರಾಜಕೀಯ ವ್ಯಕ್ತಿ ಆಗುವ ಅಗತ್ಯವಿಲ್ಲ."

-ಪ್ರಕಾಶ್ ಕಾರಟ್

ಊಸರವಳ್ಳಿ

"ಎನ್‌ಕೌಂಟರ್‌ನಲ್ಲಿ ಪೊಲೀಸರದು ಯಾವುದೇ ತಪ್ಪಿಲ್ಲ"

-ಎಂ.ಪಿ. ಪ್ರಕಾಶ್

ಉತ್ತರವೇನು ಈ ಪ್ರಶ್ನೆಗೆ?



"ಗ್ಲಾಸ್ಗೋ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಸಬೀಲ್ ಕಫೀಲ್ ಪಾಲ್ಗೊಂಡಿರುವುದಕ್ಕೆ ಇಡೀ ಮುಸ್ಲಿಂ ಸಮುದಾಯ ಏಕೆ ಉತ್ತರ ಕೊಡಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ, ಬೇರೆ ಸಮುದಾಯದ ವ್ಯಕ್ತಿಗಳು ಇದೇ ರೀತಿ ಪಾಲ್ಗೊಂಡಿದ್ದರೆ ಆ ಸಮುದಾಯವನ್ನೇ ಹೊ... ಮಾಡಲಾಗುತಿತ್ತೇ?"

-ಎಂ.ಎ. ಶರೀಫ್, ಅಧ್ಯಕ್ಷರು, ಜಮಾತ್-ಇ-ಹಿಂದ್(ಉಲೇಮ...

ಅಪರೂಪದ ಅಚ್ಚರಿ



"ಭೈರಪ್ಪನವರ ಸಾಹಿತ್ಯದ ಬಗ್ಗೆ ಅನಂತಮೂರ್ತಿ ಒಂದು ಸಾಹಿತ್ಯಿಕ ಅಭಿಪ್ರಾಯ ವ್ಯಕ್ತಪಡಿಸಿದರೆ ಅದರ ಬಗ್ಗೆ ಜನಮತ ಗಣನೆ ನಡೆಸುವುದು ಎಷ್ಟು ಸರಿ? ಪ್ರಪಂಚದಲ್ಲಿ ಎಲ್ಲಿಯೂ ಈ ರೀತಿ ಆಗುವುದಿಲ್ಲ, ಭೈರಪ್ಪನವರನ್ನು ಅನಂತಮೂರ್ತಿ ಟೀಕಿಸಿದರೆ ತಪ್ಪೇನು?"

ರವಿ ಬೆಳಗೆ...

ವಾರದ ವಿವೇಕ



"ಬುದ್ಧಿಜೀವಿಗಳಿಗೆ ಹೇಳುವಷ್ಟು ಬುದ್ಧಿ ನನಗಿಲ್ಲ, ಅವರು ಮಾತ್ರ ಹೇಗೆ ಸುಖವಾಗಿರುತ್ತಾರೋ. ನನಗಂತೂ ಗೊತ್ತಿಲ್ಲ..ಉತ್ತಮ ಕೆಲಸದಲ್ಲಿರುವವರಿಗೆ ಸಂಬಳ, ನಿವೃತ್ತರಿಗೆ (ನಾನೂ ಸೇರಿದಂತೆ)ಪೆನ್ಷನ್ ಬರುತ್ತಿದ್ದರೆ ಅದು ಲಕ್ಷಾಂತರ ಜನರು ಕಷ್ಟಪಡುತ್ತಾ ಒದಗಿಸಿಕೊಟ್ಟ ಸೌಲಭ್ಯ ಇದು ಜನರ ಸಂಪತ್ತು.

ಇದಕ್ಕೆ ಪ್ರತಿಯಾಗಿ ನಾವು ಮಾಡುವ ಸಹಾಯವೇನು? ಅವರು ಸ್ವತಂತ್ರರಾಗುವವರೆಗೆ, ಸಮಾನರಾಗುವವರೆಗೆ ನಾವು ಅವರ ಪರವಾಗಿರಬೇಕು ಅಲ್ಲವೇ? ಮಾನವರಾಗಿ ಯೋಚಿಸಿ. ನಿಮಗೆ ಸಮಸ್ಯೆಯೆಂದೆನಿಸುವವರ ಹತ್ತಿರ ಕೂತುಕೊಂಡು ಮಾತನಾಡಿ. ಯಾವ ಸಮಸ್ಯೆಯನ್ನಾಗಲಿ ಬಗೆಹರಿಸಬಹುದು. ನನ್ನ ಉಳಿದ ಜೀವನ ನನ್ನ ಜನರಿಗೆ ಉಪಯೋಗ ಆಗಬೇಕು ಎಂಬುದೇ ನನ್ನ ಆಸೆ.

-ಪ್ರೊ. ನಗರಿ ಬಾಬಯ್ಯ

'ಅನುದೇವ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ವಿವಾದದ ಹಿನ್ನೆಲೆಯಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಕಲೆ ಬಗೆಗಿನ ಹೇಳಿಕೆಗಳು....

ಗಿರಿಜನರ ರಕ್ತ ಕೇಳುತ್ತಿರುವ ಪೊಲೀಸರು



ಕಂಡಹಾಗೆ

"ಶೇಷಪ್ಪಗೌಡನ ಹತ್ಯೆಯಾದಾಗ ಎಲ್ಲಿದ್ರಿ ನೀವು? ವೆಂಕಟೇಶನ ಕೊಲೆ ಆದಾಗ ಯಾಕ್ರಿ ಸತ್ಯ ಶೋಧನೆ ಮಾಡಕ್ಕೆ ಬರ್ಲಿಲ್ಲಾ?....."

ನಿನ್ನೆ ಸಂಜೆ (ಶನಿವಾರ, ಜುಲೈ 14) ಮೆಣಸಿನಹಾಡ್ಯದಲ್ಲಿ ನಡೆದ ಗಿರಿಜನರ ಕಗ್ಗೊಲೆ ಕುರಿತಂತೆ ಸತ್ಯ ಶೋಧನೆ ಮಾಡಲು ಹೋಗಿದ್ದ ತಂಡದ ಹಲವು ಸದಸ್ಯರ ಎರಡು ಜೀಪುಗಳನ್ನು ದಾರಿ ಮಧ್ಯೆ ತಡೆದ ಭಜರಂಗಿಪಡೆಗಳು ಚೀರಾಡುತ್ತಿದ್ದ ಪ್ರಶ್ನೆಗಳಿವು. ರೋಡಿನ ಮಧ್ಯೆ ಒಂದು ಹೀರೋ ಹೊಂಡಾ (KA 18 Q 6861) ಮತ್ತು ಆಟೋ ರಿಕ್ಷಾ (KA 18 A 13)ಗಳನ್ನು ನಿಲ್ಲಿಸಿ ನಮ್ಮ ಜೀಪುಗಳು ಮುಂದೆ ಸಾಗದಂತೆ ಏರ್ಪಾಡು ಮಾಡಿದ್ದ ಸುಮಾರು ಇಪ್ಪತ್ತು ಜನರಲ್ಲಿ ಬಹಳಷ್ಟು ಜನ 20 ರಿಂದ 30 ವರ್ಷ ವಯಸ್ಸಿನವರಾಗಿದ್ದರು. ಅವರಲ್ಲಿ ಹಲವರು ಹಣೆಗೆ ತಿಲಕಗಳನ್ನು ಇಟ್ಟುಕೊಂಡಿದ್ದರೆ, ಕೆಲವರು ಸೂರ್ಯ ಇನ್ನೂ ಮುಳುಗದಿದ್ದ ಆ ವೇಳೆಗೇ "ಸರಿಯಾಗಿ ಹಾಕಿಕೊಂಡು" "ವಾಸನೆ" ಹೊಡೆಯುತ್ತಿದ್ದರು. ಅವರೆಲ್ಲ ಹಿಂದೂತ್ವವಾದಿ ಸಂಘ ಪರಿವಾರದ ಭಜರಂಗ ದಳದವರೆಂಬುದರ ಬಗ್ಗೆ ಅನುಮಾನಗಳೇ ಇರಲಿಲ್ಲ. ಅದರಲ್ಲೂ "ಎಲ್ಲಿ ಘೋರಿ ಲಂಕೇಶ್, ಆ ರಾಕ್ಷಸೀ?" ಎದು ಟಿವಿ ಕ್ಯಾಮರಾಗಳಿಗೆಂದೇ ಏರುದನಿಯಲ್ಲಿ ಅರಚುತ್ತಿದ್ದ ತಿಲಕಧಾರಿ ಕಂ ಹೆಂಡದ ಹೊಂಡನೊಬ್ಬ ಶೃಂಗೇರಿ ಕ್ಷೇತ್ರದ ಬಜೆಪಿ ಶಾಸಕ ಜೀವರಾಜರ ಪರಮಾಪ್ತ ಭಂಟ!



ನಮ್ಮನ್ನು ದಾರಿ ಮಧ್ಯೆ ಭಜರಂಗಿಗಳು ಹೀಗೆ ಅಕ್ರಮವಾಗಿ ತಡೆಹಿಡಿದಿದ್ದರೆ, ಅಸಂಬದ್ಧವಾಗಿ ಕೂಗಾಡುತ್ತಿದ್ದರೆ, ಅಲ್ಲೇ ಮುಷ್ಟಿಯಲ್ಲಿದ್ದ ಬಾಳೆಹೊನ್ನೂರಿನ ಪೇದೆ ನಾಗರಾಜ್ ಎಂಬಾತ ಮತ್ತು ಇನ್ನೂ ಮೂವರು ಪೊಲೀಸರು ಅವರ ಹಿಂದೆ ನಿಂತು ಪ್ರಚೋದಿಸುತ್ತಿದ್ದರು. ಭಜರಂಗಿಗಳು ಮತ್ತು ಪೊಲೀಸರು ಜೊತೆಗೂಡಿಯೇ ನಮ್ಮನ್ನು ತಡೆಯುವ ಕುತಂತ್ರವನ್ನು ಹೆಣೆದಿದ್ದರು ಎಂಬುದಕ್ಕೆ ಹಲವಾರು ಸಾಕ್ಷ್ಯಗಳನ್ನು ನೀಡಬಹುದು. ಮೊದಲನೆಯದಾಗಿ, ಊರಿಂದ ದೂರದಲ್ಲಿ, ಮೊಬೈಲ್ ಸಂಪರ್ಕ ಇಲ್ಲದಂತಹ ಜಾಗದಲ್ಲಿ ಇದನ್ನು ನಡೆಸಲಾಯಿತಲ್ಲದೆ, ಸ್ಥಳೀಯರ ಬದಲಾಗಿ ಹೆಚ್ಚಿನ ಜನರನ್ನು ಜಯಪುರ ಮತ್ತು ಬಾಳೆಹೊನ್ನೂರಿನಿಂದ ಕರೆತರಿಸಲಾಗಿತ್ತು.

ಅದೇನೇ ಇರಲಿ, ಭಜರಂಗದಳದ ಈ ಪುಂಡರ ಕೂಗಾಟಕ್ಕೆ ನಾವ್ಯಾರೂ ಧೃತಿಗೆಡಲಿಲ್ಲ. ಬದಲಾಗಿ PUCL ನ ಲಕ್ಷ್ಮೀನಾರಾಯಣ ಮತ್ತು ನಮ್ಮ ಈಶರವರು ಜೀಪಿನಿಂದ ಇಳಿದು ಅವರೊಂದಿಗೆ ಸಂಭಾಷಣೆ ನಡೆಸಲು ಪ್ರಯತ್ನಿಸಿದರು. ಅದೇ ಹೊತ್ತಿಗೆ ನಮ್ಮೊಂದಿಗಿದ್ದ ಉದಯ ಟೀವಿಯ ದಿನೇಶ್ ಪಟವರ್ಧನರವರು ಪೇದೆ ನಾಗರಾಜ್‌ನನ್ನು "ಇವರು ಹೀಗೆ ಅಕ್ರಮವಾಗಿ ತಡೆದಿದ್ದರೆ ನೀವ್ಯಾಕೆ ಸುಮ್ಮನಿದ್ದೀರಿ?" ಎಂದು ಪ್ರಶ್ನಿಸಿದರೆ, ಆತ "ನಾವೇನು ಮಾಡಕ್ಕಾಗಲ್ಲ" ಎಂದು ಹಲ್ಲು ಗಿಂಜಿದ.

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ, ಇವತ್ತು ಕರಾವಳಿ ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ಸಂಘ ಪರಿವಾರ ಮತ್ತು ಪೊಲೀಸರು ಎಂತಹ ಗಳಸ್ಯ-ಕಂಠಸ್ಯ ಸಂಬಂಧ ಹೊಂದಿದ್ದಾರೆಂದರೆ, ಭಜರಂಗದ ಪಡೆಗಳು ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ದಾಳಿ, ಬೆದರಿಕೆ, ಕೊಲೆ ಇತ್ಯಾದಿಗಳನ್ನು ನಡೆಸುತ್ತಿದ್ದರೆ ಪೊಲೀಸರು ಅವರ ಎಲ್ಲ ಕೃತ್ಯಗಳಿಗೆ ನೆರವು ಮತ್ತು ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ನಿನ್ನೆ ನಡೆದದ್ದು ಒಂದು ಸಣ್ಣ ಸ್ಯಾಂಪಲ್.

ಲಕ್ಷ್ಮೀನಾರಾಯಣ ಮತ್ತು ಈಶವರು ಎಷ್ಟೇ ಹೇಳಿದರೂ ಅವರೆಲ್ಲ ನನ್ನೊಂದಿಗೇ ಮಾತನಾಡಬೇಕು ಎಂದು ಹಠ ಹಿಡಿದರು. ಆಗ ಜೀಪೊಂದರ ಹಿಂಭಾಗದಲ್ಲಿ ಕೂತಿದ್ದ ನಾನು ಪಕ್ಕದಲ್ಲಿದ್ದ ಕಿಟಕಿ ತೆರೆದು ಅವರೊಂದಿಗೆ ಮಾತನಾಡಿದೆ:

"ಜೀಪಿನಿಂದ ಇಳಿದು ನಿಮ್ಮೊಂದಿಗೆ ಮಾತನಾಡಬೇಕು ಎಂದು ಅನ್ನಿಸುತ್ತಿದ್ದರೂ mob mentality ಗೊತ್ತಿರುವುದರಿಂದ ಇಲ್ಲಿಂದಲೇ ಮಾತನಾಡುತ್ತೇನೆ. ಮೊದಲನೆಯದಾಗಿ ನಾವು ಸಾಕೇತ್ ರಾಜನ್ ಕೊಲೆಯನ್ನು ಖಂಡಿಸಿದಂತೆ, ಪಾವಗಡದಲ್ಲಿ ನಕ್ಸಲರು ಪೊಲೀಸರನ್ನು ಕೊಂದಿದ್ದನ್ನೂ ಖಂಡಿಸಿದ್ದೇವೆ. ಇದಕ್ಕೆ ಕಾರಣ ನಾವು ಮೊದಲಿನಿಂದಲೂ ಕರ್ನಾಟಕ ಅಂಧ್ರ ಪ್ರದೇಶದ ಹಾದಿ ಹಿಡಿಯುವುದು ಬೇಡ, ಇಲ್ಲಿ ಹಿಂಸೆ-ಪ್ರತಿಹಿಂಸೆ ಇರುವುದು ಬೇಡ ಎಂಬ ನಿಲುವನ್ನು ಹೊಂದಿರುವುದು. ಅಷ್ಟೇ ಅಲ್ಲ ಹಿಂಸೆ ಮತ್ತು ಪ್ರತಿಹಿಂಸೆ ನಡೆದಾಗಲೆಲ್ಲ ನಕ್ಸಲರು ಕೊಂದರು, ಪೊಲೀಸರು ಕೊಂದರು ಎಂಬುದರ ಬಗ್ಗೆಯೇ ಚರ್ಚೆ ನಡೆಯುತ್ತದೆಯೇ ಹೊರತು ಮಲೆನಾಡಿನ ಸಮಸ್ಯೆಗಳು ಚರ್ಚೆ ಆಗುವುದೇ ಇಲ್ಲ.

ನಿಮ್ಮ ಹಾಗೆ ನಾನೂ ಮಲೆನಾಡಿನವಳೇ, ನನ್ನ ಅಪ್ಪ ಅಮ್ಮ ಕೂಡ ಮಲೆನಾಡಿನವರೇ. ಆದ್ದರಿಂದ ಮಲೆನಾಡಿನ ಸಮಸ್ಯೆಗಳ ಬಗ್ಗೆ ನಿಮಗಿರುವಷ್ಟೇ ಕಾಳಜಿ ನನಗೂ ಇದೆ. ಈ ಕಾಳಜಿಯಿಂದಾಗಿಯೇ ನಾವು ಅಂದಿನ ಸರ್ಕಾರ ಮತ್ತು ನಕ್ಸಲರ ನಡುವೆ ಮಾತುಕತೆ ಸಾಧ್ಯವೇ ಎಂದು ಪ್ರಯತ್ನಿಸಿದ್ದು. ಹೇಗಿದ್ದರೂ ಎರಡೂ ಕಡೆಯವರು ಮಾತುಕತೆಗೆ ಸಿದ್ಧರಿದ್ದೇವೆ ಎಂದಿದ್ದರಿಂದ ನಾವು ಪ್ರಯತ್ನಿಸಿದ್ದು.

ಆದರೆ ಆದದ್ದೇನು? ಒಂದು ಕಡೆ ಅಂದಿನ ಮುಖ್ಯಮಂತ್ರಿ ಧರಂಸಿಂಗ್‌ರವರು ಮಾತ್ರವಲ್ಲ ಸಂಘ ಪರಿವಾರದವರೂ ನಮ್ಮನ್ನು ನಕ್ಸಲ್ ಬೆಂಬಲಿಗರು ಎಂದು ಕರೆದರು. ಇಲ್ಲಿ ಹಿಂಸೆ, ಪ್ರತಿಹಿಂಸೆ ನಡೆಯಬಾರದು ಎಂದು ಯತ್ನಿಸಿದ್ದಕ್ಕೆ ನಮಗೆ ಸಿಕ್ಕಿದ್ದು ಈ ಹಣೆಪಟ್ಟಿ.

ಇನ್ನು ಶೇಷಪ್ಪಗೌಡ, ವೆಂಕಟೇಶನ ಹತ್ಯೆಗಳನ್ನು ಕುರಿತಂತೆ ಸತ್ಯ ಶೋಧನಕ್ಕೆ ಯಾಕೆ ಬರಲಿಲ್ಲ ಅಂದರೆ ಅದರ ಅವಶ್ಯಕತೆ ಇರಲಿಲ್ಲ, ನಕ್ಸಲರೇ ಅವರನ್ನು ಕೊಂದಿದ್ದಾಗಿ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಅವರನ್ನು ಹಿಡಿದು, ಜೈಲಿಗೆ ಹಾಕಿ, ನ್ಯಾಯಾಲಯದ ಮುಂದೆ ವಿಚಾರಣೆ ನಡೆಸಿ ಶಿಕ್ಷೆಗೆ ಗುರಿಯಾಗುವಂತೆ ನೋಡಿಕೊಳ್ಳಬೇಕಾದ್ದು ಪೊಲೀಸ್‌ರ ಕರ್ತವ್ಯ.

ಆದರೆ ಯಾಕೆ ನಾವು ಅಜಿತ್ ಕುಸುಬಿ ಮತ್ತು ಉಮೇಶರ ಎನ್‌ಕೌಂಟರ್ ನಡೆದಾದ ಮತ್ತು ಈಗ ಮೆಣಸಿನಹಾಡ್ಯದಲ್ಲಿ ಗೌತಮ್ ಮತ್ತು ನಾಲ್ವರು ಗಿರಿಜನರ ಹತ್ಯೆ ನಡೆದಿರುವಾಗ ಸತ್ಯ ಶೋಧನೆಗೆ ಬರುತ್ತೇವೆಂದರೆ, ನಕ್ಸಲರಿಗೂ ಪೊಲೀಸರಿಗೂ ವ್ಯತ್ಯಾಸ ಇರಬೇಕು ಎಂಬ ಕಾರಣದಿಂದ.

ನಕ್ಸಲರು ಅಕ್ರಮವಾಗಿ ಬಂದೂಕನ್ನು ಹಿಡಿದು ಜನರನ್ನು ಕೊಲ್ಲುವುದು ಅಪರಾಧ ಎಂಬುದು ನಿಮ್ಮ, ನಮ್ಮೆಲ್ಲರ ನಿಲುವು. ಆದರೆ ನಮ್ಮ ಕಾನೂನನ್ನು ಕಾಪಾಡಬೇಕಿರುವ ಪೊಲೀಸರೇ ಮೊನ್ನೆ ಅಮಾಯಕ ಗಿರಿಜನರನ್ನು ಕೊಲ್ಲುತ್ತಾರೆಂದರೆ ಅವರಿಗೂ, ನಕ್ಸಲರಿಗೂ ಏನು ವ್ಯತ್ಯಾಸ ಉಳಿಯುತ್ತದೆ? ನಮ್ಮ ಪ್ರಜಾತಂತ್ರ, ಕಾನೂನು, ನ್ಯಾಯಾಲಯ ಇವುಗಳನ್ನು ಕಾಪಾಡಬೇಕಿದ್ದರೆ ಪೊಲೀಸರೂ ನಕ್ಸಲರಂತೆ ಕೊಲ್ಲದಂತೆ ನೋಡಿ ಕೊಳ್ಳಬೇಕಲ್ಲವೇ.

ಪೊಲೀಸರೂ ಗಿರಿಜನರನ್ನು ಕೊಲ್ಲುತ್ತಾ ಹೋದರೆ ಮಲೆನಾಡಿನಲ್ಲಿ ಶಾಂತಿ ಎಂಬುದು ಉಳಿಯುತ್ತದೆಯೇ?

ಯಾವುದೇ ಎನ್‌ಕೌಂಟರ್ ನಡೆದಾಗ, ಪೊಲೀಸರು ಗುಂಡು ಹಾರಿಸಿದ್ದು ತಮ್ಮ ರಕ್ಷಣೆಗಾಗಿ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು ಎಂದು ನಮ್ಮ ಕಾನೂನು ಹೇಳುತ್ತದೆ. ಆದರೆ ಮೊನ್ನಿನ ಪ್ರಕರಣದಲ್ಲಿ ರಾಮೇಗೌಡ ಮತ್ತು ಇತರರಿಂದ ಪೊಲೀಸರಿಗೆ ಯಾವುದೇ ಪ್ರಾಣಾಪಾಯ ಇರಲಿಲ್ಲವಾದರೂ ಅವರನ್ನೆಲ್ಲ ಕೊಂದುಹಾಕಿದ್ದಾರೆ. ಶೇಷಪ್ಪಗೌಡನಂತೆ ಅವರೂ ಗಿರಿಜನರೇ. ಅವರನ್ನು ಕೊಂದಿದ್ದೇಕೆ ಎಂದು ಪ್ರಶ್ನಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಕರ್ತವ್ಯ. ಅದನ್ನು ಮಾಡುತ್ತಿದ್ದೇವೆ. ನೀವೂ ನಮ್ಮೊಂದಿಗೆ ಈ ಪ್ರಶ್ನೆ ಕೇಳುವುದರಲ್ಲಿ ದನಿ ಗೂಡಿಸಬೇಕಿದೆ."

ನಾನು ಹೇಳಿದ್ದೆಲ್ಲವನ್ನು ಅವರೆಲ್ಲ ಶಾಂತಿಯುತವಾಗಿ ಕೇಳಿದರಲ್ಲದೆ ಕೆಲವರು ತಲೆದೂಗಿಸಿದ್ದನ್ನು ಕಂಡು ನನಗೇ ಅಚ್ಚರಿಯಾಯಿತು! ಆದರೆ ಜೀವರಾಜ್‌ರವರ ಭಂಟ ತನ್ನ ಈ ಪ್ರತಿಭಟನಾ ಕಾರ್ಯಕ್ರಮ ಹೀಗೆ ವಿಫಲವಾಗಿದ್ದನ್ನು ಸಹಿಸಲಾಗದೇ ಹೋದ. ಆದ್ದರಿಂದ ಬೇರೆಯವರೆಲ್ಲಾ ಸುಮ್ಮನಿದ್ದರೂ, ಲಕ್ಷ್ಮೀನಾರಾಯಣ ಮತ್ತು ಈಶ ಮತ್ತೆ ಜೀಪುಗಳನ್ನು ಏರಿದರೂ ಆತ ಸುಮ್ಮನಾಗದೆ "ಗೌರಿ ಲಂಕೇಶ್‌ಗೆ ಧಿಕ್ಕಾರ" ಎಂದು ಕೂಗಲಾರಂಭಿಸಿದ. ನಮ್ಮ "ಮಾತುಕತೆ" ಮುಗಿದು, ಜೀಪ್ ಚಾಲು ಆಗಿ ಇನ್ನೇನು ಬಾಗಿಲು ಹಾಕಿಕೊಳ್ಳಬೇಕು... ಆಗ ಮತ್ತೊಬ್ಬ "ನೀವು ಸಂಘ ಪರಿವಾರದ ಬಗ್ಗೆ ಆರೋಪ ಮಾಡಿದ್ದೀರಿ. ಹೀಗೆ ಮಾತನಾಡುವುದಾದರೆ ನೀವು ಮುಂದೆ ಇಲ್ಲಿಗೆ ಬರಬಾರದು" ಎಂದ.

ನಾನು ನಕ್ಕು "ಇದು ನನ್ನ ರಾಜ್ಯ, ನನ್ನ ದೇಶ, ಎಲ್ಲಿಗೆ ಬೇಕಾದರೂ ನಾನು ಹೋಗುತ್ತೇನೆ" ಎಂದು ಹೇಳಿ ಬಾಗಿಲು ಎಳೆದುಕೊಂಡೆ.....

* * * * * *

ಮೊನ್ನೆ ಮೆಣಸಿನಹಾಡ್ಯದಲ್ಲಿ ರಾಮೇಗೌಡ ಮತ್ತು ಕಾವೇರಮ್ಮ ಎಂಬ ಗಿರಿಜನ ದಂಪತಿಗಳನ್ನು ಮತ್ತು ಅವರ ಸಂಬಂಧಿಕರಾಗಿದ್ದ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವಿರುದ್ಧ ಪ್ರಜಾಸತ್ತಾತ್ಮಕವಾಗಿಯೂ, ಅಹಿಂಸಾತ್ಮಕವಾಗಿಯೂ ಹೋರಾಡುತ್ತಿದ್ದ ಪರಮೇಶ್ ಹಾಗೂ ಸುಂದರೇಶ್‌ರವರನ್ನು ಕರ್ನಾಟಕ ರಾಜ್ಯ ಪೊಲೀಸರು ಅಮಾನುಷವಾಗಿ ಕೊಂದು ಹಾಕಿದ್ದಾರೆ.



ಗೃಹಮಂತ್ರಿ ಪ್ರಕಾಶರ ಹೇಳಿಕೆಗಳಲ್ಲಿನ ತಾರತಮ್ಯ ಪೊಲೀಸರೇ ಬೇರೆಬೇರೆ ಹೊತ್ತಿನಲ್ಲಿ ನೀಡಿದ ಮಾಹಿತಿ, ಕಾರ್ಯಾಚರಣೆಯು ನಡೆದ ರೀತಿ, ಸ್ಥಳೀಯರು ನೋಡಿದ್ದು, ಕೇಳಿದ್ದು ಎಲ್ಲವೂ ಇದೊಂದು ಬರ್ಭರ ಹತ್ಯೆ ಎಂಬುದನ್ನು ಸಾರಿ ಹೇಳುತ್ತಿವೆ. ಅದರಲ್ಲೂ ಪೊಲೀಸ್ ಅಧಿಕಾರಿಯೊಬ್ಬ ಪತ್ರಕರ್ತರೊಂದಿಗೆ ಮಾತನಾಡುತ್ತಾ "ನಕ್ಸಲ್ ಗೌತಮ್‌ಗಿಂತ ಆದಿವಾಸಿಗಳ ಪರವಾಗಿ ಹೋರಾಡುತ್ತಿದ್ದ ಪರಮೇಶ್ ತುಂಬಾ ಅಪಾಯಕಾರಿಯಾಗಿದ್ದ. ಆದ್ದರಿಂದ ಅವನನ್ನು ಕೊಲ್ಲಲೇಬೇಕಾಯಿತು" ಎಂದು ಹೇಳಿರುವುದು ಇವತ್ತು ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಎಂಥ ಶಿಕ್ಷೆ ಕಾದಿದೆ ಎಂಬುದನ್ನು ತೋರಿಸುತ್ತದೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಮೊನ್ನೆ ನಡೆದಿರುವ ನಕಲಿ ಎನ್‌ಕೌಂಟರ್, ಬರುವ ದಿನಗಳಲ್ಲಿ ಮಲೆನಾಡು ರಕ್ತದೋಕುಳಿಯನ್ನು ಕಾಣಲಿದೆ ಎಂಬುದರ ಮುನ್ಸೂಚನೆಯಾಗಿದೆ. ಯಾಕೆಂದರೆ, ಇಂತಹದ್ದೇ ಕೃತ್ಯಗಳನ್ನು ಶಂಕರ್ ಬದರಿಯವರು ವೀರಪ್ಪನ್‌ನನ್ನು ಸೆರೆಹಿಡಿಯಲು ಹೊರಟಾಗ ಅನುಸರಿಸಿ ಅಂದು ಮಲೆಮಾದೇಶ್ವರ ಬೆಟ್ಟಗಳಲ್ಲಿ ಅಪಾರ ರಕ್ತ ಚೆಲ್ಲಿದ್ದರು, ಅಮಾಯಕರನ್ನು ಕೊಂದಿದ್ದರು, ನಿರಪರಾಧಿಗಳ ಮೇಲೆ ಖೊಟ್ಟಿ ಕೇಸುಗಳನ್ನು ದಾಖಲಿಸಿ ಅವರೆಲ್ಲ ಹಲವಾರು ವರ್ಷಗಳ ಕಾಲ ಜೈಲಿನಲ್ಲಿ ಕೊಳೆಯುವಂತೆ ಮಾಡಿದ್ದರು. ಎಸ್‌ಟಿಎಫ್ ಕಮ್ಯಾಂಡರ್ ಆಗಿ ಬದರಿಯವರು ಕಳೆದ ಮೂರೂವರೆ ವರ್ಷಗಳ ದಾಖಲೆ ಇದು.

ಅವತ್ತು ವೀರಪ್ಪನಿಗೆ ಹೆದರಿಯೋ, ಅವಲಂಬಿತರಾಗಿಯೋ, ಅಸಹಾಯಕರಾಗಿಯೋ ಮಲೆಮಾದೇಶ್ವರ ಬೆಟ್ಟಗಳಲ್ಲಿನ ಜನ ಆತನಿಗೆ ಆಹಾರ ಸೇರಿದಂತೆ ಇತರೆ ನೆರವುಗಳನ್ನು ನೀಡುತ್ತಿದ್ದರು. ಆಗ ವೀರಪ್ಪನ್‌ನ ಇಂತಹ ಜಾಲವನ್ನು ಮಟ್ಟಹಾಕಲು ಬದರಿಯವರು ನೂರಾರು ಜನರನ್ನು ಬಂಧಿಸಿದ್ದರಲ್ಲದೆ, ಒಂದೇ ದಿನ ಸುಮಾರು ನಲವತ್ತು ಗಿರಿಜನರ ಹತ್ಯೆಗೂ ಕಾರಣರಾಗಿದ್ದರು. ಅಲ್ಲಿ ಅವರೆಂತಹ ಭಯದ ವಾತಾವರಣ ಸೃಷ್ಟಿಸಿದ್ದರೆಂದರೆ ಹೀಗೆ ಹತ್ಯೆಯಾದವರ ಶವಗಳನ್ನೂ ಅವರ ತಂದೆ-ತಾಯಿ, ಮನೆಯವರು ಪಡೆಯಲು ಮುಂದೆಬಂದಿರಲಿಲ್ಲ; ಎಲ್ಲಿ ಬದರಿಯವರ ಕೆಂಗಣ್ಣು ತಮ್ಮ ಮೇಲೆ ಬೀಳುತ್ತದೋ ಎಂಬ ಭೀತಿಯಿಂದ.

ಇಷ್ಟೆಲ್ಲ ಅನ್ಯಾಯ, ದೌರ್ಜನ್ಯ, ಕೊಲೆಗಳು ನಡೆದರೂ ಬದರಿಯವರ ಅವಧಿಯಲ್ಲಿ ವೀರಪ್ಪನ್ ಸಿಕ್ಕಿರಲಿಲ್ಲ. ಮಾತ್ರವಲ್ಲ, ಬದರಿಯವರು ಎಷ್ಟೇ ಆದಿವಾಸಿಗಳನ್ನು, ಗಿರಿಜನರನ್ನು ಬಂಧಿಸಿದರೂ ಆತನ ಗಂಧ ಸಾಗಾಟನೆ ವ್ಯವಹಾರ ನಿರಾತಂಕವಾಗಿ ಸಾಗಿತ್ತಲ್ಲದೆ, ಆತನನ್ನು ಹಿಡಿಯಲು ಹೋಗಿದ್ದ ಪೊಲೀಸರೂ ಗಂಧ ಸಾಗಿಸಲು ಹೋಗಿ ಸಿಕ್ಕಿಬಿದ್ದಿದ್ದರು. ಇದೆಲ್ಲದರಿಂದ ಆದದ್ದು ಏನೆಂದರೆ ವೀರಪ್ಪನ್ ಕಾರ್ಯಾಚರಣೆಗೆಂದು ಸರ್ಕಾರದ ತಿಜೋರಿಯಿಂದ ಕೋಟ್ಯಂತರ ರೂಪಾಯಿಗಳು ಹರಿದು ಹೋದದ್ದು.

ಅಂದಹಾಗೆ, ಬದರಿಯವರ ಅಧಿಕಾರಾವಧಿ ಸೇರಿದಂತೆ ಇತರೆ ಪೊಲೀಸರ ನೇತೃತ್ವದಲ್ಲಿ ನಡೆದ ದೌರ್ಜನ್ಯ, ಇತ್ಯಾದಿಗಳನ್ನು ಕುರಿತಂತೆ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವರವರ ಆಯೋಗ ನೀಡಿದ ವರದಿಯನ್ನು ನಮ್ಮ ಘನ ಸರ್ಕಾರ ಇವತ್ತಿಗೂ ಬಹಿರಂಗಪಡಿಸಿಲ್ಲವೆಂದರೆ ಅದಕ್ಕೆ ಮಾನವ ಹಕ್ಕುಗಳ ಬಗ್ಗೆ ಎಷ್ಟು ಕಾಳಜಿ ಇದೆ ಎಂದು ಗೊತ್ತಾಗುತ್ತದೆ. ಇದೆಲ್ಲವೂ ಸದ್ಯದಲ್ಲೇ ಮಲೆನಾಡಿನಲ್ಲೂ ಪುನರಾವರ್ತನೆಗೊಳ್ಳಲಿದೆ. ಏಕೆಂದರೆ ಬದರಿ ಸೇರಿದಂತೆ ಎಲ್ಲ ಪೊಲೀಸ್ ಅಧಿಕಾರಿಗಳಿಗೆ ಇವತ್ತು ಗೊತ್ತಿರುವ ತಂತ್ರ ಒಂದೇ: ಜನರನ್ನು ಮೌನವಾಗಿಸಲು ಅವರನ್ನು ಬೆದರಿಸುವುದು; ಅದಕ್ಕೆ ಬೆದರದಿದ್ದರೆ ಅವರನ್ನು ಕೊಂದು ಮೌನವಾಗಿಸುವುದು.

ಪ್ರಜಾಸತ್ತಾತ್ಮಕತೆ, ಅಹಿಂಸಾವಾದ ಎಂದೆಲ್ಲ ರಾಜೇಂದ್ರ, ಚೆನ್ನಿ ಮತ್ತು ಜಿ.ಕೆ. ಗೋವಿಂದರಾವ್‌ರಂತಹವರು ಎಷ್ಟೇ ಅರಚಾಡಿದರೂ, ನಮ್ಮ ಪೊಲೀಸರಿಗಂತೂ ಅವೆಲ್ಲ ಪುಸ್ತಕದಲ್ಲಿನ ಬದನೇಕಾಯಿ. ರಾಮೇಗೌಡ, ಕಾವೇರಮ್ಮ, ಪರಮೇಶ ಮತ್ತು ಸುಂದರೇಶ್‌ರವರ ಶವಗಳು ಅದನ್ನು ಸಾರಿ ಸಾರಿ ಹೇಳುತ್ತಿವೆ.

ನಮ್ಮ 'ಅಹಿಂಸಾವಾದಿಗಳು' ದಯಮಾಡಿ ಇದರತ್ತ ಗಮನಹರಿಸಬೇಕೆಂದು ವಿನಂತಿ.


-ಗೌರಿ ಲಂಕೇಶ್

ಕೃತಿಯನ್ನು ಸುಡಬಹುದು ಆದರೆ ಅದರಲ್ಲಿನ ಪದಗಳು ಹಾರಿಹೋಗುತ್ತವೆ -ಅಕಿಬಾ ಬೆನ್ ಜೋಸೆಫ್

ದೇವನಹಳ್ಳಿ: ದಲಿತ ಮಹಿಳೆಯ ರೇಪ್ ಅಂಡ್ ಮರ್ಡರ್

ಬೆಂಗಳೂರಿನ ಸೆರಗಿನಲ್ಲಿರುವ ದೇವನಹಳ್ಳಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯುತ್ತಿದೆ ಎಂದು ಹೆಮ್ಮೆಯಿಂದ ಅಲ್ಲಿನ ರಾಜಕಾರಣಿಗಳು ಬೀಗುತ್ತಿದ್ದಾರೆ. ಆದರೆ ಅದರ ಪಕ್ಕದಲ್ಲಿಯೇ ಇರುವ ಹಳ್ಳಿಗಳ ಬಡ ದಲಿತ ಜನರು ಮಾತ್ರ ಇನ್ನೂ ಮಧ್ಯಯುಗದ ದಬ್ಬಾಳಿಕೆಯಡಿಯಲ್ಲಿಯೇ ಬದುಕುತ್ತಿರುವುದು ಪ್ರಾಯಶಃ ಈ ರಾಜಕೀಯ ಪುಢಾರಿಗಳಿಗೆ ಕಾಣಿಸುತ್ತಿಲ್ಲ. ಇಂತಹ ದಬ್ಬಾಳಿಕೆಯ ಲೇಟೆಸ್ಟ್ ಬಲಿಪಶು ಎಂದರೆ ಮುನಿರತ್ನಮ್ಮ ಎಂಬ ದಲಿತ ಮಹಿಳೆ. ಆಕೆಯನ್ನು ರೇಪ್ ಮಾಡಿ ನಂತರ ಕೊಂದು ಹಾಕಿದ ಕಾಮುಕ ರಾಕ್ಷಸ ಅದೇ ಗ್ರಾಮದ ಕಾಂಗ್ರೆಸ್ ಪುಢಾರಿ ರೇಂಜರ್ ಚನ್ನಪ್ಪ.

ಅಂಗವಿಕಲ ಕುಟುಂಬ




ಚಂದ್ರಣ್ಣ

ದೇವನಹಳ್ಳಿ ತಾಲ್ಲೂಕಿನ ಚಿಕ್ಕ ತತ್ತಮಂಗಲ ಗ್ರಾಮದ ಅತ್ಯಂತ ಬಡ ಕುಟುಂಬಗಳಲ್ಲಿ ನಾಯಕ ಜಾತಿಗೆ ಸೇರಿದ ಮುನಿರತ್ನಮ್ಮನ ಕುಟುಂಬವೂ ಒಂದು. ಈಕೆಯ ಗಂಡ ತಿರುಮಲಪ್ಪ ಶಾಶ್ವತ ಅಂಗವಿಕಲ. ಎಂಥ ದುರಂತ ನೋಡಿ, ಈ ದಂಪತಿಗಳಿಗೆ ಇಬ್ಬರು ಮಕ್ಕಳಿದ್ದರೆ, ಅವರೂ ಅಂಗವಿಕಲರೆ. ಜತೆಗೆ ಕಿತ್ತು ತಿನ್ನುವ ಬಡತನ ಬೇರೆ. ಈ ಅಂಗವಿಕಲ ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಅನಿವಾರ್ಯವಾಗಿ ಮುನಿರತ್ನಮ್ಮನೇ ಹೊತ್ತುಕೊಂಡಿದ್ದಳು. ತನ್ನ ಮತ್ತು ಕುಟುಂಬದ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಆಕೆ ತಮ್ಮದೇ ಗ್ರಾಮದ ಎಸ್ಟೇಟ್ ಮಾಲಿಕ ಹಾಗೂ ಕಾಂಗ್ರೆಸ್ ಪುಢಾರಿ ರೇಂಜರ್ ಚನ್ನಪ್ಪನ ಎಸ್ಟೇಟ್‌ನಲ್ಲಿ ಕಳೆದ ಐದಾರು ವರ್ಷಗಳಿಂದ ದುಡಿಯುತ್ತಿದ್ದಳು. ವಾಸ್ತವದಲ್ಲಿ ಜೀತಕ್ಕಿದ್ದಳು ಎಂದರೇನೇ ಸರಿಹೋಗುತ್ತೆ. ಏಕೆಂದರೆ, ಹಾಗಿತ್ತು ಅವಳ ಪರಿಸ್ಥಿತಿ. ಇವಳ ಜೊತೆಗೆ ಅದೇ ಊರಿನ ಚಂದ್ರಮ್ಮ, ಪಾಪಮ್ಮ ಮತ್ತು ದೇವರಾಜ್ ಎಂಬುವವರೂ ಕೂಡ ಜೀತಕ್ಕಿದ್ದರು.

ರೇಪ್ ಅಂಡ್ ಮರ್ಡರ್ ಮಾಡಿದ

ತನ್ನ ಮತ್ತು ಕುಟುಂಬದ ಹೊಟ್ಟೆಪಾಡಿಗಾಗಿ ಎಸ್ಟೇಟ್‌ನಲ್ಲಿ ಕೆಲಸಕ್ಕೆ ಸೇರಿದ ಮುನಿರತ್ನಮ್ಮನ ಬದುಕು ಮಾಲಿಕ ರೇಂಜರ್ ಚನ್ನಪ್ಪನ ವಿಕೃತ ಕಾಮಕ್ಕೆ ಬಲಿಯಾಗಿ ಛಿದ್ರಛಿದ್ರವಾಗಿ ಹೋಯಿತು. ಮೊನ್ನೆ ಜೂನ್ 30ರ ಸಂಜೆ ಐದೂವರೆ ಹೊತ್ತಿನಲ್ಲಿ ರೇಂಜರ್ ಚನ್ನಪ್ಪ ಆಕೆಯನ್ನು ರೇಪ್ ಮಾಡಿದ್ದಾನೆ. ಆ ಸಂದರ್ಭದಲ್ಲಿ ಆಕೆ ಕಿರುಚಾಡಿದ್ದಾಳೆ. ಇದನ್ನು ಕೇಳಿದ ರೇಂಜರ್ ಚನ್ನಪ್ಪನ ಹೆಂಡತಿ ಕೃಷ್ಣಮ್ಮ ಮತ್ತು ಮಗ ನಾಗರಾಜ್ ಓಡಿಬಂದಿದ್ದಾರೆ. ಆದರೆ, ಚಾಣಾಕ್ಷ ಚನ್ನಪ್ಪ ತಪ್ಪನ್ನೆಲ್ಲಾ ಮುನಿರತ್ನಮ್ಮನ ಮೇಲೆಯೇ ಹೊರಿಸಿದ್ದಾನೆ. ತಕ್ಷಣ, ಚನ್ನಪ್ಪ ಅವನ ಹೆಂಡತಿ ಮತ್ತು ಮಗ- ಮೂವರೂ ಸೇರಿ ಅತ್ಯಾಚಾರಕ್ಕೊಳಗಾದ ಮುನಿರತ್ನಮ್ಮನ ಮೇಲೆಯೇ ಹಲ್ಲೆಗಿಳಿದಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಆಕೆಯನ್ನ ಆಸ್ಪತ್ರೆಗೆ ಸೇರಿಸಿದರೆ ತಾವೇ ಜೈಲಿಗೆ ಹೋಗಬೇಕಾಗುತ್ತದೆಂದು ಎಣಿಸಿದ ಈ ಮೂವರು ಆಕೆಯನ್ನು ಅಲ್ಲಿಯೇ ಕೊಲೆಮಾಡಿ, ಶವವನ್ನು ಒಂದು ವಿದ್ಯುತ್ ಕಂಬದಡಿಯಲ್ಲಿ ಹಾಕಿ, ಒಂದು ವಿದ್ಯುತ್ ವೈರನ್ನು ತಂದು ಶವಕ್ಕೂ ಮತ್ತು ವಿದ್ಯುತ್ ತಂತಿಗೂ ಸಂಪರ್ಕ ಕಲ್ಪಿಸಿ, ವಿದ್ಯುತ್ ಸ್ಪರ್ಶದಿಂದ ಸತ್ತು ಹೋಗಿದ್ದಾಳೆ ಎಂದು ಪ್ರಚಾರ ಮಾಡಿದರು.



ಎಸ್ಐ ಗೋಪಿನಾಥ್

ಸುದ್ದಿ ತಿಳಿದಿದ್ದೇ ಜನ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದರು. ರೇಂಜರ್ ಚನ್ನಪ್ಪ ಬಂದವರಿಗೆಲ್ಲ ಕರೆಂಟ್ ಹೊಡೆದು ಸತ್ತಳು ಎಂದೇ ಹೇಳುತ್ತಿದ್ದ. ಆದರೆ ಜನ ಇವನ ಹರಿಕಥೆಯನ್ನು ನಂಬಬೇಕಲ್ಲ, ಚನ್ನಪ್ಪನ ಬಗ್ಗೆ ಚೆನ್ನಾಗಿ ಗೊತ್ತಿದ್ದ ಊರಿನವರು ಅವನೇ ಕೊಲೆ ಮಾಡಿದ್ದಾನೆ ಎಂದು ಶವದ ಎದುರುಗಡೆಯೇ ಪ್ರತಿಭಟನೆಗಿಳಿದುಬಿಟ್ಟರು. ಸುದ್ದಿ ವಿಜಯಪುರ ಪೊಲೀಸ್ ಠಾಣೆಗೂ ಮುಟ್ಟಿತು. ಎಸ್ಐ. ಗೋಪಿನಾಥ್ ಬಂದವನೇ ಸೀದಾ ರೇಂಜರ್ ಚನ್ನಪ್ಪನನ್ನು ಭೇಟಿ ಮಾಡಿ ಅದೆಷ್ಟು ಪ್ರಸಾದ ತಿಂದನೋ ಗೊತ್ತಿಲ್ಲ, ಪ್ರತಿಭಟನೆ ನಡೆಸುತ್ತಿದ್ದ ಜನರ ಬಳಿ ಬಂದು "ಇದೊಂದು ಅಸಹಜ ಸಾವು. ಕರೆಂಟು ಹೊಡೆದು ಸತ್ತಿದ್ದಾಳೆ" ಎಂದು ಫರ್ಮಾನು ಹೊರಡಿಸಿಬಿಟ್ಟ. ಜನ ಅವನ ಮಾತಿಗೂ ಸೊಪ್ಪು ಹಾಕದೆ ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದಾಗ ಎಸ್ಐ ಗೋಪಿನಾಥ್ "ಹೆಣವನ್ನು ಇಲ್ಲಿಂದ ತೆಗೆಯದಿದ್ದರೆ ಲಾಠಿ ಚಾರ್ಜ್ ಮಾಡಿಸುತ್ತೇನೆ" ಎಂದು ಹೂಂಕರಿಸಿದ. ಮುನಿರತ್ನಮ್ಮನ ಗಂಡ ತಿರುಮಲಪ್ಪನಿಂದ ಬಲವಂತವಾಗಿ ಸಹಿ ಪಡೆದು ಶವಪರೀಕ್ಷೆ ನಡೆಸದೇ ಶವಸಂಸ್ಕಾರಕ್ಕೆ ಅಣಿಯಾಗಿದ್ದ ಎಸ್ಐಗೆ ಜನ ಅವಕಾಶ ಕೊಡದೆ ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಕೊನೆಗೆ ಮಣಿದ ಎಸ್ಐ ಕಾಟ ಚಾರಕ್ಕೆಂಬಂತೆ ತಿರುಮಲಪ್ಪನಿಂದ ಒಂದು ಕಂಪ್ಲೇಂಟ್ ಬರೆಸಿಕೊಂಡು ಜುಲೈ ಒಂದರಂದು ಅಸಹಜ ಸಾವು ಎಂತಲೇ ಸಿಆರ್‌ಪಿಸಿ 174 (ಸಿ) ಪ್ರಕಾರ ಕೇಸು ದಾಖ ಲಿಸಿಕೊಂಡ (ಸಿ.ಆರ್. 08/07). ಅಲ್ಲದೆ ತಾನು ದಾಖಲಿಸಿ ಕೊಂಡ ಕೇಸಿಗೆ ಪೂರಕವಾಗುವಂತೆ ಶವ ಪರೀಕ್ಷೆಯ ವರದಿ ಕೊಡುವಂತೆ ವೈದ್ಯರಿಗೂ ತಾಕೀತು ಮಾಡಿದ್ದಾ

ವಿವಿಧ ಪ್ರತಿಭಟನೆಗಳ ಪರಿಣಾಮವಾಗಿ ಪ್ರಕರ ಬೇರೊಂದು ತಿರುವು ಪಡೆದುಕೊಂಡ ತನಗೆ ಮುಳುವಾಗಬಹುದೆಂದು ಆಲೋ ಚಿಸಿ ರೇಂಜರ್ ಚನ್ನಪ್ಪನಿಂದ ಒಂದೂವ ಲಕ್ಷ ಪರಿಹಾರ ಕೊಡಿಸುವುದಾಗಿ ಈಗ ಹೊಸ ವರಸೆ ಶುರುಮಾಡಿಕೊಂಡಿದ್ದಾನೆ ಕೊನೆಗೆ ಇದೂ ಗೊತ್ತಾಗಿ ವಿವಿಧ ಸಂಘಟನೆಗಳು ಜುಲೈ 5ರಂದು ದೇವನ ಹಳ್ಳಿ ಜಿಲ್ಲಾ ದಂಡಾಧಿಕಾರಿಗಳ ಕಚೇರಿ ಎದುರು ಮತ್ತೆ ಪ್ರತಿಭಟನೆ ನಡೆಸಿದ ಹಿರಿಯ ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರಿಗೆ ಪೊಳ್ಳು ಭರವಸೆ ಗಳನ್ನು ನೀಡುತ್ತಾ ಕಣ್ಣೊರೆಸುವ ನಾಟಕ ವನ್ನೂ ಮಾಡುತ್ತಿದ್ದಾರೆ.

ಆದರೆ ವಿಚಿತ್ರವೆಂದರೆ, ಎರಡು ದಿನಗಳ ಕಾಲ ನಡೆದ ಈ ಪ್ರತಿಭಟನೆಯ ಬಗ್ಗೆ ಮಾಧ್ಯಮಗಳಿಗೆ ಮುಂಚಿತವಾಗಿ ತಿಳಿಸಿದರೂ ವರದಿ ಮಾಡಲಿಲ್ಲ ದಲಿತ ಮಹಿಳೆಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದರೂ ಖುದ್ದು ದಲಿತನಾದ ಸ್ಥಳೀಯ ಶಾಸಕ ಅದರ ವಿರುದ್ಧ ಮಾತನಾಡಲಿಲ್ಲ; ಜನರು, ವಿವಿಧ ಸಂಘಟನೆಗಳು ಈ ಕೊಲೆಯನ್ನು ಪ್ರತಿಭಟಿಸಿ ಧರಣಿ ನಡೆಸುತ್ತಿದ್ದರೆ ಸೌಜನ್ಯಕ್ಕೂ ಅಲ್ಲಿಗೆ ಬರಲಿಲ್ಲ ಎರಡು ಬಾರಿ ತನ್ನನ್ನು ಗೆಲ್ಲಿಸಿದ್ದಕ್ಕಾಗಿ ಜನರಿಗೆ ಅವನು ಕೊಡುತ್ತಿರುವ ಉಡುಗೊರೆ ಇದು.

–ನಾಗರಾಜ್

ಮರುಕಳಿಸಿದ ದಲಿತರ ಮೇಲಿನ ದೌರ್ಜನ್ಯ; ಚಂದಾಪುರದಲ್ಲಿ ಮತ್ತೊಂದು ಘಟನೆ

ಭಾರತದ ಕೆಲವು ಮಹಾನುಭಾವರು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮೇಲಕ್ಕೇರುತ್ತಿರುವಂತೆಯೇ, ಭಾರತದ ನೆಲದಲ್ಲಿ ಹುದುಗಿಯರ ಜನರ ನೋವುಗಳು, ಕಷ್ಟಗಳು ಇನ್ನಷ್ಟು ಆಳಕ್ಕಿಳಿಯುತ್ತಿವೆ. ತಮ್ಮ ರಟ್ಟೆಗಳಿಂದಲೇ ಈ ದೇಶವನ್ನು ಕಟ್ಟಿರುವ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಪ್ರಜಾಪ್ರಭುತ್ವವೇ ಸೋಲಿನೆಡೆಗೆ ಸಾಗುತ್ತಿರುವ ಮುನ್ಸೂಚನೆಯೇನೋ ಎಂಬ ಅನುಮಾನ ಹುಟ್ಟಿಸುತ್ತಿವೆ. ಈ ನೋವಿನ ಅಧ್ಯಾಯದ ಮತ್ತೊಂದು ಪುಟ ಆನೇಕಲ್ ತಾಲ್ಲೂಕಿನ ಚಂದಾಪುರ. ಇದು ನಮ್ಮ ದೇಶದ ಪ್ರಖ್ಯಾತ ಐ.ಟಿ. ಎಲೆಕ್ಟ್ರಾನಿಕ್ ಸಿಟಿಯಿಂದ ಕೇವಲ 10 ಕಿಲೋಮೀಟರ್ ದೂರದಲ್ಲಿ ಹೊಸೂರು ರಸ್ತೆಯ ಮೇಲಿದೆ. ಇದೇ ರಸ್ತೆಯ ಮೇಲೆ ಅತ್ಯಾಧುನಿಕ ಎಸಿ ವೋಲ್ವೋ ಬಸ್ಸುಗಳು ಬಿಳಿ ಕಾಲರ್‌ಗಳನ್ನು ಒಯ್ಯುವುದು, ಇದೇ ರಸ್ತೆಯ ಮೇಲೆ ವಿದೇಶಿ ತಂತ್ರಜ್ಞಾನದ ನೆರವು ಪಡೆದು 13 ಕಿ.ಮೀ. ಉದ್ದದ ಫ್ಲೈ ಓವರ್ ಕಟ್ಟಲಾಗುತ್ತಿರುವುದು.



ಗಲಾಟೆಯಲ್ಲಿ ನೆಲಕ್ಕೆ ಬಿದ್ದ ಅಂಬೇಡ್ಕರ್ ಫೋಟೋ


ಚಂದಾಪುರದ ಸ್ಥಳೀಯ ಯುವಕರು ಮತ್ತು ಸಮುದಾಯದ ಹಿರಿಯರು, ಏಪ್ರಿಲ್ 22 ರಂದು ಸುತ್ತಮುತ್ತಲಿನ ಗ್ರಾಮಗಳನ್ನು ಒಳಗೊಂಡು ದೊಡ್ಡಮಟ್ಟದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವ ತೀರ್ಮಾನ ಮಾಡಿದರು. ಸಾವಿರಾರು ವರ್ಷಗಳಿಂದ ದಲಿತರ ಮೇಲೆ ನಡೆದಿರುವ ಶೋಷಣೆ, ದೌರ್ಜನ್ಯ ಅವಮಾನಗಳಿಂದ ಬಿಡುಗಡೆ ಹೊಂದುವ ಆಶಯದ ಪ್ರತೀಕವಾಗಿಯೇ ಡಾ. ಅಂಬೇಡ್ಕರ್‌ರವರ ಜಯಂತಿ ಎಲ್ಲೆಡೆ ಆಚರಿಸಲ್ಪಡುತ್ತದೆ. ಈ ಕಾರ್ಯಕ್ರಮದ ತಯಾರಿ ಆರಂಭಿಸಿದ ಸ್ಥಳೀಯರು ಏಪ್ರಿಲ್ 14 ರಿಂದಲೇ ನಾರಾಯಣಘಟ್ಟ ಸರ್ಕಲ್, ಚಂದಾಪುರ ಸರ್ಕಲ್, ಮುತ್ತಾನಲ್ಲೂರ್ ಸರ್ಕಲ್ ಮತ್ತಿತರ ಕಡೆಗಳಲ್ಲಿ ಅಂಬೇಡ್ಕರ್ ಕಟೌಟ್‌ಗಳನ್ನು ಹಾಕಿದರು. ದಲಿತರು ಜೋರಾಗಿ ಅಂಬೇಡ್ಕರ್ ಜಯಂತಿ ಮಾಡುವ ತಯಾರಿಯಲ್ಲಿದ್ದಾರೆಂದು ತಿಳಿದಾಗಿನಿಂದಲೇ ಅದರ ವಿರುದ್ಧ ಕೆಂಡ ಕಾರುತ್ತಿದ್ದ ರವಿರೆಡ್ಡಿ ಮತ್ತಾತನ ಮೇಲ್ಜಾತಿ ಪಡೆ, ದಿನಾಂಕ 15 ರಂದು ಮುತ್ತಾನಲ್ಲೂರ್ ಸರ್ಕಲ್‌ನಲ್ಲಿ ಹಾಕಿದ್ದ ಕಟೌಟ್‌ನ್ನು ವಿನಾಕಾರಣ ಮುರಿದು ಹಾಕಿದರು.

ಇದು ತಮಗೆ ನೀಡಿದ ಎಚ್ಚರಿಕೆಯೆಂಬುದನ್ನು ತಿಳಿದರೂ ಜಗ್ಗದೆ ದಲಿತರು, ಈ ಕುರಿತು ಅಂದೇ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ದೂರೊಂದನ್ನು ದಾಖಲಿಸಿ, ಯೋಜನೆಯಂತೆ ಏಪ್ರಿಲ್ 22 ರಂದು ವಿಜೃಂಭಣೆಯಿಂದ ಅಂಬೇಡ್ಕರ್ ಜಯಂತಿ ಆಚರಿಸಿದರು. ಅಂದಿನಿಂದ ಅವರಿಗೆ ರವಿರೆಡ್ಡಿ ಪಡೆಯ ಕಾಟ ಬಹಿರಂಗವಾಗಿಯೇ ಆರಂಭವಾಯಿತು. ಸಮೀಪದ ರಾಮಸಾಗರದಲ್ಲಿ ರೆಡ್ಡಿಗಳು ಪ್ರಬಲರಾಗಿದ್ದು, ನಾರಾಯಣಘಟ್ಟಕ್ಕೆ ರಾಮಸಾಗರದ ಮೂಲಕವೇ ಹಾದು ಹೋಗಬೇಕಾದ್ದರಿಂದ, ಆ ರಸ್ತೆಯಲ್ಲಿ ದಲಿತರು ಓಡಾಡುವಾಗೆಲ್ಲಾ ಜಾತಿ ಹೆಸರಲ್ಲಿ ನಿಂದಿಸುವುದು, ಹೀಯಾಳಿಸುವುದು, ಕಿರುಕುಳ ನೀಡುವುದು ಆರಂಭವಾಯಿತು.

ಸಣ್ಣಪುಟ್ಟ ವಿಷಯಗಳಿಗೂ ಜಗಳಗಳಾಗುವಂಥ ಉದ್ರೇಕದ ದ್ವೇಷದ ವಾತಾವರಣ ನಿರ್ಮಾಣವಾಯಿತು. ಹೀಗೆ ಹೇರ್‌ಕಟಿಂಗ್ ಸಲೂನ್‌ನಲ್ಲಿ ಸಣ್ಣ ವಿಷಯಕ್ಕೆ ದಲಿತ ಯುವಕರಾದ ವಿಜಯ ಕುಮಾರ್ ಮತ್ತು ರಾಜೇಶ್ ಹಾಗೂ ಹಿಂದುಳಿದ ವರ್ಗದ ಪ್ರಶಾಂತ್ ರೆಡ್ಡಿ ನಡುವೆ ಜುಲೈ 7 ರಂದು ಬಿರುಸಿನ ವಾಗ್ವಾದ ನಡೆದಿದ್ದು ಎಲ್ಲಿ ಈ ಜಗಳ ಮುಂದುವರೆಯುತ್ತದೋ ಎಂದು ಆತಂಕಗೊಂಡ ಲಕ್ಷ್ಮಣ್ ಮತ್ತು ರಾಮಚಂದ್ರಪ್ಪ ಎಂಬ ನಾರಾಯಣಘಟ್ಟದ ಹಿರಿಯ ದಲಿತರು, ರೆಡ್ಡಿ ಜನಾಂಗದ ಹಿರಿಯರಾದ ಶಿವರಾಮರೆಡ್ಡಿ ಹಾಗೂ ವೆಂಕಟೇಶ್ ರೆಡ್ಡಿ ಅವರೊಂದಿಗೆ ಮಾತುಕತೆ ನಡೆಸಿ ಸಂಧಾನ ಏರ್ಪಡಿಸಿದರು.

ಆದರೆ ಈ ಸಂಧಾನದ ಹೊರತಾಗಿಯೂ ಮಾರನೇಯ ದಿನವೇ ತನ್ನನ್ನು ಹೊಡೆಯಲು ಅಟ್ಟಿಸಿಕೊಂಡು ಬಂದ ರೆಡ್ಡಿ ಪಟಾಲಂನಿಂದ ತಪ್ಪಿಸಿಕೊಳ್ಳಲು ದಲಿತ ಯುವಕ ವಿಜಯಕುಮಾರ್ ನಾರಾಯಣಘಟ್ಟದ ಸಮೀಪದ ದಲಿತರ ಮನೆಯೊಂದಕ್ಕೆ ನುಗ್ಗಿದ್ದಾನೆ. ಆಗ ಆ ಗುಂಪು ಮನೆಯ ಮುಂದೆಯೇ ಗಲಾಟೆ ಮಾಡಿದೆ. ಬೆದರಿಕೆ ಹಾಕುತ್ತಾ ಚೀರಾಡುತ್ತಿದ್ದ ಆ ಗುಂಪಿನ ಮುಂದೆ ಹಾಜರಾದ ರಾಮಚಂದ್ರಪ್ಪನವರು ಅವರನ್ನೆಲ್ಲ ಸಮಾಧಾನ ಪಡಿಸಿ ಕಳಿಸಲು ಪ್ರಯತ್ನಿಸಿದರು. ಆದರೆ ಅವರೊಂದಿಗೂ ಜಗಳವಾಡಿದ ಗುಂಪು ಬಹಳಷ್ಟು ಹೊತ್ತಿನವರೆಗೂ ಅಲ್ಲಿಂದ ಹೋಗಲಿಲ್ಲ. ಅವರು ಹೊರಟ ಕೂಡಲೇ ಲಕ್ಷ್ಮಣ್ ಮತ್ತಿತರರು ಅತ್ತಿಬೆಲೆ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದರು.

ಈ ಘಟನೆಯ ನಂತರ ಇಡೀ ಪ್ರಕರಣ ಗಂಭೀರ ತಿರುವನ್ನು ಪಡೆದುಕೊಂಡಿದ್ದು ರವಿರೆಡ್ಡಿ ಮತ್ತು ಅವನ ಪಡೆ ಇದಕ್ಕೆ ಕೈಹಾಕಿ ದಲಿತರ ಮೇಲೆ ವ್ಯವಸ್ಥಿತ ದಾಳಿ ನಡೆಸುವ ಯೋಜನೆ ಹಾಕಿದಾಗ. ಟಾಟಾ ಸುಮೋ, ಬೈಕುಗಳಲ್ಲಿ ಗುಂಪು ಕಟ್ಟಿಕೊಂಡು ದಲಿತರ ಏರಿಯಾಗಳಲ್ಲಿ ತಿರುಗಾಡಲಾರಂಭಿಸಿದ ರವಿರೆಡ್ಡಿ ದಲಿತರ ಮೇಲೆ ಎಗರಾಡಲಾರಂಭಿಸಿದ. ಇಂತಹ ಪ್ರಕರಣಗಳ ಬಗ್ಗೆ ದೂರು ಕೊಡಲು ನಾರಾಯಣಘಟ್ಟದ ಲಕ್ಷ್ಮಣ್, ಮುರಳಿ, ಮುತ್ತಾನಲ್ಲೂರು ಜಯರಾಂ ಮತ್ತಿತರರು ಹೋಗಿದ್ದಾಗ ರಾತ್ರಿ 7.30 ರ ಸುಮಾರಿ ಸುಮೋ ಮತ್ತು ಬೈಕ್‌ಗಳಲ್ಲಿ ಬಂದ ರವಿರೆಡ್ಡಿ ಗ್ಯಾಂಗ್ ರಾಮಚಂದ್ರಪ್ಪ ಮನೆಯನ್ನು ಸುತ್ತುವರೆದಿದೆ. ಆಗ ಕುಟುಂಬದವರನ್ನು ಬೇರೆಡೆ ಕಳಿಸಿ, ಮನೆ ಮುಂದಿನ ತೋಪಿನಲ್ಲಿ ರಾಮಚಂದ್ರಪ್ಪ ಅಡಗಿಕೊಂಡಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದ್ದನ್ನು ಕಂಡ ರವಿರೆಡ್ಡಿ ಗ್ಯಾಂಗ್ ಮನೆಯ ಕಿಟಕಿ ಬಾಗಿಲುಗಳನ್ನು ಒಡೆದು ಮನೆ ನುಗ್ಗಿದ್ದಾರೆ. ಟೀವಿ, ಶೋಕೇಸ್, ಪಲ್ಸರ್ ಗಾಡಿ ಎಲ್ಲವನ್ನು ಒಡೆದು ಹಾಕಿ, ಒಡವೆಗಳು ಮತ್ತು 60 ಸಾವಿರ ಚೀಟಿ ಹಣವನ್ನೂ ದೋಚಿದ್ದಾರೆ. ದೇವರ ಫೋಟೋಗಳ ನಡುವೆ ಇದ್ದ ಅಂಬೇಡ್ಕರ್ ಫೋಟೋವನ್ನು ಪುಡಿಪುಡಿ ಮಾಡಿದ್ದಾರೆ.



ಗಲಾಟೆಯಲ್ಲಿ ಚಿಂದಿಯಾದ ಅಂಗಡಿ

ಅಲ್ಲಿಂದ ಹೊರಟ ರವಿರೆಡ್ಡಿ ಪಡ ಮುತ್ತಾನಲ್ಲೂರ ಜಯರಾಂ ಮನೆಗೆ ನುಗ್ಗಿ, ಅವರ 52 ವರ್ಷದ ತಂ ಮುನಿಯಾಲಪ್ಪನವರ ಮೇಲೆ ಲಾಂಗ್‌ನಿಂದ ದಾ ನಡೆಸಿದೆ. ಸ್ವಲ್ಪದರಲ್ಲೇ ಬಚಾವಾದ ಅವರು ಹತ್ತಿರ ತೋಟದೊಳಗೆ ಓಡಿ ಪ್ರಾಣ ಉಳಿಸಿಕೊಂಡಿದ್ದಾರೆ ಅವರ ಅಂಗಡಿ, ಟಿವಿಎಸ್ ಬೈಕು, ಲಗೇಜ್ ಸಾಗಿಸು ಮಿನಿಡೋರ್ ಇತ್ಯಾದಿ ಎಲ್ಲವನ್ನೂ ಧ್ವಂಸ ಮಾ 20 ಸಾವಿರ ರೂ. ದೋಚಿ ಪರಾರಿ ಯಾಗಿದೆ ರವಿರೆ ಗ್ಯಾಂಗ್. ಅಲ್ಲಿಂದ ಹೊರಟು ಹಳೇ ಚಂದಾಪುರ ಗೋವಿಂದಪ್ಪನವರ ಮನೆ ಯಲ್ಲಿಯೋ ಇಂಥದ್ದೇ ದಾಂಧಲೆಯನ್ನು ನಡೆಸಿದೆ. ಪಕ್ಕದಲ್ಲಿ ಚಿಕ್ಕ ಗೂಡಂಗ ಇಟ್ಟುಕೊಂಡಿದ್ದ ಗೌರಮ್ಮ ಎಂಬುವರ ಮೇಲೆಯು ಕಾರಣವೇ ಇಲ್ಲದೆ ಹಲ್ಲೆ ನಡೆಸಿ ಅವರ ಮಂ ಒಡೆದು ಹೋಗುವಂತೆ ಹೊಡೆದಿದ್ದಾರೆ. ಅವರ ಜೀವನಾ ಧಾರವಾಗಿದ್ದ ಸಣ್ಣ ಗೂಡಂಗಡಿ ಪೂರ್ಣ ಧ್ವಂ ಗೊಂಡಿದೆ. ಮುಂದೆ ಸರ್ಕಲ್‌ನಲ್ಲಿ ನಿಂತಿದ್ದ ಸುರೇ ಎಂಬ ಹುಡುಗನ ಎರಡೂ ಕೈಗೆ ಮಚ್ಚಿನಿಂ ಹೊಡೆದು ಗಾಯಗೊಳಿಸಿದ್ದಾರೆ. ರಾಜಪ್ಪ ಎಂಬ ವರ ಅಂಗಡಿಗೆ ನುಗ್ಗಿ ಅವರಿಲ್ಲದ ಕಾರಣ, ಅವ ತಂಗಿಯನ್ನು ಬೆದರಿಸಿ, ಎಲ್ಲವನ್ನೂ ನಾಶ ಮಾ ಅವರ ಬೈಕನ್ನೂ ರಾಡುಗಳಿಂದ ಒಡೆದಿದ್ದಾರೆ. ಅಲ್ಲಿಂ ಮುಂದೆ ಸಾಗಿ ರಂಗನಾಥ್ ಮತ್ತು ರಾಡುಗಳಿಂ ಒಡೆದಿದ್ದಾರೆ. ಅಲ್ಲಿಂದ ಮುಂದೆ ಸಾಗಿ ರಂಗನಾಥ ಮತ್ತು ಗೋಪಾಲ್ ಎಂಬುವರ ಮೇಲೆ ಮಾರಣಾಂತಿ ಹಲ್ಲೆ ನಡೆಸಿ, ಅವರು ಆಸ್ಪತ್ರೆ ಸೇರುವಂತೆ ಮಾಡಿದ್ದಾ

(13 ನೇ ಪುಟಕ

ನಂದಗುಡಿಗೆ ಕೈಯಿಟ್ಟರೆ ಕಾಲು ಮುರೀತೀವಿ!

ಸರ್ಕಾರದ ವಿರುದ್ಧ ರೈತರ ಆಕ್ರೋಶ

ಹೊಟ್ಟೆಗೆ ಹಿಟ್ಟಿಲ್ಲ ಗೋಮಾಳದ ಜಮೀನಾದ್ರೂ ಮಂಜೂರು ಮಾಡಿ ಅಂತ ಹತ್ತು ವರ್ಷದಿಂದ ಸರ್ಕಾರಕ್ಕೆ ಅರ್ಜಿ ಕೊಡ್ತಾನೆ ಇದ್ದೀವಿ. ಈಗ ಅದೇ ಜಮೀನನ್ನು ಯಾರೋ ಬಾಂಬೆ ಪಾರ್ಟಿಗೆ ಬಿಟ್ಟಿಯಾಗಿ ಕೊಡ್ತಾರಂತೆ. ಇದು ಯಾವ ನ್ಯಾಯ? ಬಡವನಿಗೊಂದು ಕಾನೂನು ದುಡ್ಡಿದ್ದವನಿಗೆ ಇನ್ನೊಂದು ಕಾನೂನಾ?

ಹಾಗೆಂದು ಈ ವರದಿಗಾರನ ಮುಂದೆ ಕಿಡಿಕಾರಿದ್ದು ಹಿಟ್ಟಸಂದ್ರದ ದಲಿತ ಯುವಕ ಸೀನಪ್ಪ, ನಂದಗುಡಿ ಹೋಬಳಿಯ ಹಿಟ್ಟಸಂದ್ರ, ಶಿವನಾಪುರ, ನೆಲವಾಗಲು, ದೊಡ್ಡಕಳಗೆರೆ ಮುಂತಾದ ಹಳ್ಳಿಗಳನ್ನು ಸುತ್ತಿದ ಈ ವರದಿಗಾರನಿಗೆ ಅಲ್ಲಿನ ಪ್ರತಿ ದಲಿತರ ಕೇರಿಯಲ್ಲೂ ಇಂಥದ್ದೇ ಪ್ರಶ್ನೆಗಳು ಎದುರಾದವು. ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿಯ ಹನ್ನೆರಡೂವರೆ ಸಾವಿರ ಎಕರೆಗಳಷ್ಟು ವಿಶಾಲ ಭೂಮಿಯನ್ನು SKIL ಕಂಪನಿಗೆ ಧಾರೆಯೆರದ ಕುಮಾರಸ್ವಾಮಿ ಸರ್ಕಾರದ ವಿರುದ್ಧ ಅಲ್ಲಿನ ಪ್ರತಿ ಹಳ್ಳಿಗಳಲ್ಲೂ ಆಕ್ರೋಶ ಭುಗಿಲೆದ್ದಿದೆ. ವಿಶೇಷವಾಗಿ ಭೂಹೀನ ದಲಿತರು ಕೇಳುವ ಪ್ರಶ್ನೆಯೊಂದೇ- ಯಾರೋ ಬಾಂಬೆ ಶ್ರೀಮಂತನಿಗೆ ಏಳೂವರೆ ಸಾವಿರ ಭೂಮಿಯನ್ನು ಕೊಡುವ ಬದಲು ತಲ ತಲಾಂತರದಿಂದ ಇಲ್ಲೇ ಬದುಕುತ್ತಿರುವ ನಮಗೆ ಆ ಭೂಮಿಯನ್ನು ಬಿಟ್ಟುಕೊಡಲಿ. ಆಗ ಸರ್ಕಾರದ ನಿಯತ್ತು ಬಯಲಾಗುತ್ತೆ!


ಜಮೀನು ಇರೋರು ಹೇಗೋ ದುಡ್ಡು ಮಾಡ್ಕೋತಾರೆ. ನಾವು ದಲಿತರು ಕೂಲಿ ನಂಬಿಕೊಂಡು ಬದುಕೋರು. ಜಮೀನೂ ಇಲ್ಲ, ಕೂಲಿ ಕೆಲಸಾನೂ ಇಲ್ಲ ಅಂದ್ರೆ ಎಲ್ಲಿಗೆ ಹೋಗಬೇಕು? ಆತ್ಮಹತ್ಯೆ ಮಾಡ್ಕೋಬೇಕಾ?

ಇದು ಗಿಡ್ಡನಹಳ್ಳಿ ಕೂಲಿ ಕಾರ್ಮಿಕ ಸಣ್ಣಪ್ಪನ ಪ್ರಶ್ನೆ. ಚೊಕ್ಕಸಂದ್ರ, ಕೊಂಡ್ರಹಳ್ಳಿ, ಮೇಡೂರು ಮುಂತಾದ ಹಳ್ಳಿಗಳ ದಲಿತರೂ ಇದಕ್ಕಿಂತ ಭಿನ್ನವೇನಲ್ಲ. ನಂದಗುಡಿ ಹೋಬಳಿಯ ಒಟ್ಟೂ 36 ಹಳ್ಳಿಗಳನ್ನು ನುಂಗಿ ಮೂರುವರೆ ಸಾವಿರ ಎಕರೆಗಳಷ್ಟು ಅರಣ್ಯ ಭೂಮಿಯನ್ನು ಆಕ್ರಮಿಸಿ, ಗೋಮಾಳ ಇತ್ಯಾದಿಗಳೆಲ್ಲ ಒಳಪಟ್ಟ ಮೂರು ಸಾವಿರದ ಒಂಬೈನೂರ ಐವತ್ಮೂರು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಿ SKIL ಕಂಪನಿಯು ವಿಶೇಷ ಆರ್ಥಿಕ ವಲಯವನ್ನು ನಿರ್ಮಿಸುತ್ತಿದ್ದರೆ, ಅದಕ್ಕೆ ಕುಮಾರಸ್ವಾಮಿ ಸರ್ಕಾರ ಕಣ್ಣುಮುಚ್ಚಿ ಸಮ್ಮತಿ ಸೂಚಿಸಿದೆ.

ಕೋ-ಜಾ ಸರ್ಕಾರ ಕೊಟ್ಟ ಮಾಹಿತಿಯನ್ನೇ ಆಧರಿಸಿ ಕೇಂದ್ರ ಸರ್ಕಾರ ನಂದಗುಡಿಯನ್ನು SEZ ಎಂದು ಘೋಷಿಸಿಬಿಟ್ಟಿದೆ. ಬಲಿಪಶುಗಳು ಮಾತ್ರ ಮೂರು ಸಾವಿರದಷ್ಟು ರೈತ ಕುಟುಂಬಗಳು, ಅಷ್ಟೇ ಸಂಖ್ಯೆಯ ದಲಿತ ನಿರ್ಗತಿಕರು.

SKIL ಕಂಪನಿ SEZ ಮಾಡಲು ಹೊರಟ ಭೂಮಿಯಲ್ಲಿ ಕೃಷಿ ಭೂಮಿಯೇ ಇಲ್ಲ, ಅದೇನಿದ್ದರೂ ಬಂಜರು ಭೂಮಿ. ಆ ಪ್ರದೇಶದ ಎಲ್ಲ ರೈತರೂ ಇದನ್ನು ಸಮ್ಮತಿಸಿದ್ದಾರೆ ಎಂದು ಯಾವ ಕೋ-ಜಾ ಸರ್ಕಾರ ಕೇಂದ್ರಕ್ಕೆ ಬರೆದು ಕೊಟ್ಟಿದೆಯೋ ಅದೆಂಥಾ ದ್ರೋಹ ಎಂಬುದನ್ನು ನಂದಗುಡಿಯ ರೈತನಾಯಕ ಉತ್ತನಲ್ಲಪ್ಪನವರ ಬಾಯಿಂದಲೇ ಕೇಳಬೇಕು.

ನೋಡಿ ಈ ಸುತ್ತಮುತ್ತಲ ದಲಿತರು ಆಕಾಲ ದಿಂದಲೂ ಗೋಮಾಳದ ಜಮೀನು ಮಂಜೂರು ಮಾಡಿ ಅಂತ ವರ್ಷಂಪ್ರತಿ ಸರ್ಕಾರಕ್ಕೆ ಅರ್ಜಿ ಕೊಡುತ್ತಲೇ ಇದ್ದಾರೆ. ರೈತರ ಪರ ಸರ್ಕಾರ, ಬಡವರು ನಕ್ಸಲೈಟ್ ಆಗಬಾರದು ಅನ್ನೋರು ಸರ್ಕಾರಿ ಜಮೀನನ್ನು ಬಡವರಿಗೆ ಹಂಚಬೇಕಿತ್ತು. ಬಡವ ದಂಗೆ ಏಳಬಾರದು



ಅರಣ್ಯಭೂಮಿ ಮತ್ತು ಕೆರೆ

ಅಂತ ತಾನೇ ಗೇಣಿ ಶಾಸನ ಬಂತು? ಉಳುವವನೇ ಭೂಮಿಯ ಒಡೆಯ ಅಂತ ಇಂದಿರಾಗಾಂಧಿ ಕಾನೂನು ಮಾಡಿದ್ದು ಯಾಕೆ? ಈಗ ಕೃಷಿ ಯೋಗ್ಯ ಜಮೀನಲ್ಲ ಅಂತ ಸರ್ಕಾರ ಸುಳ್ಳು ಒಪ್ಪಿಗೆ ಪತ್ರ ಬರೆದು ಕೊಟ್ಟಿದೆಯಲ್ಲ; ಅವರೇ ಸಮೀಕ್ಷೆ ನಡೆಸಲಿ. ನಂದಗುಡಿಯಲ್ಲಿ ಶೇ. 85%ರಷ್ಟು ವ್ಯವಸಾಯಗಾರರೇ ಹೊರತು ಯಾರೂ ಫ್ಯಾಕ್ಟರಿ ಕೆಲಸಕ್ಕೆ ಹೋಗೋರಲ್ಲ. ತಲಾ ಐದರಿಂದ ಹತ್ತು ಎಕರೆ ಜಮೀನುಳ್ಳ 3000 ಕುಟುಂಬಗಳಿವೆ. ಎರಡು ಎಕರೆಗಿಂತ ಕಮ್ಮಿ ಜಮೀನಿರೋ ಸಾವಿರದೈನೂರು ಕುಟುಂಬಗಳಿವೆ. ಬೆಂಗಳೂರಿಗೆ ಪ್ರತಿನಿತ್ಯ ಹತ್ತು ಟನ್ ತರಕಾರಿ ಬೆಳೆದು ಕಳಿಸೋದು ನಂದಗುಡಿ ರೈತರೆ. ಪ್ರತಿನಿತ್ಯ ಸುಮಾರು ಎಂಬತ್ತೈದು ಸಾವಿರ ಲೀಟರ್ ಹಾಲನ್ನು ಬೆಂಗಳೂರಿಗೆ ಕಳಿಸ್ತೀವಿ. ವರ್ಷಕ್ಕೆ 16 ಲಕ್ಷ ಕೆ.ಜಿ. ರೇಷ್ಮೆ ಬೆಳೀತೀವಿ. SKIL ಕಂಪನಿಗೆ ಕೊಡೋ ಹದಿನೈದು ಸಾವಿರ ಎಕರೆ ಒಟ್ಟೂ ಭೂಮಿಯಲ್ಲಿ ಕೃಷಿ ಭೂಮಿಯೇ 7605 ಎಕರೆಗಳು. ಇನ್ನು 3500 ಎಕರೆ ಅರಣ್ಯ ಭೂಮಿ ಮತ್ತು 3953 ಎಕರೆ ಸರ್ಕಾರಿ ಭೂಮಿ ಸೇರಿದರೆ SKIL ಕಂಪನಿಯವನೊಬ್ಬನಿಗೇ ಸರ್ಕಾರ 7453 ಎಕರೆಗಷ್ಟು ಸರ್ಕಾರಿ ಜಮೀನನ್ನು ಬಿಟ್ಟಿಯಾಗಿ ಕೊಡುತ್ತದೆ....!



ರೈತನಾಯಕ ಉತ್ತನಲ್ಲಪ್ಪ

ಅದನ್ನೇ ಬಡರೈತರಿಗೆ ಕೊಡಲಿ. ಸ್ಥಳೀಯ ಬಡರೈತನನ್ನು ಬೀದಿಗೆ ಹಾಕಿ ಯಾರೋ ಶ್ರೀಮಂತರಿಗೆ ಬಿಟ್ಟಿಯಾಗಿ ಏಕೆ ಕೊಡುತ್ತಾರೆ? ಅದರಿಂದ ಕರ್ನಾಟಕಕ್ಕಾಗಲಿ, ರೈತರಿಗಾಗಲಿ ಏನು ಲಾಭ ಅಂತ ಸರ್ಕಾರ ಏಕೆ ವಿವರಣೆ ಕೊಡುತ್ತಿಲ್ಲ?

ಇದು ಉತ್ತನಲ್ಲಪ್ಪನವರ ಪ್ರಶ್ನೆ. ತಮಾಷೆಯೆಂದರೆ ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಗೇ ಉತ್ತರ ಗೊತ್ತಿಲ್ಲ. ಏಕೆಂದರೆ SKIL ಕಂಪೆನಿಗೆ ಭೂಮಿ ಬೇಕು ಎಂಬುದನ್ನು ಬಿಟ್ಟರೆ ಅಲ್ಲಿ ಎಂಥ ಕೈಗಾರಿಕೆಗಳು ಬರುತ್ತವೆ? ಅಷ್ಟೊಂದು ಭೂಮಿಯಲ್ಲಿ SKIL ಏನು ಮಾಡಲಿದೆ? ಅಷ್ಟಕ್ಕೂ ಈ ಥರದ ಕೈಗಾರಿಕಾ ಕೇಂದ್ರವೊಂದನ್ನು ನಿರ್ಮಿಸುವ ಯೋಗ್ಯತೆ SKIL ಕಂಪನಿಗಿದೆಯಾ? ಹಾಗೇ ವಿಶೇಷ ಆರ್ಥಿಕ ವಲಯ ನಿರ್ಮಿಸಿದ ನಂತರ ಅದರಿಂದ ರೈತರಿಗಾಗಲಿ, ಸರ್ಕಾರಕ್ಕಾಗಲಿ ಏನು ಲಾಭ? ಎಂಬುದರ ಬಗ್ಗೆ ಸರ್ಕಾರಕ್ಕೆ ಮಾಹಿತಿಯಿಲ್ಲ!

ಕುಮಾರಸ್ವಾಮಿ ಸರ್ಕಾರಕ್ಕಿದು ಬೇಕಾಗೇ ಇಲ್ಲ. ಏಕೆಂದರೆ ಇದು SEZ ನೆಪದಲ್ಲಿ ನಡೆಯುತ್ತಿರುವ ಪಕ್ಕಾ ರಿಯಲ್ ಎಸ್ಟೇಟ್ ದಂಧೆ. ಸದ್ಯ SEZ ಗೆಂದು SKIL ಕಂಪನಿ ಕೇಳುತ್ತಿರುವ ನಂದಗುಡಿಯ ಜಮೀನಿನಿಂದ ದೇವನಹಳ್ಳಿ ಏರ್‌ಪೋರ್ಟ್‌ಗೆ ಕೇವಲ ಇಪ್ಪತ್ತು ಮೈಲಿಯ ಅಂತರ. ಇನ್ನೂ ಸರ್ಕಾರ ಮಂಜೂರಾತಿಯನ್ನೇ ಕೊಟ್ಟಿಲ್ಲ ಆಗಲೇ SKIL ಕಂಪನಿ ದೇವನಹಳ್ಳಿ ಏರ್‌ಪೋರ್ಟ್‌ಗೆ ನಾಲ್ಕು ಟ್ರಾಕಿನ ರಸ್ತೆ ನಿರ್ಮಿಸುತ್ತಿದೆ. ಅದು ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ ಅಲ್ಲೆಲ್ಲಾ ರಸ್ತೆ ಕಾಮಗಾರಿ ಆರಂಭಿಸಿಬಿಟ್ಟಿದೆ. ಅದು ಎಂಥಾ ದೌರ್ಜನ್ಯವೆಂದರೆ, ರೈತರು ಜಮೀನು ಕೊಡಲು ಒಪ್ಪದೇ ಹೋದರೂ ಈ ಬಗ್ಗೆ SKIL ಖದೀಮರು ತಲೆಕೆಡಿಸಿಕೊಳ್ಳುತ್ತಿಲ್ಲ. ಏಕೆ ಗೊತ್ತೆ? ಒಮ್ಮೆ SEZ ಕಾಯ್ದೆಯಡಿ ಈ ಪ್ರದೇಶ ನೋಟಿಫೈ ಆಯಿತೆಂದರೆ, ಅಲ್ಲಿನ ರೈತರು ಬೇರೆ ಯಾರಿಗೂ ಜಮೀನು ಮಾರುವಂತಿಲ್ಲ. SKIL ಕಂಪನಿಯ ಹೊರತಾಗಿ ಬೇರೆ ಯಾರಿಗೂ ಭೂಮಿಯನ್ನು ರಿಜಿಸ್ಟರ್ ಮಾಡುವಂತಿಲ್ಲ.

ಹಾಗೊಮ್ಮೆ ಮಾರುಕಟ್ಟೆ ದರಕ್ಕೆ ಭೂಮಿಯನ್ನು ಕೊಳ್ಳುವುದೇ ಆದರೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಕೆಲ ರೈತರು ನಿಶ್ಚಿಂತೆಯಿಂದಿದ್ದಾರಾದರೂ ಅದು ಅವರ ಮೂರ್ಖತನವಷ್ಟೆ. ಬೇರೆ ಯಾರೂ ಭೂಮಿ ಕೊಳ್ಳಲು ಅವಕಾಶವೇ ಇಲ್ಲದಿರುವಾಗ, ಮಾರುಕಟ್ಟೆ ದರದ ಪ್ರಶ್ನೆಯೇ ಇಲ್ಲ. SKIL ಕಂಪನಿ ಇಂತಿಷ್ಟೇ ಎಂದು ನಿಗದಿ ಮಾಡಿದ್ದನ್ನೇ ತೆಪ್ಪಗೆ ಒಪ್ಪಿಕೊಂಡು ಭೂಮಿ ಮಾರಬೇಕು. ಹಾಗೊಮ್ಮೆ ಮಾರದೇ ಹೋದರೂ SKIL ಕಂಪನಿ ತಲೆಕೊಡಿಸಿಕೊಳ್ಳುವುದಿಲ್ಲ ಏಕೆಂದರೆ ಬೇರೆ ಯಾರೂ ಅದನ್ನು ಕೊಳ್ಳುವುದಿಲ್ಲ.

ಅಲ್ಲಿಗೆ ರೈತರದು ನಾಯಿ ಪಾಡು ಎಂಬುದರಲ್ಲಿ ಸಂಶಯವೇ ಇಲ್ಲ. ದುರಂತವೆಂದರೆ ಏಪ್ಪತ್ತು ಎಂಬತ್ತು ಎಕರೆ ಜಮೀನುಳ್ಳ ಚೀನಾ ರಾಮು ಥರದ ದಲಿತ ನಾಯಕರು ತಮಗೆ ಮಾರುಕಟ್ಟೆ ರೇಟೆ ಸಿಗುತ್ತದೆ ಎಂದು ನಂಬಿ SKIL ವಕಾಲತ್ತಿಗೆ ನಿಂತಿದ್ದಾರೆ. ಬೇರೆ ಯಾರಿಗೂ ಮಾರುವ ಅವಕಾಶವೇ ಇಲ್ಲದಿರುವಾಗ ಮಾರುಕಟ್ಟೆ ದರ ಸಿಗುತ್ತದೆ ಎಂಬುದಕ್ಕೆ ಏನಾದರೂ ಅರ್ಥವುಂಟೆ?

ಇವತ್ತು ನಂದಗುಡಿ ಸುತ್ತಮುತ್ತಲ ಬಹುತೇಕ ಹಳ್ಳಿಗಳ ಅನುಕೂಲಸ್ಥ ರೈತರು ತಮಗೆ ಒಳ್ಳೇ ರೇಟು ಸಿಗುತ್ತದೆ ಎಂದು ಜೊಲ್ಲು ಸುರಿಸುತ್ತಿರುವುದು ಅವರ ಮುಠ್ಠಾಳತನ ಮಾತ್ರ. ಕಾಂಗ್ರೆಸ್ ನಾಯಕರು ಒಂದು ಸುತ್ತಿನ ಸಮೀಕ್ಷೆ ಮುಗಿಸಿ ಹೋಗಿದ್ದಾರಾದರೂ ಜನರನ್ನು ಸಂಘಟಿಸಿ ಹೋರಾಟಕ್ಕಿಳಿಸುವಷ್ಟು ವ್ಯವಧಾನ ಅವರಿಗಿದ್ದಂತಿಲ್ಲ. ಕಮ್ಯುನಿಸ್ಟ್ ಪಕ್ಷಗಳು ಬೆಂಗಳೂರಿನ ಮಟ್ಟದಲ್ಲಿ ಸೆಮಿನಾರ್ ಮಾಡುತ್ತಿವೆ ನಿಜ. ಆದರೆ ಪಶ್ಚಿಮ ಬಂಗಾಳದಲ್ಲಿ ನಂದಿಗ್ರಾಮ ಗಲಭೆಗಳಿಗೆ ಕಾರಣರಾದ CPMನವರು ನಂದಗುಡಿ ಸುತ್ತಮುತ್ತಲ ಗ್ರಾಮಗಳಿಗೆ ಈತನಕ ಕಾಲಿಟ್ಟಿಲ್ಲ. ಇನ್ನು ರೈತ ಸಂಘ, ದಲಿತ ಸಂಘಟನೆಗಳು, ಕನ್ನಡ ಪರ ಸಂಘಟನೆಗಳ್ಯಾರೂ ಈ ಬಗ್ಗೆ ಹೆಚ್ಚಿನ ತಲೆಕೆಡಿಸಿಕೊಂಡಿಲ್ಲ. ಜನಪರ ವೇದಿಕೆಯ ಕಾರ್ಯಕರ್ತರು ಒಂದಷ್ಟು ಕರಪತ್ರ ಹಂಚಿಹೋಗಿದ್ದಾರೆ. ಕೆಲ ಶ್ರದ್ಧಾವಂತ ರೈತರು ಹೋರಾಟಕ್ಕೆ ಅಣಿಯಾಗಿದ್ದಾರೆ. ಆದರೆ ಈ ಹಂತದಲ್ಲೂ ಬಹುತೇಕ ರೈತರಿಗೆ ತಾವು SKIL ಕಂಪನಿಗಲ್ಲದೆ ಬೇರೆ ಯಾರಿಗೂ ಜಮೀನು ಮಾರುವಂತಿಲ್ಲ ಎಂಬ ಪರಮ ಸತ್ಯ ಗೊತ್ತೆ ಇಲ್ಲ!

ಇನ್ನೂ ಧಾರುಣವೆಂದರೆ SEZ ವಿರುದ್ಧ ತೀರ್ಪು ಕೊಡಲು ಸ್ಥಳೀಯ ಕೋರ್ಟುಗಳಿಗೆ ಅಧಿಕಾರವಿಲ್ಲ. SEZ ವಲಯದ ವ್ಯಾಪ್ತಿಯಲ್ಲಿ ಸರ್ಕಾರಕ್ಕೂ ಹೇಳಿಕೊಳ್ಳುವಂಥ ಅಧಿಕಾರಗಳಿಲ್ಲ.

ಈ ಕಠೋರ ಸತ್ಯವನ್ನು ಆಕರ್ಷಕ ರೇಟಿಗೆ ಭೂಮಿ ಮಾರುತ್ತೇವೆಂದು ತುದಿಗಾಲಲ್ಲಿ ನಿಂತ ಮುಗ್ಧ ರೈತರಿಗೆ ತಿಳಿಸುವವರ್ಯಾರು? ಅದು ಗೊತ್ತಾದ ನಂತರ ರೈತರ ಆಕ್ರೋಶವನ್ನು ತಡೆಯುವವರ್ಯಾರು?

ರಾ. ಸೋಮನಾಥ್

SKIL ಎಂಬುದು ಭೂಕಬಳಿಕೆಗಂದೇ ತಲೆ ಎತ್ತಿದ ಫ್ರಾಡ್ ಕಂಪನಿ

ನಂದಗುಡಿಗೆ SKIL ವಕ್ಕರಿಸಿರುವ ಈ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂಬ ಕಂಪೆನಿಯ ಹೆಸರನ್ನು ಈತನಕ ಯಾರೂ ಕೇಳಿದ್ದಿಲ್ಲ. ಅದರ ಧಣಿ ನಿಖಿಲ್ ಗಾಂಧಿ ಎಂಬಾತ ಯಾರು? ಎಲ್ಲಿದ್ದ? ಆತನ ಅರ್ಹತೆಯೇನು? ಇತ್ಯಾದಿ ಯಾವುದೂ ಯಾರಿಗೂ ಗೊತ್ತಿಲ್ಲ. ಹೀಗಿದ್ದೂ ಕುಮಾರಸ್ವಾಮಿ ಸರ್ಕಾರ ಯಾವ ಅರ್ಹತೆಯ ಮೇಲೆ ಆತನಿಗೆ ನಂದಗುಡಿಯನ್ನು ಉಂಬಳಿಯಾಗಿ ನೀಡುತ್ತಿದೆ?



ನಿಖಿಲ್ ಗಾಂಧಿ

ಈ ಪ್ರಶ್ನೆಗೆ ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಉಪ ಮುಖ್ಯಮಂತ್ರಿ ಯಡಿಯೂರಪ್ಪಾಗೆ ಉತ್ತರ ಗೊತ್ತಿಲ್ಲ. ಏಕೆಂದರೆ ಇವರ್‍ಯಾರಿಗೂ ಅದು ಬೇಕಾಗಿಲ್ಲ. ಮುಂಬಯಿ ಮೂಲದ ರಿಯಲೇಟರ್ ಒಬ್ಬರ ಪ್ರಕಾರ ನಂದ ಗುಡಿಯ ಡೀಲೊಂದರಲ್ಲೇ ಸಾವಿರ ಕೋಟಿಯ ಕರ್ಮಕಾಂಡವಾಗುತ್ತದೆ. ಹೇಗೆ ಯಾವುದೇ ಬಂಡವಾಳವಿಲ್ಲದೆ, ಯೋಗ್ಯತೆ ಯಿಲ್ಲದೆ ರಸ್ತೆಯ ಹೆಸರಲ್ಲಿ ನೈಸ್ ಕಂಪೆನಿಗೆ ರೈತರ ಭೂಮಿ ಕಿತ್ತುಕೊಳ್ಳುವ ಅಧಿಕಾರವನ್ನು ದೇವೇಗೌಡರ ಸರ್ಕಾರ ಕೊಟ್ಟಿತ್ತೋ, ಇದು ಕೂಡ ಅಂಥದ್ದೇ ಒಂದು ಡೀಲು.


ಹೇಗೆ ರಸ್ತೆಯ ಕಾರಣಕ್ಕೆ ಅಶೋಕ್ ಖೇಣಿಯ ನೈಸ್ ಎಂಬ ನಾಯಿಕೊಡೆ ಕಂಪೆನಿ ಹುಟ್ಟಿಕೊಂಡಿತ್ತೋ ಹಾಗೇ SEZ ಕಾರಣಕ್ಕೆ ಈ SKIL ಎಂಬ ಕಂಪೆನಿ ಕರ್ನಾಟಕಕ್ಕೆ ಕಾಲಿಟ್ಟಿದೆ. ಇದರ ಧಣಿ ನಿಖಿಲ್ ಗಾಂಧಿ ಕೂಡ ಅಶೋಕ್ ಖೇಣಿಯಂತೆ ಓರ್ವ ಖುಟ್ಟಾ ವಂಚಕನೇ ಹೊರತು ಈತನಕ ಸಣ್ಣದೊಂದು ಸ್ಕೂಟರ್ ಗ್ಯಾರೇಜ್ ಕೂಡ ಇಟ್ಟವನಲ್ಲ. ಇನ್ನು ಏನಾದರೂ ಉದ್ದಿಮೆ ಮಾಡಿ ಯಶಸ್ವಿಯಾಗುವುದೆಲ್ಲಿಂದ ಬಂತು? ಅಂಥ ಯೋಗ್ಯತೆ, ಕಾಳಜಿ ಯಾವುದೂ SKIL ಕಂಪೆನಿಗಿಲ್ಲ, ಅದೊಂದು ವಂಚಕ ನಿಂಬಗಳ ಕೂಟವೇ ಹೊರತು ಮತ್ತೇನಲ್ಲ. ಹೋಗಲಿ SKIL ಗೆ ನಿಜಕ್ಕೂ 15 ಸಾವಿರ ಎಕರೆ ಭೂಮಿ ಬೇಕಾ? ಅಷ್ಟೇ ಭೂಮಿಯನ್ನು ಗುಲ್ಬರ್ಗದಲ್ಲೋ ರಾಯಚೂರಿನಲ್ಲೋ ಕೊಟ್ಟರೆ ಒಪ್ಪುತ್ತಾನಾ?

ಈ ಪ್ರಶ್ನೆಯೊಂದೇ ನಿಖಿಲ್ ಗಾಂಧಿಯ ಬಂಡವಾಳವನ್ನು ಬಗೆದಿಡುತ್ತದೆ. ರಾಯಚೂರಿನಲ್ಲಿ ಹದಿನೈದು ಸಾವಿರವಲ್ಲ ಲಕ್ಷ ಎಕರೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಈ ನಿಖಿಲ್ ಗಾಂಧಿಗೆ ಬೇಕಿಲ್ಲ. ಆತನಿಗೆ ಬೇಕಿರುವುದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವ ನಂದಗುಡಿಯ ಪ್ರಶಸ್ತ ಭೂಮಿ ಮಾತ್ರ. ಅಲ್ಲಿ ಆತ ಹದಿನೈದು ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡುತ್ತಾನಂತೆ. ಆ ಪ್ರಯುಕ್ತ ಮೊದಲ ಹಂತದಲ್ಲೇ 5 ಸಾವಿರ ಕೋಟಿ ರೂಪಾಯಿ ಹಾಕುತ್ತಾನಂತೆ. ಅದರಲ್ಲಿ ರಸ್ತೆ ಚರಂಡಿ ನಿರ್ಮಿಸುತ್ತಾನಂತೆ. 250 ಕೋಟಿಯ ವಾಟರ್ ಪೈಪ್‌ಲೈನ್ ಎಳೆಯುತ್ತಾನಂತೆ. ರೈತನಿಗೆ ಕೊಡಲು ವಿದ್ಯುತ್ತಿಲ್ಲದೇ ಹೋದರೂ ಸರ್ಕಾರ ಆತನಿಗೆ ರಿಯಾಯಿತಿ ದರಕ್ಕೆ ವಿದ್ಯುತ್ ಕೊಡುತ್ತದೆಯಂತೆ. ಅಲ್ಲಿ 300 ಕೋಟಿಯ ಫೈವ್‌ಸ್ಟಾರ್ ಹೋಟೆಲ್, 120 ಕೋಟಿಯ ವಾಟರ್ ಪಾರ್ಕ್, 80 ಕೋಟಿಯ ಸ್ಕೂಲು, 1200 ಕೋಟಿಯ ಕಾಮಗಾರಿ, 2500 ಕೋಟಿಯ ಟೌನ್‌ಶಿಪ್ ಇನ್ನೂ ಏನೇನೋ ಮಾಡುತ್ತಾನಂತೆ!

ತಮಾಷೆಯೆಂದರೆ ಹೀಗೆ 15 ಸಾವಿರ ಕೋಟಿ, 5 ಸಾವಿರ ಕೋಟಿ ಎಂದು ಬುರುಡೆ ಬಿಡುವ ಈತ ತನ್ನ ಸ್ವಂತ ದುಡ್ಡು ಅಂತ ಒಂದೇ ಒಂದು ಪೈಸೆಯನ್ನೂ ಹಾಕುವುದಿಲ್ಲ, ಅಸಲಿಗೆ ಆತನ ಬಳಿ ಬಂಡವಾಳ ಅಂತ ಕನಿಷ್ಠ ಹತ್ತು ಕೋಟಿ ಕೂಡ ಇಲ್ಲ. SKIL ಎಂಬುದೇ ಒಂದು ಬೋಗಸ್ ಕಂಪೆನಿ. ಇಲ್ಲಿಗೆ ಎರಡು ವರ್ಷದ ಹಿಂದೆ ಬೆಂಗಳೂರು ಗ್ರಾಮಾಂತರ ಡೀಸಿಯಾಗಿದ್ದ ಭ್ರಷ್ಟ ಐಎಎಸ್ ಜಿ.ವಿ. ಕೊಂಗುವಾಡ್‌ಗೆ ಕೇವಲ ಐದು ಲಕ್ಷ ತಿನ್ನಿಸಿ ಸರ್ವೆ ಮಾಡಿಸಿ, ನಾಮಕಾವಸ್ತೆಗೊಂದು ಅರ್ಜಿ ಹಾಕಿಕೊಂಡು, ಆ ಅರ್ಜಿಯ ಆಧಾರದ ಮೇಲೇ ಐವತ್ತು ಕೋಟಿ ಸಾಲ ಎತ್ತಿದ್ದಾನೆ. ಹಾಗೇ ಸಾಲ ಎತ್ತಿದ್ದರಲ್ಲಿ ಒಂದು ಪಾಲನ್ನು ಕೇಂದ್ರದ ಖದೀಮರಿಗೂ ಮತ್ತೊಂದು ಪಾಲನ್ನು ಕೈಗಾರಿಕಾ ಇಲಾಖೆಯ ತಿಮಿಂಗಿಲಗಳಿಗೂ ತಿನ್ನಿಸಿದ್ದಾನೆ. ಈಗ ರಾಜ್ಯ ಸರ್ಕಾರ ಕೊಟ್ಟ ಅಪ್ರೂವಲ್ ಲೆಟರ್ ಅನ್ನೇ ಇಟ್ಟುಕೊಂಡು ಮತ್ತೆ ನೂರು ಕೋಟಿ ಸಾಲ ಮಾಡಿದ್ದಾನೆ. ಟೌನ್‌ಶಿಪ್ ಮಾಡಲು DLF ಬಿಲ್ಡರ್‌ಗೆ 2 ಸಾವಿರ ಕೋಟಿಯ ಕಾಂಟ್ರಾಕ್ಟನ್ನೂ, ವಾಟರ್ ಪಾರ್ಕ್ ಮಾಡಲು ದುಬೈ ಮೂಲದ ಕಂಪೆನಿಯೊಂದಕ್ಕೆ ಇನ್ನೂರು ಕೋಟಿಯ ಗುತ್ತಿಗೆಯನ್ನೂ, ಹೀಗೆ SEZ ಕಾಯ್ದೆಯನ್ನು ಮುಂದಿಟ್ಟುಕೊಂಡು ಎಲ್ಲೆಲ್ಲಿ ಸಾಧ್ಯವೋ ಅಲ್ಲಿಂದೆಲ್ಲಾ ದುಡ್ಡೆತ್ತಿದ್ದಾನೆ. ಇದರಲ್ಲೇ ದೊಡ್ಡ ಪಾಲನ್ನು ಮುಖ್ಯಮಂತ್ರಿಗೆ ತಿನ್ನಿಸಿದ್ದಾನೆ. ಮತ್ತೊಂದು ಪಾಲು ಉಪಮುಖ್ಯಮಂತ್ರಿ ಯಡ್ಡಿಯ ಕೈ ಸೇರಿದೆ. ಬಿಜೆಪಿ ನಾಯಕ ವೆಂಕಯ್ಯನಾಯ್ಡು ಮತ್ತು ಆತನ ಬೇನಾಮಿ ಕೈಗಾರಿಕಾ ಮಂತ್ರಿ ಕಟ್ಟಾ ನಾಯ್ಡು ಕೂಡ ಲಂಚ ಮುಕ್ಕಿದ್ದಾರೆ.

ಏಳೂವರೆ ಸಾವಿರ ಎಕರೆಯಷ್ಟು ಸರ್ಕಾರಿ ಭೂಮಿ ಪುಕ್ಕಟೆಯಾಗಿ ಗಿಟ್ಟುತ್ತದೆಯೆಂದರೆ ಮುಖ್ಯಮಂತ್ರಿಯೊಬ್ಬನಿಗೆ ಸಾವಿರ ಕೋಟಿ ರೂಪಾಯಿ ಲಂಚ ಕೊಡುವುದು ಎಕರೆಗೆ 15 ಲಕ್ಷ! ಸರ್ಕಾರದ ಜಮೀನು ತೋರಿಸಿ, ಸಾಲ ಹುಟ್ಟಿಸಿ, ರೈತರ ಜಮೀನು ಕಿತ್ತು, ಅದನ್ನೇ ಮಾರಿಕೊಂಡು ನಂದಗುಡಿ SEZ ಮಾಡಲು SKIL ಕಂಪೆನಿಯೇ ಬೇಕಿತ್ತಾ? ನಿಖಿಲ್ ಗಾಂಧಿಗಿಂತಲೂ ಪಳಗಿದ ವಂಚಕರು ಬೆಂಗಳೂರಿನಲ್ಲಿರಲಿಲ್ಲವಾ? ಕನ್ನಡಿಗರಿಗಿಂತ ಮುಠ್ಠಾಳರು ಉಂಟಾ? SKIL ಟೌನ್‌ಶಿಪ್ ಬರುತ್ತೋ ಬಿಡುತ್ತೋ, 15 ಸಾವಿರ ಎಕರೆ ಭೂಮಿಯಂತೂ ಖದೀಮ ನಿಖಿಲ್ ಗಾಂಧಿಯ ಪಾಲಾಗೇ ತೀರುತ್ತದೆ. ಏಕೆಂದರೆ ಇದು ಪಕ್ಕಾ ಲ್ಯಾಂಡ್ ಡೀಲೇ ಹೊರತು ಕೈಗಾರಿಕೆ, ಉದ್ಯೋಗ ಯಾವುದೂ ಮುಖ್ಯವಲ್ಲ. ದಂಗೆಯೇಳದೇ ರೈತರಿಗೆ ಬೇರೆ ದಾರಿಯೂ ಇಲ್ಲ.

ಚಿಂತನೆಗಳನ್ನು ಎಂದೂ ಬಂಧಿಸಲಾಗದು -ಅನಾಮಿಕ




ಪಂಚಮಸಾಲಿಯ ಬೀದಿ ರಂಪಾಟ:

ಹೊಸ ಸ್ವಾಮಿ ಆಗೋದು ಯಾವಾಗ?

ಕರ್ನಾಟಕದ ಪಂಚಮಸಾಲಿ ಸಮಾಜ ಒಡೆದು ಹೋಳಾಗುತ್ತಿದೆಯೇ? ಇಂತಹದ್ದೊಂದು ಪ್ರಶ್ನೆ ಈಗ ಪಂಚಮಸಾಲಿ ಸಮಾಜದ ಜನರಲ್ಲಿ ಹುಟ್ಟಿಕೊಂಡಿದೆ. 'ಜಂಗಮರ ಆಶೀರ್ವಾದದ ಜರೂರತ್ ಪಂಚಮಸಾಲಿಗಳಿಗೇನಿಲ್ಲ. ಪಂಚಮಸಾಲಿ ಸಮಾಜಕ್ಕೇನೇ ಸೆಪರೇಟ್ ಆಗಿ ಒಂದು ಗುರುಪೀಠವನ್ನು ಸ್ಥಾಪಿಸುತ್ತೇವೆ. ಅದಕ್ಕೊಬ್ಬ ಸ್ವಾಮಿ ಮಾಡುತ್ತೇವೆ. ಆ ಪೀಠಕ್ಕೆ ರಾಜ್ಯದ ಲಿಂಗಾಯತ ಪಂಚಮಸಾಲಿ ಜನರೆಲ್ಲ ಭಕ್ತರಾಗುತ್ತಾರೆ' ಅಂತ ಕಳೆದ ಐದಾರು ವರ್ಷಗಳಿಂದ ಪಂಚಮಸಾಲಿ ಸಮಾಜದ ಸ್ವಯಂಘೋಷಿತ ರಾಜ್ಯಾಧ್ಯಕ್ಷ ಕೊಟ್ಟೂರಿನ ಭಾವಿ ಬೆಟ್ಟಪ್ಪ ಹಾಗೂ ಕಾರ್ಯದರ್ಶಿ ಬಸವರಾಜ ದಿಂಡೂರ್ ಹೋದಲೆಲ್ಲಾ ಟಾಂಟಾಂ ಹೊಡೆಯುತ್ತಾ ಬಂದಿದ್ದಾರೆ. ತಿಂದು ತೇಗುತ್ತಾ ಡರಕೆ ಹೊಡೆಯುವುದರಲ್ಲಿಯೇ ಐದಾರು ವರ್ಷಗಳನ್ನು ಉರುಳಿಸಿದ್ದು ಬಿಟ್ಟರೆ ಈ ಮಹಾನುಭಾವರು ಆ ನಿಟ್ಟಿನಲ್ಲಿ ಹೇಳಿಕೊಳ್ಳುವಂತಹ ಕೆಲಸವನ್ನು ಮಾಡಿದ್ದೇನೂ ಇಲ್ಲ. ಆದರೂ ಇಂತಹದೊಂದು ಸುದ್ದಿಯಿಂದಲೇ ಅವರು ರಂಭಾಪುರಿ ಸೇರಿದಂತೆ ಪಂಚಪೀಠ ಖ್ಯಾತ ಸ್ವಾಮಿಗಳ ಕುರ್ಚಿಯ ಕಾಲುಗಳನ್ನು ಅಲುಗಾಡಿಸುತ್ತಾ ಅವರ ತಳಕ್ಕೆ ಬಿಸಿನೀರು ಹಾಯಿಸುತ್ತಿದ್ದಾರೆನ್ನುವುದೂ ಅಷ್ಟೇ ಸತ್ಯ.

'ನೀವು ಹೊಸ ಪೀಠ, ಹೊಸ ಸ್ವಾಮಿಗಳನ್ನು ಹುಟ್ಟು ಹಾಕುವುದು ಬದಿಗಿರಲಿ, ನಿಮಗೆ ಈ ಪಂಚಮಸಾಲಿ ಸಮಾಜದ ನಾಯಕರ ಪಟ್ಟ ಕಟ್ಟಿದವರ್‍ಯಾರು? ಹೊಸ ಗುರುಪೀಠ, ಹೊಸ ಸ್ವಾಮಿಗಳನ್ನು ಮಾಡುವುದಕ್ಕೆ ಅಧಿಕಾರ ಕೊಟ್ಟವರ್‍ಯಾರು? ಸ್ವಾರ್ಥಕ್ಕಾಗಿ ಪಂಚಮಸಾಲಿ ಸಮಾಜವನ್ನು ಬಲಿ ಕೊಡೊ ಕೆಲಸ ಮಾಡಬ್ಯಾಡ್ರಿ, ಇಲ್ಲಿಂದ ಮೊದಲು ರೈಟ್ ಹೇಳ್ರಿ' ಎಂದು ಅದೇ ಸಮಾಜದ ಜನ ಈ ಸ್ವಯಂಘೋಷಿತ ನಾಯಕಮಣಿಗಳ ಮುಖಕ್ಕೆ ಉಗಿದು ಕಳಿಸಿದರೆ ಎಂ. ಬಸವರಾಜ ಎಂಬ ಲೀಡರ್ ಇವರ ವಿರುದ್ಧವೇ ಬಹಿರಂಗ ಪತ್ರಿಕಾ ಹೇಳಿಕೆ ನೀಡಿ ಈ ವಿಚಾರವನ್ನು ಒಂದು ಕೊಚ್ಚೆಗುಂಡಿ ಮಾಡಿಟ್ಟಿದ್ದಾನೆ.


ಭಾವಿ ಬೆಟ್ಟಪ್ಪ

ರಾಜ್ಯದ ಪ್ರಬಲ ಕೋಮು ಲಿಂಗಾಯತ ಸಮಾಜ ಹಿಂದೆ ಒಳಪಂಗಡಗಳ ವಿರಸದಲ್ಲಿ ಹೊರಳಾಡಿ ಆಗಲೇ ಹೋಳಾಗಿ ಹೋಗಿದೆ. ಸಾದರ ಜೊತೆಗಿದ್ದ ಪಂಚಮಸಾಲಿಗಳ ಜಗಳ ಈಗ ಹಳೇದಾಯ್ತು. ಅವರು ತಮ್ಮದೇ ಆದ ಸೆಪರೇಟ್ ಪೀಠವೊಂದನ್ನು, ಅದಕ್ಕೆ ಸ್ವಾಮಿಗಳನ್ನು ಮಾಡಿಕೊಂಡು ತಮ್ಮ ದಾರಿ ಹಿಡಿದದ್ದಾಯಿತು. ಆದರೆ ಈಗ ಶುರುವಾಗಿರೋದು ಪಂಚಮಸಾಲಿ ವರ್ಸಸ್ ಜಂಗಮ ಜಗಳ. "ಹಮಾರಿ ಬಿಲ್ಲಿ ಹಮ್‌ಕೊ ಹಿ ಮ್ಯೂಂವ್ ಎನ್ನುವಂತೆ ನಾವು ಹಾಕಿದ ದಕ್ಷಿಣೆಯಿಂದ ಕೋಟಿ ಕೋಟಿ ಸಂಪಾದಿಸಿ, ನಮ್ಮ ಸಲಾಮಿನಿಂದ ಬೆಳಕಿಗೆ ಬಂದು, ನಮ್ಮನ್ನೇ ಗುಲಾಮರಂತೆ ಬಳಸಿಕೊಂಡು ಮೇಲೇರಿದ ಜಂಗಮ ಮಠಾಧೀಶರುಗಳು ತಮ್ಮ

ಹುರುಳಿಕೊಪ್ಪೆ ವಿನಯ

ಸ್ವಜಾತಿ ಪ್ರೇಮದಿಂದ ತಮ್ಮ ಜಾತಿಬಾಂಧವರನ್ನೇ ಮೇಲೇರಿಸುತ್ತಿದ್ದಾರೆ; ತಮಗೆ ದಕ್ಕಿರುವ ಪ್ರಾಬಲ್ಯವನ್ನು ಬಳಸಿಕೊಂಡ ರಾಜಕಾರಣದಲ್ಲಿಯೂ ಎಂಟ್ರಿ ಹೊಡೆದು ಎಂ.ಪಿ. ಪ್ರಕಾಶರ ಸಾರಥ್ಯದಲ್ಲಿ ಸ್ವಜನಪಕ್ಷಪಾತ ಮಾಡುತ್ತಿರುವ ಜಗದ್ಗುರುಗಳನ್ನು ಜಾಗ ಖಾಲಿ ಮಾಡಿಸಬೇಕು; ಮತ್ತೆ ಈಗ 'ಬೇಡ ಜಂಗಮ' ಎಂದು ಕರೆಯಿಸಿಕೊಳ್ಳುವ ಪರ್ಸೆಂಟೇಜ್ ಲೆಕ್ಕದ ಜನರಿಗೆ ಪಂಚಮಸಾಲಿಗಳು 'ಜಿ... ಹುಜೂರ್' ಎನ್ನುವುದರಲ್ಲಿ ಅರ್ಥವಿಲ್ಲ; ರಾಜ್ಯದಲ್ಲಿ 77 ಲಕ್ಷ ಜನರಿರುವ ನಮ್ಮ ಪಂಚಮಸಾಲಿ ಸಮಾಜಕ್ಕೆ ನಮ್ಮವರೇ ಆದ ಸ್ವಜಾತಿ ಮಠಾಧೀಶರನ್ನು ಮಾಡೋಣ" ಎನ್ನುತ್ತಾ ಮುಗ್ಧ ಜನರಲ್ಲಿ ಜಾತಿದ್ವೇಷದ ಕಿಡಿ ಹಚ್ಚಿದ ಭಾವಿ ಬೆಟ್ಟಪ್ಪ ಹಾಗೂ ದಿಂಡೂರ್ ಎಂಬ ಸ್ವಯಂಘೋಷಿತ ನಾಯಕಮಣಿಗಳೂ ಕೂಡ ಜಂಗಾಮಾಭಿಮಾನಿಗಳೇ ಎಂಬುದನ್ನು ಗಮನದಲ್ಲಿಡಬೇಕು. ಈ ಡೈಲಾಗ್‌ಗಳನ್ನು ಅವರು ಐದಾರು ವರ್ಷಗಳಿಂದ ಹೊಡೆಯುತ್ತಿದ್ದಾರೆ; ನಾಲ್ಕೈದು ಸಮಾವೇಶ ಮಾಡಿದ್ದಾರೆ. ಆದರೂ ಪಂಚಮಸಾಲಿ ಸೆಪರೇಟ್ ಗುರುಪೀಠ ಮಾಡುವ ಮೂಲಕ ಪಂಚಮಸಾಲಿ ಲಿಂಗಾಯತ ಸಮಾಜದ ನಾಯಕರಾಗುವ ಅವರ ಕನಸು ಕನಸಾಗಿಯೇ ಉಳಿದಿದೆ.


ಬಸವರಾಜ್ ದಿಂಡೂರ್

ಬೆಟ್ಟಪ್ಪ-ದಿಂಡೂರನ ಸಿ.ಡಿ. ಪುರಾಣ


ಎಷ್ಟು ವರ್ಷ ಅಂತ ಊರೂರು ತಿರುಗಿ ಮೈಕ್ ಹಿಡಕೊಂಡು ಮರ್ಯಾದೆ ಕಳಕೊಳ್ಳೋದು? ಜನಾ ನೋಡಿದರೆ ಸುಮ್‌ಸುಮ್ನೆ ಜಗಳಕ್ಕೆ ಬರತಾರೆ. ಹಾಗಾಗಿ ಸಿ.ಡಿ. ಮಾಡಿ ಮಾರಿದರೆ ಆದರಿಂದ ಒಂದೆಡೆ ಹಣಾನೂ ಬರುತ್ತೆ, ಇನ್ನೊಂದೆಡೆ ಪ್ರಚಾರಾನೂ ಆಗುತ್ತೆ, ಇಂತಹದ್ದೊಂದು ಐನಾತಿ ಐಡಿಯಾ ಭಾವಿ ಬೆಟ್ಟಪ್ಪ ಮಾಡಿದ. 2003ರಲ್ಲೇ ಒಂದು 'ಸ್ವಾಭಿಮಾನ' ಎಂಬ ಹೆಸರಿನಲ್ಲಿ ಆಡಿಯೋ ಸಿ. ಡಿ. ತಂದು ಟೆಸ್ಟ್ ಕೂಡ ಮಾಡಿದ. ಅದರಿಂದ ಒಂದಿಷ್ಟು ಸಕ್ಸಸ್ ಸಿಕ್ತು ಅಂತ ಕಾಣುತ್ತೆ. ಹಾಗಾಗಿ ಮುರಗೇಶ ನಿರಾಣಿ ಎಂಬುವನ ದೇಣಿಗೆ ಪ್ರಸಾದದಿಂದ ಇತ್ತೀಚೆಗೆ ದಾವಣಗೆರೆಯಲ್ಲಿ ಎರಡನೇ ಸಿಡಿಯನ್ನು ರಿಲೀಸ್ ಮಾಡಿದ್ದಾನೆ. "ಗುರುಪೀಠ ಹಾಗೂ ಗುರುವಿನ ನೇಮಕಕ್ಕೆ ಹಗಲಿರುಳೂ ಚಿಂತನೆ ನಡೆದಿದೆ. ಜನತೆಯ ಆಶಯಕ್ಕೆ ಧಕ್ಕೆ ಬರದ ಹಾಗೆ ಗುರುವಿನ ಆಯ್ಕೆ ಮಾಡಲಾಗುವುದು" ಎಂದು ಒಂದು ರೀತಿಯಲ್ಲಿ ಸರ್ಕಾರಿ ನೌಕರಿಯನ್ನು ತುಂಬುವ ಹಾಗೆ ಪ್ರಚಾರ ಮಾಡುತ್ತಿದ್ದಾನೆ. ಇದಕ್ಕಾಗಿ ಒಂದು ಆಯ್ಕೆ ಸಮಿತಿ ರಚಿಸುತ್ತಾನಂತೆ. ಆದರೆ ಸಮಿತಿಯಲ್ಲಿ ಯಾರ್‍ಯಾರು ಇರುತ್ತಾರೆ ಎನ್ನುವುದು ಮಾತ್ರ ಟಾಪ್ ಸೀಕ್ರೆಟ್ ಅಂತೆ! ಟೆಂಡರ್ ಫಾರ್ಮ್ ಇನ್ನೇನು ಸದ್ಯದಲ್ಲೇ ಬಿಡುಗಡೆಯಾದರೂ ಆಶ್ಚರ್ಯವಿಲ್ಲ.

"ಪಂಚಮಸಾಲಿಗಳ ಮೌಢ್ಯ ಮತ್ತು ದೌರ್ಬಲ್ಯಗಳನ್ನು ಬಂಡವಾಳ ಮಾಡಿಕೊಂಡು ಜಂಗಮರು ಪಂಚಮಸಾಲಿ ಜನರನ್ನು ನೂರಾರು ವರ್ಷಗಳಿಂದ ನಿರಂತರವಾಗಿ ಶೋಷಣೆ ಮಾಡಿದ್ದಾರೆ. ಆದರಿಂದ ಹೊರಬರಲು ಸಂಘಟನೆ ಮಾಡೋಣ, ಗ್ರಾಮ ಮಟ್ಟದಲ್ಲಿ ಜನಗಣತಿ ಮಾಡಿ ನಮ್ಮ ಬಲದೊಂದಿಗೆ ಸರಕಾರದ ಸವಲತ್ತು ಪಡೆಯೋಣ" ಎಂದು ಭಾರಿ ಭಾಷಣ ಬಿಗಿಯುವ ಭಾವಿ ಬೆಟ್ಟಪ್ಪ ಜಾತಿಕಲಹವೆಬ್ಬಿಸುವ ಎಲ್ಲ ತಯಾರಿ ನಡೆಸಿದ್ದಾನೆ. ಅದಕ್ಕಾಗಿ ಅವನು ಹಾಕಿರುವ ಸ್ಕೀಮ್‌ಗಳು ಒಂದೇ ಎರಡೆ? ವೀರರಾಣಿ ಕಿತ್ತೂರ ಚನ್ನಮ್ಮಳ ಸಮಾವೇಶ, ಸ್ವಾಭಿಮಾನಿ ವ್ಯಕ್ತಿತ್ವ ವಿಕಸನ ತರಬೇತಿ ಕೇಂದ್ರ, ವಧುವರರ ಮಾಹಿತಿ ಕೇಂದ್ರ, ಉದ್ಯೋಗ ಮಾಹಿತಿ ಕೇಂದ್ರ- ಹೀಗೆ ಬೆಳೆಯುತ್ತಾ ಹೋಗುತ್ತದೆ ಅವುಗಳ ಪಟ್ಟಿ. ಇನ್ನೂ ತಮಾಷೆಯೆಂದರೆ ತನ್ನ ಹುಟ್ಟೂರಿನಲ್ಲೇ ಅವನ ಬೆನ್ನಿಗೆ ಪ್ರಾಯಶಃ ನಾಲ್ಕು ಜನ ಇಲ್ಲದ ತಿರಬೋಕಿ ಅವನು. "ರಾಜ್ಯದ 17 ಜಿಲ್ಲೆಯಲ್ಲಿ ಈಗಾಗಲೇ ನನ್ನ ಪರ ವಾತಾವರಣ ಸೃಷ್ಟಿಯಾಗಿದೆ; 54 ಕೇಂದ್ರಗಳ ಮೂಲಕ 1.10 ಲಕ್ಷ ಯುವಕರಿಗೆ ವಿಕಸನ ತರಬೇತಿ ಕೊಟ್ಟಿದ್ದೇನೆ; ದಾವಣಗೆರೆಯಲ್ಲಿ ನಿರಂತರವಾಗಿ ವಿಚಾರ ಸಂಗಮಗೋಷ್ಠಿ ಹಾಗೂ ಕಂಪ್ಯೂಟರ್ ಟ್ರೈನಿಂಗ್ ನೀಡುತ್ತಿದ್ದೇನೆ" ಎಂದೆಲ್ಲಾ ಪುಂಕಿಸುತ್ತಾನೆ. ಅಲ್ಲದೇ, ರಾಜ್ಯದಲ್ಲಿ ಪಂಚಮಸಾಲಿ ಸಮಾಜದ 18 ಸಹಕಾರಿ ಸಂಘಗಳು, ಗದಗದಲ್ಲೊಂದು ಶಿಕ್ಷಣ ಸಂಸ್ಥೆ ಹಾಗೂ ಚನ್ನಮ್ಮಳ ಮೂರ್ತಿ ಸ್ಥಾಪನೆಯಾಗಿದೆ ಎಂದು ತಮ್ಮ ಸಾಧನೆಯನ್ನು ಹೇಳಿಕೊಳ್ಳುವ ಈ ಸ್ವಯಂಘೋಷಿತ ನಾಯಕರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ.

ಇನ್ನೊಂದೆಡೆಗೆ ಜೂನಿಯರ್ ಮುತಾಲಿಕನಾಗುವ ಕನಸಿನಲ್ಲಿರುವ ಪ್ರೊ. ಸೋಮನಗೌಡ ಪಾಟೀಲ್ ಎಂಬ ಮತ್ತೊಬ್ಬ ಭಾಷಣವೀರ ಯುವ ವೇದಿಕೆಯ ಹೆಸರಿನಲ್ಲಿ ಶರಣ ಬಸಪ್ಪ ಹತ್ತಿ, ವ್ಹಿ.ಎಮ್. ಪಟ್ಟಣಶೆಟ್ಟಿಯೆಂಬ ಕೆಲಸವಿಲ್ಲದ ಟೀಚರ್‌ಗಳನ್ನು ಕಟ್ಟಿಕೊಂಡು ಉಪನ್ಯಾಸ ಶುರು ಹಚ್ಚಿಕೊಂಡಿದ್ದಾನೆ. ಮೇಲಾಗಿ "ಕಟ್ಟುವವರಿಗಿಂತ ಕೆಡಿಸುವವರು ಹೆಚ್ಚು, ಕೆಡಿಸುವವರಿಗೇನು ಗೊತ್ತು ಕಟ್ಟುವವನ ನೋವು?" ಎಂದು ತಮ್ಮೊಳಗೇ ಇರುವ ಹುಳುಕನ್ನು ಬಿಚ್ಚಿಡುತ್ತಿದ್ದಾರೆ.

77 ಲಕ್ಷದಷ್ಟು ಜನಸಂಖ್ಯೆ ಇದ್ರೂ ಅವರಿಗೆ ಸಮರ್ಥ ನಾಯಕರಿಲ್ಲದೇ ನಲುಗಿ ಹೋದವರು. ಹಿಂದೆ ಇದೇ ಸಮಾಜದವರೇ ಆದ ವೀರೇಂದ್ರ ಪಾಟೀಲ, ಜೆ. ಎಚ್. ಪಟೇಲ ಮುಖ್ಯಮಂತ್ರಿ ಆದರೂ ಸಮಾಜಕ್ಕೆ ಏನು ಮಾಡಿದ್ರು ಎನ್ನುವ ಪ್ರಶ್ನೆ ಹಸಿಹಸಿಯಾಗಿರುವಾಗಲೇ ಬೆಟ್ಟಪ್ಪ, ದಿಂಡೂರ್, ಉಮಾಪತಿಯಂಥವರು ಸಮಾಜ ಕಟ್ಟುವ ಕೆಲಸಕ್ಕೆ ಮುಂದಾಗಿದ್ದಾರೆ. ಇವರೇನು ಕಟ್ಟುತ್ತಾರೋ, ಕುಟ್ಟುತ್ತಾರೋ ಎಂಬ ಅನುಮಾನ ಮಾತ್ರ ಜನರಿಗೆ ಈಗಾಗಲೇ ಪ್ರಾರಂಭವಾಗಿದೆ. ಏಕೆಂದರೆ ಇವರ ವರಸೆಗಳನ್ನು ನೋಡಿದರೆ ಪಕ್ಕಾ ಓಟ್‌ಬ್ಯಾಂಕ್ ರಾಜಕೀಯ ಎದ್ದುಕಾಣುತ್ತದೆ.

ಆದರೆ ಪಂಚಮಸಾಲಿ ಸಮಾಜದ ಜನ "ನಿಮಗೆ ಕಟ್ಟು ಅಂತಾ ಹೇಳಿದವರಾರು? ಯಾರನ್ ಕೇಳಿ ಅಧ್ಯಕ್ಷ- ಕಾರ್ಯದರ್ಶಿಯಾದ್ರಿ? ನಿಮಗೆ ಬೇಕಾದವರನ್ನೆ ಸ್ವಾಮಿಗಳನ್ನಾಗಿ ನೇಮಿಸೊಲ್ಲ ಅಂತ ಏನು ಗ್ಯಾರಂಟಿ?" ಎಂದು ಇತ್ತೀಚೆಗೆ ರಾಣೇಬೆನ್ನೂರಿನಲ್ಲಿ ಜರುಗಿದ ಸಭೆಯಲ್ಲಿ ಪ್ರಶ್ನೆ ಮಾಡಿದ್ದಾರೆ. ಇವರ ಸಮಸ್ಯೆ ಬಗೆಹರಿಸಲು ಸಭೆಯಲ್ಲಿ 14 ಗಂಟೆ ಚರ್ಚೆ ಮಾಡಿದರಂತೆ. ಆದರೂ ಅದು ಬಗೆಹರಿಯದೆ ಕೊನೆಗೆ ಮಧ್ಯರಾತ್ರಿಯಲ್ಲಿ ಮರ್ಯಾದೆ ಕಳಕೊಂಡು ಮನೆ ಸೇರಿದ್ದಾರೆ.


ಜಯಮೃತ್ಯುಂಜಯ ಸ್ವಾಮಿ

ಸಂಘ ಕಟ್ಟಿದವರು ಎಲ್ಲಿ ಹೋದರು?

'ಅಖಿಲ ಭಾರತ ಪಂಚಮಸಾಲಿ ಸಮಾಜ' ಹಾಗೂ 'ಕರ್ನಾಟಕ ರಾಜ್ಯ ಪಂಚಮಸಾಲಿ ಸಮಾಜ' ಎಂಬ ಎರಡು ಬ್ಯಾನರ್‌ಗಳನ್ನು ಹುಟ್ಟು ಹಾಕಿದ್ದೇ ಓಟ್‌ಬ್ಯಾಂಕ್ ರಾಜಕೀಯ ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಓಟು ಮತ್ತು ಲೂಟಿಗಾಗಿಯೇ 'ಕರ್ನಾಟಕ ರಾಜ್ಯ ಪಂಚಮಸಾಲಿ ಸಮಾಜ'ವನ್ನು ಹುಟ್ಟು ಹಾಕಿದವರು ಮಾಜಿ ಮಂತ್ರಿ ದಿ|| ಎಸ್.ಆರ್. ಕಾಶಪ್ಪನವರ ಮತ್ತು ಈಗಾಗಲೇ ಸಮಾಜದ ದೃಷ್ಟಿಯಲ್ಲಿ ರಾಜಕೀಯವಾಗಿ ದಿವಂಗತರಾದ ಮಾಜಿ ಮಂತ್ರಿಗಳಾದ ಪಿ.ಸಿ. ಸಿದ್ದನಗೌಡ್ರ, ಎಸ್.ಬಿ. ಸಿದ್ನಾಳ, ಹಾಲಿ ಸಂಸದ ಎಮ್.ಸಿ. ಕುನ್ನೂರ, ಹಡಗಲಿಯ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಶ್ರೀಶೈಲಪ್ಪ ಬಿದರೂರ, ವ್ಹಿ.ಎಸ್. ಪಾಟೀಲ್ ಮುಂತಾದ ರಾಜಕೀಯ ಪುಢಾರಿಗಳು. ಇವರಲ್ಲಿ ಬಹುತೇಕರು ಅಧಿಕಾರ ಸಿಗದೆ ಮೂಲೆಗುಂಪಾಗಿದ್ದಾರೆ. ರಾಜಕೀಯವಾಗಿ ಮತ್ತೆ ಚಿಗುರಿಕೊಳ್ಳಲು ಜಾತಿರಾಜಕಾರಣವೊಂದೇ ದಾರಿ ಎಂಬುದು ಇವರಿಗೆ ಯಾವಾಗ ಜ್ಞಾನೋದಯವಾಯಿತೋ ಪಂಚಮಸಾಲಿಗಳ ಸಂಘಟನೆ, ಉದ್ಧಾರದ ಬಗ್ಗೆ ಪುಂಖಾನುಪುಂಖವಾಗಿ ಊದಲಾರಂಭಿಸಿಬಿಟ್ಟರು.

ಮೊದಲಿನಿಂದ ಅಪಖ್ಯಾತಿಗೆ ಹೆಸರಾದ ಅವಕಾಶವಾದಿ ಎಮ್.ಸಿ.ಕುನ್ನೂರ ತನಗೆ ಸರಿಯಾದ ಪ್ಲಾಟ್‌ಫಾರ್ಮ್ ಜಾತಿಯಿಂದ ಸಿಗಲಿಲ್ಲ ಅಂತಾ ತಾನೇ ಸ್ವಯಂ ಒಂದು ಸಂಘಟನೆ ಹುಟ್ಟು ಹಾಕಿದ. ಅದಕ್ಕೆ ಅಖಿಲ ಭಾರತ ಪಂಚಮಸಾಲಿ ಸಮಾಜ ಅಂತಾ ಬೋರ್ಡ್ ಹಾಕಿಕೊಂಡು ಹಿರೇಕೆರೂರಿನಲ್ಲಿ ಒಂದು ಸಮಾವೇಶವನ್ನೂ ಮಾಡಿದ. ಲಕ್ಷಾಂತರ ಜನ ಸೇರುತ್ತಾರೆ, ದುಡ್ಡು ಸೇರುತ್ತೆ, ಮಾಡಿದ್ದ ಸಾಲ ಸಲೀಸಾಗಿ ಮುಟ್ಟುತ್ತೆ ಎಂದು ಹಗಲುಗನಸು ಕಂಡಿದ್ದ. ಪಂಚಪೀಠದ ರಂಭಾಪುರಿ ಮತ್ತು ಕಾಶಿ ಸ್ವಾಮಿಗಳನ್ನು ಇಂವಾ ಕರೆಸುತ್ತಾನೆ ಅಂತಾ ಗೊತ್ತಾಗಿ ಜನ ಸಾವಿರಾರು ಸಂಖ್ಯೆಯಲ್ಲಿ ಇಳಿದುಬಿಟ್ಟರು. ಆದರೂ ಕಾಶಿ ಜಗದ್ಗುರು 'ಇನ್ನೊಬ್ಬ ಸ್ವಾಮಿ ಮಾಡೋ ವಿಚಾರ ಕೈಬಿಡಿ, ಎಲ್ಲರೂ ಹೊಂದಿಕೊಂಡು ಹೋಗೋಣ, ನಮ್ಮಿಂದ ಆದ ತಪ್ಪಿಗೆ ಕ್ಷಮೆ ಇರಲಿ' ಎಂದು ಎಕ್ಸ್‌ಕ್ಯೂಸ್ ಕೇಳಿ ಭಯ ಹುಟ್ಟಿದ್ದನ್ನು ಬಯಲು ಮಾಡಿದ. ಕುನ್ನೂರನ ಈ 50-50 ರಾಜಕಾರಣ ಜನರ ಬಾಯಲ್ಲಿ ದ್ರೋಹಿ ಅನಿಸಿಕೊಳ್ಳುವಷ್ಟು ಬೆಳೆದುಬಿಟ್ಟಿತು. ಇನ್ನೂ ವಿಚಿತ್ರ ಎಂದರೆ ಇವನದೇ ಸಂಘಟನೆಯ ಕಾರ್ಯದರ್ಶಿಯಾದ ಎಮ್. ಬಸವರಾಜ ಚಿಕ್ಕಮಲ್ಲೂರ ಎಂಬುವವನು ಕುನ್ನೂರನ ವಿರುದ್ಧವೇ ತಿರುಗಿ ಬಿದ್ದು "ಸಮಾವೇಶದ ಹೆಸರಿನಲ್ಲಿ ಕುನ್ನೂರ್ ಹೇಸಿಗೆ ರಾಜಕಾರಣ ಮಾಡುತ್ತಾ ಹಣ ಕೊಳ್ಳೆ ಹೊಡೆದ" ಅಂತ ಪ್ರೆಸ್‌ಮೀಟ್ ಮಾಡಿ ಟಾಂಟಾಂ ಹೊಡೆದುಬಿಟ್ಟ. ಈ ಒಳಜಗಳಗಳಿಂದಲೇ ಅರ್ಥವಾಗುತ್ತೆ ಈ ಸ್ವಯಂಘೋಷಿತ ನಾಯಕಮಣಿಗಳು ಸೆಪರೇಟ್ ಗುರುಪೀಠ ಮತ್ತು ಅದಕ್ಕೊಬ್ಬ ಸ್ವಾಮಿಯನ್ನು ನೇಮಿಸುತ್ತಿರುವುದು ಪಂಚಮಸಾಲಿಗಳ ಉದ್ಧಾರಕ್ಕೋ ಅಥವಾ ತಮ್ಮ ಸ್ವ-ಉದ್ಧಾರಕ್ಕೊ ಎಂದು.

ಯಾರು ಈ ಪಂಚಮಸಾಲಿಗಳು?


ಪಂಚಮಸಾಲಿಯರು ಅಂದರೆ ನಾಲ್ಕನೇ ವರ್ಗದ ಶೆಟ್ಟರು ಎಂದು ಸಂಶೋಧಕ ಎಮ್.ಎಮ್. ಕಲ್ಬುರ್ಗಿ ಅಭಿಪ್ರಾಯಪಟ್ಟಿದ್ದಾರೆ. ಆದರೆ ಸಿದ್ದಲಿಂಗ ದೇಸಾಯಿ ಎಂಬ ಪಾರ್ಟ್ ಟೈಂ ಕವಿ "ಇದು ಮೂಲತಃ ಜೈನ್‌ರ ಒಂದು ಭಾಗ. ಒಕ್ಕಲುತನ ಮಾಡಿದ್ದಕ್ಕಾಗಿ ಇವರಿಗೆ ಪಂಚಮಸಾಲಿ ಅಂಥಾ ಕರೆದರು" ಎಂದು ಲೇಖನ

ಮಹಾನಗರ ಪಾಲಿಕೆ ಆಯುಕ್ತ ಪ್ರಾಣಲಿಂಗ ಶಿವಸಾಲಿ ಪರಾರಿ!

ದಾವಣಗೆರೆ

ದಾವಣಗೆರೆ ಮಹಾನಗರ ಪಾಲಿಕೆಯ ಆಯುಕ್ತ ಪ್ರಾಣಲಿಂಗ ಶಿವಸಾಲಿ ಎಂಬ ಮಹಾಭ್ರಷ್ಟನ ಬಗ್ಗೆ 'ಲಂಕೇಶ್'ನಲ್ಲಿ ಈಗಾಗಲೇ ನಾಲ್ಕೈದು ಬಾರಿ ವರದಿ ಮಾಡಲಾಗಿದೆ. ಸದ್ಯಕ್ಕೆ ಇವನ ಬಗ್ಗೆ ಬರೆಯುವುದು ಬೇಡ ಎಂದುಕೊಂಡಿದ್ದಾಗಲೇ ಮುಷ್ಕರನಿರತ ದಾವಣಗೆರೆ ಮಹಾನಗರ ಪಾಲಿಕೆಯ ನೌಕರರನ್ನು ಕೆಣಕಿ "ಗ್ಯಾದ್ಯಾಗಿನ ಗೂಟ ಕಿತ್ತು...." ಬದಿದುಕೊಂಡಿರುವ ಆಯುಕ್ತ ಶಿವಸಾಲಿ ನೌಕರರಿಗೆ ಹೆದರಿ ಬೆಂಗಳೂರಿಗೆ ಓಡಿಹೋಗಿದ್ದಾನೆ. ಆದರೆ ಇಲ್ಲಿನ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ತನ್ನ ಪರಮಾಪ್ತ ವಂಚಕ ಶಿವಸಾಲಿಯನ್ನು ಉಳಿಸಿಕೊಳ್ಳಲು ಮಹಾನಗರ ಪಾಲಿಕೆಯ ನೌಕರರ ಹತ್ತಿರ ರಾಜಿ ಕಬೂಲಿಗಿಳಿದಿದ್ದಾನೆ.

ಘಟನೆಯ ಹಿನ್ನೆಲೆ


ಪ್ರಾಣಲಿಂಗ ಶಿವಸಾಲಿ

ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘ ಜೂನ್ 24ರಂದು ಸಭೆ ಸೇರಿ ಐದನೇ ವೇತನ ಆಯೋಗದ ಜಾರಿ ಸೇರಿದಂತೆ ಕೆಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡಿದ್ದಾರೆ. ಅದರಂತೆ ನಗರಪಾಲಿಕೆಯ ಆಸುಪಾಸಿನಲ್ಲಿ ಕೆಲವು ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಕಟ್ಟಿ ತೋಳಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಜುಲೈ1 ರಿಂದ ನಿರಶನವನ್ನು ಪ್ರಾರಂಭಿಸಿದ್ದಾರೆ. ಆದರೆ ಕಟ್ಟಿರುವ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ತೆಗೆಸುವಂತೆ ಆಯುಕ್ತ ಶಿವಸಾಲಿ ಪೌರಸೇವಾ ನೌಕರರ ಜಿಲ್ಲಾ ಅಧ್ಯಕ್ಷ ಗೋವಿಂದರಾಜ್ ಮತ್ತು ತಾಲೂಕು ಅಧ್ಯಕ್ಷ ಬೀರಪ್ಪನವರನ್ನು ಕರೆಸಿ ಹೇಳಿದ್ದಾನೆ. ಈ ಇಬ್ಬರು ನೌಕರ ಸಂಘದ ನಾಯಕರು 'ಪ್ರತಿಭಟನೆಯ ಕುರಿತ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ತೆಗೆಯುವುದಿಲ್ಲ' ಎಂದಿದ್ದಾರೆ. ಸಾಮಾನ್ಯ ನೌಕರರು ತನ್ನನ್ನು ಕೇವಲವಾಗಿ ಪರಿಗಣಿಸಿದಾಗ ಆಯುಕ್ತನಿಗೆ ತಳ ಉರಿಯಲು ಪ್ರಾರಂಭವಾಗಿ ಸಮಯಕ್ಕಾಗಿ ಹೊಂಚುಹಾಕಿ ಕುಳಿತಿದ್ದಾನೆ.

ನೌಕರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕದ ಪದಾಧಿಕಾರಿಗಳು ತಮ್ಮ ಬೇಡಿಕೆಗಳ ಕುರಿತು ಪೌರಾಡಳಿತ ನಿರ್ದೇಶಕ ಕಾನಿರಾಂ ಮತ್ತು ಪೌರಾಡಳಿತ ಸಚಿವ ಆಲಂಗೂರು ಶ್ರೀನಿವಾಸ್‌ರೊಂದಿಗೆ ಚರ್ಚಿಸಲು ಹೋಗಿದ್ದ ಸಂದರ್ಭದಲ್ಲಿ ಅಂದರೆ ಜುಲೈ 6 ರಂದು ಬೆಳಿಗ್ಗೆಯೇ ಮ.ನ.ಪಾ. ನೌಕರರು ಕಟ್ಟಿದ್ದ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಆಯುಕ್ತ ಶಿವಸಾಲಿ ಕೀಳಿಸಿ ಗುಡ್ಡೆಹಾಕಿದ್ದಾನೆ. ಕೆಲಸಕ್ಕೆ ಬಾರದ ಯಾವ್ಯಾವುದೋ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳು ನಗರದೊಳಗೆ ಯಾವುದೇ ಅನುಮತಿ ಪಡೆಯದೆ ರಾರಾಜಿಸುತ್ತಿರುವಾಗ ತಮ್ಮ ಕನಿಷ್ಟ ಬೇಡಿಕೆಗಳ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಕಿತ್ತುಹಾಕಿರುವ ವಿಷಯ ತಿಳಿದು ನಗರಸಭೆಯ ನೌಕರರು ಕೆಂಡಮಂಡಲವಾಗಿ ಆಯುಕ್ತ ಶಿವಸಾಲಿಯ ಛೇಂಬರ್‌ಗೆ ನುಗ್ಗಿದ್ದಾರೆ. ಆದರೆ ನೌಕರರು ಆಕ್ರೋಶಗೊಂಡಿರುವುದನ್ನು ಈ ಮೊದಲೇ ತಿಳಿದುಕೊಂಡಿದ್ದ ಶಿವಸಾಲಿ ಯಾವಾಗಲೋ ಜಾಗ ಖಾಲಿ ಮಾಡಿದ್ದ.

ಪ್ರಾಣಲಿಂಗ ಶಿವಸಾಲಿಯ ಕುತಂತ್ರ

ಶಿವಸಾಲಿ ಬರೀ ಆಯುಕ್ತನಷ್ಟೇ ಅಲ್ಲ, ಒಗ್ಗಟ್ಟನ್ನು ಒಡೆಯುವ ನರಿ ಬುದ್ಧಿಯ ರಾಜಕಾರಣಿಯಾಗಿಯೂ ಪಾತ್ರ ವಹಿಸುತ್ತಾನೆಂಬುದಕ್ಕೆ ಇಲ್ಲಿ 27 ವರ್ಷಗಳಿಂದ ಒಂದಾಗಿದ್ದ ಪೌರಸೇವಾ ನೌಕರರ ಸಂಘವನ್ನು ತನ್ನ ಕಮಾಯಿಯ ಅನುಕೂಲಕ್ಕಾಗಿ ಒಡೆದು ಸ್ಥಳೀಯವಾಗಿ "ದಾವಣಗೆರೆ ಮಹಾನಗರ ಪಾಲಿಕೆಯ ನೌಕರರ ಸಂಘ"ವನ್ನು ಪ್ರಾರಂಭಿಸಿದ್ದಾನೆ. ತನ್ನದೇ ಜಾತಿಯವನಾದ ವಿರೇಶ್ ಎನ್ನುವವನನ್ನು ಈ ಸಂಘಕ್ಕೆ ಕಾರ್ಯದರ್ಶಿಯಾಗಿ ನೇಮಿಸಿ, ಬ್ರಾಹ್ಮಣ ಗುರುರಾಜಾಚಾರ್‌ನನ್ನು ಕಾನೂನು ಸಲಹೆಗಾರನನ್ನಾಗಿ ಮಾಡಿದ್ದಾನೆ. ಪರಿಸ್ಥಿತಿ ಹೇಗಾಗಿದೆಯೆಂದರೆ ಇಲ್ಲಿ ರಾಜ್ಯಮಟ್ಟದ ಪೌರಸೇವಾ ನೌಕರರ ಸಂಘ ಶಿವಸಾಲಿಯ ವಿರುದ್ಧ ಪ್ರತಿಭಟನೆಯಲ್ಲಿ ನಿರತವಾಗಿರುವಾಗ ಶಿವಸಾಲಿ ಸೃಷ್ಟಿಸಿರುವ ಸ್ಥಳೀಯ ಸಂಘ ಶಿವಸಾಲಿಗೆ ತಾಳಹಾಕುತ್ತಿದೆ. ಈ ಬಗ್ಗೆ ಪೌರಸೇವಾ ನೌಕರರಲ್ಲಿ ವಿಪರೀತ ಸಿಟ್ಟಿದ್ದರೂ ಇತ್ತೀಚೆಗಷ್ಟೇ ಸುಬಾನ್ ಎಂಬ ಪತ್ರಕರ್ತ ಟಿಪ್ಪುನಗರದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಶಿವಸಾಲಿಯ ಮುಖಕ್ಕೆ ಉಗಿದು ನೂರಾರು ಜನರೊಂದಿಗೆ ಪ್ರತಿಭಟನೆಗಿಳಿದಾಗ ನಗರ ಪಾಲಿಕೆಯ ಇದೇ ನೌಕರರು ಶಿವಸಾಲಿಯ ಪರವಾಗಿ ಪರ್ಯಾಯ ಪ್ರತಿಭಟನೆಗಿಳಿದು ಇವನನ್ನು ಬೆಂಬಲಿಸಿದ್ದರು. ಇಂತಹ ಯಾವ ಉಪಕಾರಗಳನ್ನು ಸ್ಮರಿಸಿಕೊಳ್ಳುವ ಜಾಯಮಾನದವನಲ್ಲದ ಶಿವಸಾಲಿ ಕಾನೂನುಬದ್ಧವಾಗಿ ನೌಕರರು ನಡೆಸುತ್ತಿರುವ ಮುಷ್ಕರವನ್ನು ಸಹಿಸದೆ ಬ್ಯಾನರುಗಳನ್ನು ಕೀಳಿಸಿ ತನ್ನ ಬುಡಕ್ಕೆ ಈಗ ನೀರು ತಂದುಕೊಂಡಿದ್ದಾನೆ.


ಜಿಲ್ಲಾಧಿಕಾರಿ ದ್ಯಾಬೇರಿ

ಊರು ಬಿಟ್ಟಿರುವ ಶಿವಸಾಲಿ ಹೋರಾಟದ ಕಣಕ್ಕಿಳಿದಿರುವ ನೌಕರರ ಕೈಗೆ ಮೊನ್ನೆ ಏನಾದರೂ ಸಿಕ್ಕಿದ್ದರೆ ತಾನು ತುಮಕೂರಿನಲ್ಲಿ ತಿಂದ ಧರ್ಮದೇಟುಗಳಿಗಿಂತ ಹತ್ತುಪಟ್ಟು ಹೆಚ್ಚು ತಿನ್ನಬೇಕಾಗುತ್ತಿತ್ತೇನೊ! ಇದನ್ನು ಗಮನಿಸಿಯೋ ಏನೋ, ಶಿವಸಾಲಿ ನಗರಪಾಲಿಕೆಗೆ ಬರದೆ ಬೆಂಗಳೂರಿನಲ್ಲಿ ಅವಿತುಕೊಂಡಿದ್ದಾನೆ. ಆದರೆ ಶಿವಸಾಲಿಯನ್ನು ಇಲ್ಲಿಂದ ಎತ್ತಂಗಡಿ ಮಾಡಿಸುವವರೆಗೂ ಬಿಡುವುದಿಲ್ಲವೆಂಬ ಹಠ ತೊಟ್ಟ ನೌಕರರು ಬೀದಿಗಿಳಿದಿದ್ದಾರೆ. ಆದರೆ ಜಿಲ್ಲಾಧಿಕಾರಿ ದ್ಯಾಬೇರಿ ಆಯುಕ್ತನ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು "ಬ್ಯಾನರುಗಳನ್ನು ಪುನಃ ಕಟ್ಟಿಸೋಣ, ಒಡೆದುಹೋದ ಸಂಘವನ್ನು ಒಂದು ಮಾಡುತ್ತೇನೆ" ಎನ್ನುವ ಬಣ್ಣದ ಭರವಸೆಗಳೊಂದಿಗೆ ನೌಕರರ ಸುತ್ತ ರಿಂಗಣಿಸುತ್ತಿದ್ದಾನೆ. ಆದರೆ ಆಯುಕ್ತ ಶಿವಸಾಲಿ ಇಡೀ ರಾಜ್ಯದ ಪೌರಸೇವಾ ನೌಕರರಿಗೆ ಅವಮಾನ ಮಾಡಿದ್ದಾನೆಂದು ಹೇಳುತ್ತಿರುವ ಮಹಾನಗರ ಪಾಲಿಕೆ ಪೌರಸೇವಾ ನೌಕರರು ಆಯುಕ್ತ ಶಿವಸಾಲಿಯನ್ನು ಇಲ್ಲಿಂದ ಹೊರಹಾಕಲು ಪಣತೊಟ್ಟು ಬೀದಿಗಿಳಿದಿದ್ದಾರೆ. ಶಿವಸಾಲಿಗೆ ಇನ್ನು ಇಲ್ಲಿ ಉಳಿಗಾಲವಿಲ್ಲವೆನಿಸುತ್ತದೆ. ಆದರೆ ಈಗಲೂ ಶಿವಸಾಲಿಯನ್ನು ಕಾಯಲು ಮಂತ್ರಿ ರವೀಂದ್ರನಾಥ್ ಮತ್ತು ಜಿಲ್ಲಾಧಿಕಾರಿ ದ್ಯಾಬೇರಿ ಮುಂದಾದರೆ ಪೌರಸೇವಾ ನೌಕರರು ಇವರನ್ನು ಕ್ಷಮಿಸುವುದಿಲ್ಲ.

-ಚಂದ್ರಶೇಖರ ತೋರಣಘಟ್ಟ

ಬರೆದರು. ಆದರೆ ಚತುರ್ವರ್ಣ ಪದ್ಧತಿಯಲ್ಲಿ ಇವರಿಗೆ ಪಂಚಮ ಸ್ಥಾನ ಅಂತ ಹೇಳಿ ಬ್ರಾಹ್ಮಣರು ಕೇಕೆ ಹೊಡೆದರು.

ವಾದ ಏನೇ ಇರಲಿ. ಇಂದಿಗೂ ಕೃಷಿಯೇ ಪಂಚಮಸಾಲಿಯರ ಉದ್ಯೋಗ. ಅವರಲ್ಲಿ ಬಲಾಢ್ಯ ಇದ್ದವರು ಗೌಡ್ರು ಆದರು; ಲೆಕ್ಕ ಬರೆದವರು ಬಣಜಿಗರಾದರು; ಮಣ್ಣು ಹೊತ್ತವರು ಒಕ್ಕಲಿಗರಾದರು; ಹೂವು ಪತ್ರಿ ಹಂಚಿದವರು ಹೂಗಾರರೆನಿಸಿಕೊಂಡರು; ನೂಲು ನೇತವರು ನೇಕಾರರಾದರು; ಆದರೆ ಇವರೆಲ್ಲರ ಮನೆ ಪೂಜೆ ಮಾಡಿದವರು ಸ್ವಾಮಿಗಳಾದರು (ಐನೋರು). ಅಂದ್ರೆ ಮೂಲತಃ ಇವರೆಲ್ಲ ಪಂಚಮರೆ. ಪೂಜೆ ಮಾಡಿದ ಐನೊರು ಬ್ರಾಹ್ಮಣರ ಮಂತ್ರಗಳನ್ನು ಹರಸಾಹಸ ಮಾಡಿ ಕಲಿತುಕೊಂಡು ಹರಿ ಇದ್ದ ಜಾಗದಲ್ಲಿ ಹರ ಅಂತಾ ತಿದ್ದಿದರು; ಶಿವ ದೊಡ್ಡವನು ಅಂತಾ ಹೇಳುತ್ತಾ ತಾವೂ ದೊಡ್ಡವರಾಗಬೇಕು ಅನ್ನುತ್ತಿರುವಾಲೇ ಸಂಶೋಧಕ ಕಲ್ಬುರ್ಗಿ ಮಲ್ಲಿನಾಥ ಜಂಗಮರ ಮೂಲವನ್ನೇ ಜಾಲಾಡಿ ಇವರು ಮೂಲತಃ ಆಂಧ್ರದವರು, ಮಠದ ಸಂಸ್ಕೃತಿ ಆಂಧ್ರ ಮೂಲದ್ದು ಎಂದು ಬಸವ ಪಥದಲ್ಲಿ ಲೇಖನ ಬರೆದು ಎಲ್ಲಾ ಐನೋರಿಗೆ ಉರಿ ಹಾಕಿದರು.


ರಂಭಾಪುರಿ ಜಗದ್ಗುರು

ಹಾಳೆಯಲ್ಲಿ ಬರೆದಿದ್ದ ಪುರಾಣ ತಾಳೆಗರಿಯದ್ದೆ?

ಪಂಚಮಸಾಲಿ ಜನರಿಗೂ ಜಂಗಮರಿಗೂ ಮುಂದೊಂದು ದಿನಾ ಮಾರಾಮಾರಿ ಆಗೋದು ನಿಜ. ರಾಜ್ಯದ ರೇಣುಕ ಸಿದ್ಧಾಂತದ ಪೀಠಾಧೀಶರುಗಳು ಜನರ ಮುಗ್ಧತೆಗೆ ದ್ರೋಹವೆಸಗುತ್ತಿದ್ದಾರೆಂದು ಪಂಚಮಸಾಲಿ ಸಂಘಟನೆಯ ಎಂ. ಬಸವರಾಜ ಓಪನ್ನಾಗಿ ಉಗಿಯುತ್ತಿದ್ದಾನೆ. "ಆದಿ ರೇಣುಕರು ಅಗಸ್ತ್ಯ ಮಹಾಋಷಿ ಸಮಕಾಲೀನರು; ಅಂದರೆ ರಾಮಾಯಣ ಕಾಲದವರು; ರಾವಣನಿಗೆ ಲಿಂಗದೀಕ್ಷೆಗೆ ಅಣಿಮಾಡಿ ಮೂರು ಕೋಟಿ ಲಿಂಗ ಸ್ಥಾಪನೆ ಮಾಡಲು ಅವರೇ ಖುದ್ದು ಹೇಳಿದ್ದಾರೆ" ಎಂದು ರೀಲು ಬಿಡುವ ಇವನು ರೇಣುಕರ ಹೆಸರಿನಲ್ಲಿ ಒಂದು ಲಿಂಗಕ್ಕೆ 4500 ರೂಪಾಯಿಯಂತೆ ರೇಟು ಫಿಕ್ಸ್ ಮಾಡಿ ರೇಣುಕರನ್ನು ಮಾರಲು ಹೊರಟಿದ್ದಾನೆ. ಆದರೆ, ಅವರಣ್ಣ ಕಲಾದಗಿಯ ಪಟ್ಟದ ದೇವರು, ಶಾಸಕ ಗದ್ದಿದೇವರಮಠ ಇದೊಂದು ಇಂಟರ್‌ನ್ಯಾಷನಲ್ ಸ್ಕೀಮ್ ಅಂತಿದ್ದಾರೆ. ಇದನ್ನ ಕಂಡ ರಂಭಾಪುರಿ ತಮಗೂ ಇದರಲ್ಲಿ ಪರ್ಸೆಂಟೇಜ್ ಬೇಕು ಅಂತ ತಗಾದೆ ತೆಗೆದಿದ್ದಾರಂತೆ. ಅಲ್ಲದೆ ಇವರು ಹೇಳಿಕೊಂಡು ತಿರುಗುತ್ತಿರುವ ಸಿದ್ಧಾಂತ ಶಿಖಾಮಣಿ ಎಂಬ ಗ್ರಂಥವನ್ನು ನಾಗಭೂಷಣ ಶಾಸ್ತ್ರಿ ಎಂಬುವರು ಹಾಳೆಯ ಮೇಲೆ ಬರೆದಿದ್ದಾರೆ. ಆದರೆ ಅದನ್ನ ಈತ ತಾಳೆಗರಿ ಎಂದೆಲ್ಲ ಓಲ್ಡ್ ಸ್ಟೋರಿ ಹೇಳಿ ಹಣ ಮಾಡುತ್ತಿದ್ದಾನೆ ಎಂಬುದು ಸ್ವಾಮಿಗಳ ಅಂಬೋಣ. ಇಂತಹ ಕುತಂತ್ರಿಗಳಿಗೆ ಪಂಚಮಸಾಲಿ ಜನ ಮುಂದೊಂದು ದಿನ ತಕ್ಕ ಶಾಸ್ತಿ ಮಾಡುವ ದಿನ ದೂರವಿಲ್ಲವೇನೋ ಎಂಬುದು ಅವರ ಗುಟುರು. ಈ ದ್ವಂದ್ವ ನಿಲುವಿಗೆ ಉತ್ತರಿಸಲು ಆ ರೇಣುಕರೆ ಬರಬೇಕು ಅಷ್ಟೇ.

ವೈಯಕ್ತಿಕ ದ್ವೇಷ ಸಂಘಟನೆಗೆ ದಾರಿ

ದಾವಣಗೆರೆಯ ಫೇಮಸ್ ಜವಳಿ ವರ್ತಕ ಬಿ.ಸಿ. ಉಮಾಪತಿಗೂ ರಂಭಾಪುರಿ ಸ್ವಾಮಿಗೂ ಎಣ್ಣೆ ಸೀಗೇಕಾಯಿ ಸಂಬಂಧ. ಒಂದು ಕಾಲದಲ್ಲಿ ರಂಭಾಪುರಿಯ ಪಾದದಲ್ಲಿ ಸದಾ ತಲೆ ಆಡಿಸುತ್ತಿದ್ದ ಉಮಾಪತಿ ಕಳೆದೆರಡು ವರ್ಷಗಳಿಂದ ಸ್ವಾಮಿಯನ್ನು ಸ್ವಾಪ್ ಮಾಡೋದು ಹೇಗೆ ಅಂತಾ ಸ್ಕೆಚ್ ಹಾಕುತ್ತಾ ಕಂಡವರಲ್ಲಿ ಡೀಲ್‌ಗೆ ಇಳಿದಿದ್ದಾನೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಇವನ ಸರ್ವಾಧಿಕಾರದಡಿಯಲ್ಲಿರುವ ದಾವಣಗೆರೆಯ ಭವ್ಯ ರೇಣುಕಮಂದಿರವನ್ನು ರಂಭಾಪುರಿ ತಮಗೆ ಬಿಟ್ಟು ಕೊಡು ಎಂದಾಗ ಈತ ಸಾಧ್ಯವೇ ಇಲ್ಲ ಎಂದಿದ್ದನಂತೆ. ಇದರಿಂದ ಸಿಟ್ಟಿಗೆದ್ದ ಸ್ವಾಮಿ ಇವನ ಅಂಗಡಿಯಿಂದ ಪ್ರತಿವರ್ಷ ಲಕ್ಷಾಂತರ ಬಟ್ಟೆ ಖರೀದಿಸುತ್ತಿದ್ದುದನ್ನು ನಿಲ್ಲಿಸಿಬಿಟ್ಟರು. ಅಷ್ಟಕ್ಕೆ ಸುಮ್ಮನಾಗದ ರಂಭಾಪುರಿ ಸ್ವಾಮಿ 'ಉಮಾಪತಿ ಬಹಳ ಡೇಂಜರ್, ಅವನಲ್ಲಿಗೆ ಹೋಗಬೇಡಿ' ಎಂದು ಉಳಿದ ಸ್ವಾಮಿಗಳ ಕಿವಿಯಲ್ಲೂ ಊದಿಬಿಟ್ಟರಂತೆ. ಇದು ಉಮಾಪತಿ ಮತ್ತು ರಂಭಾಪುರಿ ಸಂಬಂಧ ಹಳಸಲು ಕಾರಣವಾಯಿತು.

ಅಲ್ಲದೆ ಹಿರೇಕೆರೂರಿನ ಕಿತ್ತೂರ ಚೆನ್ನಮ್ಮಳ ಸಮಾವೇಶಕ್ಕೆ ಕುಸ್ನೂರ ರಂಭಾಪುರಿ ಹಾಗೂ ಕಾಶಿ ಸ್ವಾಮಿಗಳನ್ನು ಕರೆಯಿಸಿ ಸ್ಟೇಜ್ ಮೇಲೆ ಹತ್ತಿಸಿದ ಎಂದು ಸಿಟ್ಟಿಗೆದ್ದ ಉಮಾಪತಿ ಕುಸ್ನೂರನೊಂದಿಗೂ ಬಹಿರಂಗ ಜಗಳಕ್ಕಿಳಿದ. ಪಂಚಮಸಾಲಿ ಸಂಘಟನೆಗೆ ಪ್ರಮುಖ ಫೈನಾನ್ಸರ್ ಆದ ಉಮಾಪತಿಗೆ ಈಗ ಜಂಗಮರ ಸಹವಾಸ ಸಾಕಾಗಿದೆ. ಅದೆಷ್ಟೇ ಹಣ ಹೋದರೂ ಸರಿ ಸೆಪರೇಟ್ ಸ್ವಾಮಿ, ಮಾಡೇ ತೀರ್ರೇನೆ ಎಂಬ ಹುಂಬು ಹಠಕ್ಕೆ ಬಿದ್ದಿದ್ದಾನೆ. ಅದಕ್ಕಾಗಿಯೇ ಭಾವಿ ಬೆಟ್ಟಪ್ಪ ಮತ್ತು ದಿಂಡೂರ್ ದಿಗ್ಗಜರಿಗೆ ದುಂಬಾಲು ಬಿದ್ದಿದ್ದಾನೆ. ಆದರೆ ಇವನ ಜೊತೆಗಿರುವವರು ಡೋಂಗಿ ನಾಯಕರು ಎಂಬುದು ಇವನಿಗೆ ಅರ್ಥವಾಗಿಲ್ಲ ಅಂತ ಕಾಣುತ್ತೆ. ಉಮಾಪತಿಯಿಂದ ಇಷ್ಟು ದಿನಾ ಸ್ವಾಮಿಗಳು ತಿಂದರು; ಈಗ ಬೆಟ್ಟಪ್ಪ-ದಿಂಡೂರ್ ಜೋಡಿಯ ಸರದಿ.

ನೂತನ ಸ್ವಾಮಿ ಆಗೋರ್‍ಯಾರು?



ನಂದೀಹಳ್ಳಿ ಹಾಲಪ್ಪ

ಪೀಠಕ್ಕೆ ಯಾರನ್ನು ಸ್ವಾಮಿ ಮಾಡಬೇಕು ಅನ್ನೋ ವಿಚಾರ ಈಗ ಪಂಚಮಸಾಲಿ ಸಮಾಜದ ಸ್ವಯಂ ಘೋಷಿತ ನಾಯಕರಾದ ಬೆಟ್ಟಪ್ಪ-ದಿಂಡೂರ್ ಜೋಡಿಯ ಅಜೆಂಡಾದ ಮೊದಲನೇ ಪಾಯಿಂಟ್. ಯಾವುದೋ ವಯಸ್ಸಾದ ನಿಸ್ತೇಜಕನೊಬ್ಬನಿಗೆ ಸ್ವಾಮಿ ಎಂಬ ಪಟ್ಟಕಟ್ಟಿ, ಗದ್ದುಗೆಯ ಮೇಲೆ ಉತ್ಸವಮೂರ್ತಿಯಂತೆ ಕೂರಿಸಿ, ಆತನಿಗೆ ಪೂಜೆ, ಪುನಸ್ಕಾರ, ಯೋಗ, ಧ್ಯಾನ, ಉಪದೇಶ ಮುಂತಾದವುಗಳನ್ನು ಮಾಡಿಕೊಂಡಿರುವಂತೆ ಅಪ್ಪಣೆ ಮಾಡಿ ಗುರು ಮಠದ ನೈಜ ರಾಜ್ಯಭಾರವನ್ನು ತಾವೇ ಮಾಡಬೇಕೆಂಬ ಲೆಕ್ಕಾಚಾರ ಅವರದು. ಹೀಗೆ ಈಗ ಅಂತಹ ನಿಸ್ತೇಜಕ ಆಸಾಮಿಯೊಬ್ಬನ ಹುಡುಕಾಟ ಶುರುವಾಗಿದೆ. ಬೆಟ್ಟಪ್ಪ-ದಿಂಡೂರ್ ಜೋಡಿಯು ಹೋದಲ್ಲೆಲ್ಲ ಸ್ವಾಮಿಯೊಬ್ಬ ಬೇಕಾಗಿದ್ದಾನೆ ಅಂತ ಬೋರ್ಡು ಬರೆಸಿಕೊಂಡು ತಿರುಗಾಡುತ್ತಿರುವಂತೆ ಭಾಸವಾಗುತ್ತಿದೆ.

ಆದರೆ ದಾವಣಗೆರೆಯಲ್ಲಿರುವ ಜಯಮೃತ್ಯುಂಜಯ ಸ್ವಾಮಿ (ಪೂರ್ವದ ಹೆಸರು ವೀರೇಶ) ಪಕ್ಕಾ ಪಂಚಮಸಾಲಿ ಮನೆತನದ ಹುಡುಗ. ಆಗಲೇ ಮರಿಸ್ವಾಮಿಯಾಗಿ ಪಟ್ಟ ಕಟ್ಟಿಕೊಂಡು ರಾಜ್ಯದ ಪಂಚಮಸಾಲಿ ಸಮಾಜದ ಭಾವಿ ಸ್ವಾಮಿ ಅಂತಾ ಹೆಸರು ಪಡಕೊಂಡಿರೋರು. ಇವರನ್ನೇ ನೂತನ ಸ್ವಾಮಿ ಮಾಡ್ತಾರೆ ಅಂತ ಪಂಚಮಸಾಲಿ ಜನ ಮಾತಾಡುತ್ತಿರುವಾಗಲೇ ಬೆಟ್ಟಪ್ಪ ದಿಂಡೂರ್ ಹಾಗೂ ಇತ್ತೀಚೆಗೆ ಪಾರ್ಟಿ ಚೇಂಜ್ ಮಾಡಿ ಗುರುಪೀಠದಿಂದ ವಿರಕ್ತ ಪೀಠಕ್ಕೆ ವಲಸೆ ಬಂದ ಚೆನಬಸಪ್ಪ ಅಂಡ್ ಸನ್ಸ್‌ನ ಬಿ. ಸಿ. ಉಮಾಪತಿ ಈ ಮೂವರೂ ಸೇರ್ಕೊಂಡು ಜಯಮೃತ್ಯುಂಜಯನನ್ನು ನೂತನ ಸ್ವಾಮಿಯನ್ನಾಗಿ ಮಾಡುವುದು ಬೇಡವೇ ಬೇಡ ಅಂತ ಸಂಚು ಮಾಡುತ್ತಿದ್ದಾರೆ. ಅದಕ್ಕೆ ಅವರದೇ ಲೆಕ್ಕಾಚಾರಗಳಿವೆ. "ಈ ಜಯಮೃತ್ಯುಂಜಯ ಅಲಿಯಾಸ್ ವೀರೇಶ ಬೃಹನ್ಮಠದಿಂದ ಬಂದವನು; ಚಿತ್ರದುರ್ಗದ ಸ್ವಾಮಿ ಕುಣಿಸಿದಂತೆ ಕುಣಿಯುತ್ತಾನೆ; ನಾಳೆ ನಾವು ಚಪರಾಸಿ ಆದರೆ ಹೇಗೆ?" ಎನ್ನೋದೇ ಅವರಿಗಿರುವ ಭಯ. ಹಾಗಾಗಿ ಅವರೆಲ್ಲಾ ಇನ್ನೂ ಮುದುಕನೊಬ್ಬನನ್ನು ಆ ಸ್ಥಾನಕ್ಕೆ ಹುಡುಕುತ್ತಿರುವಾಗಲೇ ಚಿತ್ರದುರ್ಗದ ಸ್ವಾಮಿಗಳು "ಪಂಚಮಸಾಲಿ ಜನಾಂಗದವರು ಗುರುಪೀಠ ಮಾಡಿದ್ರೆ ಹಾವೇರಿ ಹತ್ತಿರ 80 ಎಕರೆ ಜಮೀನು ಕೊಡುತ್ತೇನೆ" ಎಂದು ಹೊಸ ಬಾಂಬ್ ಹಾಕಿದ್ದೆ ತಡ ಇವರೆಲ್ಲರಿಗೂ ತಲೆ ಬಿಸಿಯಾಗಿ ಹೋಗಿದೆ. ಈಗ ಪೀಠ ಮಾಡೋದಿಲ್ಲ ಬರೀ ಸಮಾಜ ಸಂಘಟನೆ ಅಂತಾ ರೀಲ್ ಬಿಡ್ತಿದ್ದಾರೆ.

ಮಾಜಿ ಮಂತ್ರಿ ಕಾಶಪ್ಪನವರ ದಿವಂಗತರಾದ ಮೇಲೆ ಸ್ಥಾಯಿ ಸಮಿತಿ ಮಾಡಿ ಅದಕ್ಕೆ ಒಂದು ವರ್ಷದ ಅವಧಿಗೆ ಬೆಟ್ಟಪ್ಪನನ್ನೇ ಅಧ್ಯಕ್ಷನನ್ನಾಗಿ ಮಾಡಿದ್ರೆ ಅವನು ಕುರ್ಚಿ ಮೇಲೆ ಕುಂತವನು ಏಳಲೇ ಇಲ್ಲ. ಅಲ್ಲದೇ ತನ್ನ ಕಂತ್ರಿ ಬುದ್ಧಿಯ ಮೂಲಕ ತನ್ನದೇ ಜಾತಿಯ ಲೀಡರ್ ಆಗಿರುವ ಮಾಜಿ ಜಿ. ಪಂ. ಅಧ್ಯಕ್ಷನಾದ ಕೊಟ್ಟೂರಿನ ಗುಳಗಿ ನಾಗರಾಜನನ್ನು ಚುನಾವಣೆಯಲ್ಲಿ ಸೋಲಿಸಿ, ತಾನೂ ಸೋತು ಈಗ ಸ್ವಜಾತಿ ಸಮಾಜವನ್ನು ಗೆಲ್ಲಿಸುತ್ತೇನೆ ಅಂತ ಹೊರಟಿದ್ದಾನೆ.

ಕುಂತಿ ಮಕ್ಕಳಿಗೆ ರಾಜ್ಯಭಾರ ಇಲ್ಲ ಎನ್ನುವಂತೆ ಪಂಚಮಸಾಲಿ ಜನ ಅಮಾಯಕರು. 77 ಲಕ್ಷದಷ್ಟು ಜನಸಂಖ್ಯೆ ಇದ್ರೂ ಅವರಿಗೆ ಸಮರ್ಥ ನಾಯಕರಿಲ್ಲದೇ ನಲುಗಿ ಹೋದವರು. ಹಿಂದೆ ಇದೇ ಸಮಾಜದವರೇ ಆದ ವೀರೇಂದ್ರ ಪಾಟೀಲ, ಜೆ. ಎಚ್. ಪಟೇಲ ಮುಖ್ಯಮಂತ್ರಿ ಆದರೂ ಸಮಾಜಕ್ಕೆ ಏನು ಮಾಡಿದ್ರು ಎನ್ನುವ ಪ್ರಶ್ನೆ ಹಸಿಹಸಿಯಾಗಿರುವಾಗಲೇ ಬೆಟ್ಟಪ್ಪ, ದಿಂಡೂರ್, ಉಮಾಪತಿಯಂಥವರು ಸಮಾಜ ಕಟ್ಟುವ ಕೆಲಸಕ್ಕೆ ಮುಂದಾಗಿದ್ದಾರೆ. ಇವರೇನು ಕಟ್ಟುತ್ತಾರೋ, ಕುಟ್ಟುತ್ತಾರೋ ಎಂಬ ಅನುಮಾನ ಮಾತ್ರ ಜನರಿಗೆ ಈಗಾಗಲೇ ಪ್ರಾರಂಭವಾಗಿದೆ. ಏಕೆಂದರೆ ಇವರ ವರಸೆಗಳನ್ನು ನೋಡಿದರೆ ಪಕ್ಕಾ ಓಟ್‌ಬ್ಯಾಂಕ್ ರಾಜಕೀಯ ಎದ್ದುಕಾಣುತ್ತದೆ. ●



ಕುಮಾರಸ್ವಾಮಿ ಸಂಪುಟದ ಪ್ರಭಾವಿ, ಗೌಡರ ಕುಟುಂಬದ ಪರಮನಿಷ್ಠ ಕಾರ್ಮಿಕ ಮಂತ್ರಿ ಇಕ್ಬಾಲ್ ಅನ್ಸಾರಿ ಕದ್ದೂಮುಚ್ಚಿ ಮದುವೆಯಾಗಿದ್ದಾರೆ! ಅದೂ ಕನ್ನಡ ಚಿತ್ರರಂಗದ ಹೆಸರಾಂತ ನಟಿಯೊಬ್ಬಳ ಜೊತೆ ಕಳೆದೊಂದು ವರ್ಷದಿಂದ ಕಳ್ಳ ಸಂಸಾರ ಮಾಡಿಕೊಂಡೇ ಬಂದಿದ್ದಾರೆ! ಇನ್ನೂ ನಿಖರವಾಗಿ ಹೇಳಬೇಕೆಂದರೆ ಮಂತ್ರಿ ಅನ್ಸಾರಿಯಿಂದ ಆಕೆಗೊಂದು ಗಂಡು ಮಗುವಿದೆ!

ವಾರಕ್ಕೆ ಕನಿಷ್ಠ ಎರಡು ದಿನವಾದರೂ ಆ ಮನೆಯಲ್ಲಿ ಇದ್ದೇ ಇರುತ್ತಾರೆ! ಆಕೆಯ ಆಪ್ತರು ನೆಂಟರಿಷ್ಟರ ನಡುವೆ ತಾವೇ ಆ ಮಗುವಿನ ತಂದೆ ಅಂತಲೂ ಹೇಳಿಕೊಂಡಿದ್ದಾರೆ!

ತಪ್ಪಲ್ಲ, ಯಾವುದೂ ಸುಳ್ಳಲ್ಲ. ಆದರೆ ಕಾರ್ಮಿಕ ಮಂತ್ರಿ ಮತ್ತು ಗಂಗಾವತಿಯ ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿಗೆ ಈಗಾಗಲೇ ಮದುವೆಯಾಗಿದೆ. ಮೂವರು ಮಕ್ಕಳಿದ್ದಾರೆ. ಒಂದಲ್ಲ ನಾಲ್ಕು ಹೆಂಡತಿಯರನ್ನು ಹೊಂದಲು ಇಸ್ಲಾಂ ಸಮ್ಮತಿಸುತ್ತದೆ. ಆದರೆ ಇದಕ್ಕೂ ಅವರ ಮೊದಲ ಪತ್ನಿಯ ಸಮ್ಮತಿ ಬೇಕು. ಅಥವಾ ತಲಾಖ್ ಕೊಟ್ಟಿರಬೇಕು. ಪ್ರಶ್ನೆಯೆಂದರೆ, ಇದರಲ್ಲಿ ಯಾವುದನ್ನು ಅನ್ಸಾರಿ ಪಾಲಿಸಿದ್ದಾರೆ?



ಪ್ರೀತಿ, ಪ್ರಣಯ, ಮದುವೆ ಇತ್ಯಾದಿಗಳೆಲ್ಲ ವ್ಯಕ್ತಿಯ ಖಾಸಗಿ ಸಂಗತಿಗಳು ನಿಜ. ಆದರೆ ಇಕ್ಬಾಲ್ ಅನ್ಸಾರಿ ಯಾರೋ ಮಾಮೂಲಿ ಆಸಾಮಿಯಲ್ಲ, ರಾಜ್ಯದ ಕಾರ್ಮಿಕ ಮಂತ್ರಿ. ಆದರ್ಶವಲ್ಲದೇ ಹೋದರೂ ಅವರ ಖಾಸಗಿ ಬದುಕು ಕಾನೂನುಬದ್ಧವಾಗಿರಬೇಕು. ಆದರೆ ಪ್ರಾರಬ್ಧವೋ ಕರ್ಮವೋ; ಜೆಡಿಎಸ್ ಮಂತ್ರಿಮಂಡಲದ ಪಡಖಾನೆಯಲ್ಲಿ ಲೆಕ್ಕಕ್ಕಿಲ್ಲೇ ಗೆಲ್ಲಿಸಿದ್ದರು. ಹುಟ್ಟಿದ್ದು ಗುಲ್ಬರ್ಗಾದ ಚಿತ್ತಾಪುರವಾದರೂ ಅನ್ಸಾರಿ ಹೈಸ್ಕೂಲ್ ಓದಿದ್ದು ಇದೇ ಗಂಗಾವತಿಯ ಕೊಟ್ಟೂರೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ.

ತಂದೆ ಎಂ.ಎಸ್. ಅನ್ಸಾರಿಯ ಆರು ಮಕ್ಕಳ ಪೈಕಿ ಇಕ್ಬಾಲ್ ಅನ್ಸಾರಿಯೇ ದೊಡ್ಡವರು. ತಮ್ಮಂದಿರಾದ ಅಖ್ತರ್ ಅನ್ಸಾರಿ, ಕೌಸರ್ ಅನ್ಸಾರಿ, ಅಜರ್ ಅನ್ಸಾರಿ, ಅಬೀದ್ ಅನ್ಸಾರಿ, ಅಮ್ಜದ್ ಅನ್ಸಾರಿ ಮುಂತಾದವರ್‍ಯಾರಿಗೂ ಇಕ್ಬಾಲ್ ಅನ್ಸಾರಿಯಂಥ ಚಾಲಾಕಿರಲಿಲ್ಲವಾದ್ದರಿಂದ ಅವರನ್ನೇ ರಾಜಕೀಯಕ್ಕೆ ತಂದರು. ಗೆದ್ದಿದ್ದೇ ವೈದ್ಯಕೀಯ ಶಿಕ್ಷಣ ಸಚಿವರಾದ ಅನ್ಸಾರಿಗೆ ಆ ಹೊತ್ತಿಗಾಗಲೇ ಹೊಸಪೇಟೆಯ ಶ್ರೀಮಂತ ಮುಸ್ಲಿಂ ಮನೆತನದ ತಬಸ್ಸುಮ್ ಎಂಬಾಕೆಯ ಜೊತೆ ಮದುವೆಯಾಗಿತ್ತು. ಒಂದು ಗಂಡು ಇಬ್ಬರು ಹೆಣ್ಣುಮಕ್ಕಳಿದ್ದರು. ಗಂಗಾವತಿಯ ಇಸ್ಲಾಂಪುರದಲ್ಲಿ ಮನೆಯಿತ್ತು.

ಯಾವತ್ತು ವೈದ್ಯಕೀಯ ಶಿಕ್ಷಣ ಮಂತ್ರಿಯಾದರೋ

ನಟಿ ಜೊತೆ ಅನ್ಸಾರಿಯ ಚಿನ್ನವೀಡು?

ಹೆಂಡತಿಯಿದ್ದೂ ಮತ್ತೊಂದು ಮದುವೆಯಾಗುವುದು ಶುದ್ಧ ತಪ್ಪು ಶಿಕ್ಷಾರ್ಹ ಅಪರಾಧ. ಹಾಗೊಮ್ಮೆ ಮದುವೆಯಾಗುವುದೇ ಆದಲ್ಲಿ ಅದಕ್ಕೆ ಕೈಹಿಡಿದವಳ ಸಮ್ಮತಿ ಬೇಕು! ಯಾರೋ ಪ್ರಜೆಯೊಬ್ಬ ಹೀಗೆ ತಪ್ಪೆಸಗಿದರೆ ಪೊಲೀಸರು ಜೈಲಿಗೆ ದಬ್ಬುತ್ತಾರೆ.

ಇದನ್ನೇ ಮಂತ್ರಿಯೊಬ್ಬ ಮಾಡಿದನೆಂದರೆ?


ಈ ಪ್ರಶ್ನೆಗೆ ಉತ್ತರವನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ಕೊಡುತ್ತಾರೋ ಅಥವಾ ಅವರಪ್ಪ ದೇವೇಗೌಡರೇ ಹೇಳುತ್ತಾರೋ ಗೊತ್ತಿಲ್ಲ. ಬಹುಶಃ ಅವರ್‍ಯಾರಿಗೂ ಇದು ಗೊತ್ತಿರಲಿಕ್ಕೂ ಇಲ್ಲ. ಪತ್ರಿಕೆಗೆ ಬಂದ ಮಾಹಿತಿ, ಚಿತ್ರನಟಿಯೊಬ್ಬಳು ಬದುಕುತ್ತಿರುವ ರೀತಿ, ಕಳೆದೊಂದು ತಿಂಗಳುಗಳಿಂದ ಪತ್ರಿಕೆ ಕಲೆ ಹಾಕಿದ ಸಂಗತಿ ಇತ್ಯಾದಿಗಳನ್ನೇ ಮುಂದಿಟ್ಟು ಹೇಳಬೇಕೆಂದರೆ; ಕುಮಾರಸ್ವಾಮಿ ಸಂಪುಟದ ಪ್ರಭಾವಿ, ಗೌಡರ ಕುಟುಂಬದ ಪರಮನಿಷ್ಠ ಕಾರ್ಮಿಕ ಮಂತ್ರಿ ಇಕ್ಬಾಲ್ ಅನ್ಸಾರಿ ಕದ್ದೂಮುಚ್ಚಿ ಮದುವೆಯಾಗಿದ್ದಾರೆ!

ಅದೂ ಕನ್ನಡ ಚಿತ್ರರಂಗದ ಹೆಸರಾಂತ ನಟಿಯೊಬ್ಬಳ ಜೊತೆ ಕಳೆದೊಂದು ವರ್ಷದಿಂದ ಕಳ್ಳ ಸಂಸಾರ ಮಾಡಿಕೊಂಡೇ ಬಂದಿದ್ದಾರೆ!

ಇನ್ನೂ ನಿಖರವಾಗಿ ಹೇಳಬೇಕೆಂದರೆ ಮಂತ್ರಿ ಅನ್ಸಾರಿಯಿಂದ ಆಕೆಗೊಂದು ಗಂಡು ಮಗುವಿದೆ! ಬಸವೇಶ್ವರ ನಗರದಲ್ಲಿ ಬಂಗಲೆಯೂ ಇದೆ! ಕಾರು ಕೊಟ್ಟಿದ್ದಾರೆ! ಆಗಾಗ ಸಿನಿಮಾ ಹೀರೋಯಿನ್‌ಗಳು ಕಾಣಿಸುತ್ತಿದ್ದಾರೆ. ಅದು ಸಿನಿಮಾ ನಂಟೋ ಅಥವಾ ಅನಿಲ್ ಲಾಡ್ ಸಹವಾಸ ದೋಷವೋ ಗೊತ್ತಿಲ್ಲ, ಈ ಪೈಕಿ ಇಕ್ಬಾಲ್ ಅನ್ಸಾರಿ ಕೂಡ ಹೊರತೇನಲ್ಲ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಶ್ರೀರಂಗ ದೇವರಾಯಲು ವಿರುದ್ಧ ಸರಿಸುಮಾರು ಮೂವತ್ತೊಂಬತ್ತೂವರೆ ಸಾವಿರದಷ್ಟು ಮತ ಪಡೆದು ಗೆದ್ದ ಇಕ್ಬಾಲ್ ಅನ್ಸಾರಿಗೆ ಕುಮಾರಣ್ಣನೇ ಗುರು. ಗಂಗಾವತಿಯ ಜನ ಅವರನ್ನು ಸುಮ್ಮನೇ ಗೆಲ್ಲಿಸಲಿಲ್ಲ. ಅವರ ತಂದೆ ಎಂ.ಎಸ್. ಅನ್ಸಾರಿ ಕಟ್ಟಿ ಬೆಳೆಸಿದ ಸಾರಾಯಿ ಸಾಮ್ರಾಜ್ಯ ಶ್ರೀಮಂತಿಕೆ ಮತ್ತು ದೇವೇಗೌಡರ ಬೆಂಬಲ ಎಲ್ಲವನ್ನೂ ಗಂಗಾವತಿಯ ಆರ್ಕೆಸ್ಟ್ರಾ ಕಾರ್ಯಕ್ರಮವೊಂದಕ್ಕೆ ಸಿನಿಮಾ ನಟಿಯರನ್ನು ಕರೆಸುವುದು ಅವರ ಪ್ರತಿಷ್ಠೆಯ ಪ್ರಶ್ನೆಯಾಯಿತು. ಹಾಗೇ ಮೊದಲ ಭೇಟಿಯಲ್ಲಿ, ಮೊದಲ ನೋಟಕ್ಕೆ ಅನ್ಸಾರಿ ಮನ ಸೋತಿದ್ದು ಪಂಚಾಕ್ಷಿ (ಹೆಸರು ಬದಲಿಸಿದೆ) ಎಂಬ ನಟಿಗೆ!

ಕನ್ನಡ ರಂಗಭೂಮಿಯ ಆಧಾರಸ್ತಂಭದಂತಿದ್ದ ಕಲಾವಿದರೊಬ್ಬರಿಗೆ ಈಕೆ ಮರಿಮಗಳು. ಆ ಹೊತ್ತಿಗಾಗಲೇ ಸರಿಸುಮಾರು ಎಂಟು ಕನ್ನಡ ಚಿತ್ರಗಳಲ್ಲಿ ಈಕೆ ನಾಯಕನಟಿಯಾಗಿದ್ದಳು. ಈಕೆಯ ತಾಯಿ ಕೂಡ ಒಂದಾನೊಂದು ಕಾಲದ ಹೀರೋಯಿನ್. ವರನಟ ರಾಜ್ ಜೊತೆ ಆ ಕಾಲಕ್ಕೇ ನಟಿಸಿದಾಕೆ. ಅಂಥ ಹಿರಿಯ ನಟಿಯ ಮಗಳೆಂದೇ




ತೇಜಸ್ವಿ-ರಾಮದಾಸ್ ಪತ್ರಗಳು

ಮೊನ್ನೆ ಪತ್ರಿಕೆ ಕಚೇರಿಯಲ್ಲಿ ಹಳೆಯದೇನನ್ನೋ ಹುಡುಕುತ್ತಿದ್ದಾಗ ಒಂದಷ್ಟು ಪತ್ರಗಳು ಸಿಕ್ಕವು. ರಾಮದಾಸ್, ತೇಜಸ್ವಿ, ಜಾಹ್ನವಿ, ಶಾ. ಬಾಲುರಾವ್, ಪುಣೇಕರ್, ಕಾಯ್ಕಿಣಿ ಮುಂತಾದವರೆಲ್ಲಾ ಈಗ್ಗೆ 10-15 ವರ್ಷಗಳ ಹಿಂದೆ ಲಂಕೇಶರಿಗೆ ಬರೆದ ಪತ್ರಗಳವು.

ಕನ್ನಡ ಓದುಗರಲ್ಲಿ ರಾಜಕೀಯ ಪ್ರಜ್ಞೆ, ಸಾಹಿತ್ಯ-ಸಾಂಸ್ಕೃತಿಕ ನಿಲುವು ಅಭಿರುಚಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಈ ಮಿತ್ರರ ಗುಂಪು ಒಬ್ಬರನ್ನೊಬ್ಬರು ಪೊರೆಯುತ್ತಿದ್ದ ಪರಿ, ಬರವಣಿಗೆ- ತಿಳಿವಳಿಕೆಗಳನ್ನು ಮೆಚ್ಚುವ, ಟೀಕಿಸುತ್ತಿದ್ದ ವಿಚಾರಗಳೆಲ್ಲಾ ಈ ಪತ್ರಗಳಲ್ಲಿವೆ.

ದಿ. 26.3.94 ರಲ್ಲಿ ರಾಮದಾಸ್ ಲಂಕೇಶರಿಗೆ ಒಂದು ಕಾಗದ ಬರೆದು 'ಪ್ರಿಯ ಲಂಕೇಶ್, ನೀವು ನನ್ನ ಹುಟ್ಟುಹಬ್ಬದ ದಿನ ನೆನಪಿಟ್ಟುಕೊಂಡು ಬರೆದ ಕಾಗದ ಮತ್ತು Greeting ಎರಡೂ ತಲುಪಿದೆ. ಇದು ನನ್ನ ಜೀವನದ ಮೊಟ್ಟ ಮೊದಲ ಹುಟ್ಟಿದ ದಿನದ ಗ್ರೀಟಿಂಗ್. ಇದನ್ನು ನಾನು ತುಂಬಾ ಪ್ರೀತಿಯಿಂದ ಸ್ವೀಕರಿಸಿದ್ದೇನೆ ಗೆಳೆಯರನ್ನು ತುಂಬಾ ಪ್ರೀತಿಯಿಂದ ನೆನಪಿಸಿಕೊಳ್ಳುವ ನಿಮ್ಮ ಕಾಳಜಿ ದೊಡ್ಡದು. ಅಜ್ಞಾತ ಕುಟುಂಬದಿಂದ ಬಂದ ನನಗೆ ಹುಟ್ಟು ಮಾತ್ರವಿದ್ದು ಹಬ್ಬವೇ ಇರಲಿಲ್ಲ. ಕುಟುಂಬದ ವೃತ್ತಾಂತವೇ ಗೊತ್ತಿರದ ನನಗೆ ನನ್ನ ತಾಯಿಯ ಹುಟ್ಟಿದ ತಾರೀಖು ಸರಿಯಾಗಿ ಗೊತ್ತಿಲ್ಲ...' ಹೀಗೆ ಸಾಗುತ್ತದೆ ರಾಮದಾಸ್ ಪತ್ರ.



ಈ ಪತ್ರದಲ್ಲಿರುವ ಹಿಗ್ಗೂ ಮತ್ತು ಖಾಸಗಿ ವಿಷಾದವನ್ನು ಗಮನಿಸಿ.

ತೇಜಸ್ವಿಯವರ ಒಂದು ಪತ್ರ ಸ್ವಲ್ಪ ತಮಾಷೆಯಾಗಿದೆ.

'ಗೆ. ಲಂಕೇಶ್' ಎಂದು ಶುರು ಮಾಡಿ 'ಧಾರಾವಾಹಿ ಶುರು ಮಾಡುವಂತೆ ನೀವು ಕಳಿಸಿದ ಟೆಲಿಗ್ರಾಂ ನೋಡಿ ಗಾಬರಿಯಾಯಿತು. ಯಾವ format ಅಂತಾ ತೀರ್ಮಾನಿಸಿ, ಬೇಕಾದ ಚಿತ್ರಗಳನ್ನು ಹೊಂದಿಸಿಕೊಳ್ಳಲು ಕಾಲಾವಕಾಶ ಬೇಕು. ಇದೆಲ್ಲಾ ಟೆಲಿಗ್ರಾಂ ವೇಗದಲ್ಲಿ ಆಗಲ್ಲ, ಗಡಿಬಿಡಿ ಮಾಡಬೇಡಿ' ಅನ್ನುತ್ತಾರೆ ತೇಜಸ್ವಿ.

ಇವರಿಬ್ಬರೂ ಬರಹಗಾರರೇ ಆದರೂ ಲಂಕೇಶರಿಗೆ ಪತ್ರಿಕೆಯ ಪ್ರತಿ ಸಂಚಿಕೆಯೂ ಒಂದು ಹೊಸ ಕೂಸು. ಅದಕ್ಕೆ ರಕ್ತ-ಮಾಂಸ ತುಂಬಿ ಜೀವ ಚೈತನ್ಯ ನೀಡಿ ಓದುಗನ ಕೈಗಿಡಬೇಕಾದ ಒತ್ತಡ ಅವರದ್ದು. ಹಾಗಾಗಿ ತೇಜಸ್ವಿ ಎದೆ ಮೇಲೆ ಕೂತು ಬರೆಸುವ ಧಾವಂತ.

ಹಾಗೆ ನೋಡಿದರೆ ತೇಜಸ್ವಿಯವರ ಬಹುತೇಕ ರಾಜಕೀಯ ಹಾಗೂ ಸೃಜನಶೀಲ ಬರಹಗಳು ಪ್ರಕಟವಾಗಿದ್ದು ಲಂಕೇಶ್ ಪತ್ರಿಕೆಯಲ್ಲಿ. ಕೊನೆಗೊಮ್ಮೆ ತೇಜಸ್ವಿಯವರೇ "ನಮ್ಮ ಗ್ಯಾರಂಟಿ ಪೀರಿಯಡ್ ಮುಗೀತೂಂತ ಕಾಣುತ್ತೆ, ಅಂದುಕೊಂಡಿದ್ದನ್ನೆಲ್ಲಾ ಬೇಗಬೇಗ ಬರೆದು ಮುಗಿಸಬೇಕು" ಎಂದಿದ್ದೂ ಉಂಟು.

ಪಟ್ಟು ಹಿಡಿದು ಕೂತು ಬರೆಯುವ ಮಾತು ಬಂದಾಗ ನಾವು ಪ್ರಸಿದ್ಧ ಫ್ರೆಂಚ್ ಲೇಖಕ ಅಲೆಕ್ಸಾಂಡರ್ ಡ್ಯೂಮಾಸ್‌ನನ್ನು ನೆನೆದುಕೊಳ್ಳಬಹುದು. ಒಂದು ಕಾದಂಬರಿ ಬರವಣಿಗೆ ದಿನದ ನಡುವೇಳೆ ಮುಗಿದರೆ ಅದಾದ ಸ್ವಲ್ಪ ಹೊತ್ತಿನಲ್ಲೇ ಹೊಸ ಕತೆ ಶುರು ಮಾಡುತ್ತಿದ್ದನಂತೆ ಅವನು.

ತೇಜಸ್ವಿ ಇನ್ನೊಂದು ಪತ್ರದಲ್ಲಿ "ನಾನು ಬೇರೆ ಲೇಖಕರ ಪುಸ್ತಕ ಓದಬಾರದೂಂತ ಏನಿಲ್ಲ" ಎಂದೆಲ್ಲಾ ಸಮಜಾಯಿಷಿ ಕೊಟ್ಟಿದ್ದಾರೆ. ಬಹುಶಃ "ತನ್ನ ಸಮಕಾಲೀನರ ಬರಹಗಳತ್ತ ತೇಜಸ್ವಿ ಗಮನ ಹರಿಸಿಲ್ಲ" ಎಂದು ಲಂಕೇಶ್ ಆಕ್ಷೇಪಿಸಿದ್ದಿರಬೇಕು.


ಒಂದು ಸಾಂಸ್ಕೃತಿಕ ಪರಿಸರವನ್ನು ಜೀವಂತವಾಗಿರಿಸಲು ಏನೆಲ್ಲಾ ಎಚ್ಚರಿಕೆ ವಹಿಸಬೇಕಾಗುತ್ತದೆ ಅಲ್ಲವಾ?

ಬಿಡಿ ಚಿತ್ರಗಳು

ಪಾರ್ವತೀಶ

ಸುವರ್ಣ ಚಾನೆಲ್‌ನಲ್ಲಿ ಶಶಿಧರ ಭಟ್


ವಿಪ್ರೋ ನೆಟ್‌ನವರ ಸುವರ್ಣ ಚಾನೆಲ್‌ನ ನ್ಯೂಸ್ ಹಾಗೂ ವಿಚಾರ-ವಿವಾದ ಕಾರ್ಯಕ್ರಮಗಳು ಕನ್ನಡಿಗರಿಗೆ ಇಷ್ಟವಾಗುತ್ತಿವೆ. ಕಳೆದ ವಾರ ರಾಜ್ಯ ಪೊಲೀಸರು ಮಲೆನಾಡಿನಲ್ಲಿ ಕೆಲ ಮುಗ್ಧ ಗಿರಿಜನರನ್ನು ಕೊಲೆ ಮಾಡಿದ ಘಟನೆಯನ್ನು ಸುದ್ದಿ ಮಾಧ್ಯಮಗಳು ನಿಷ್ಪಕ್ಷಪಾತವಾಗೇ ದಾಖಲಿಸಿದ್ದವು. ಈ ಬಗ್ಗೆ ಚರ್ಚೆ-ವಾಗ್ವಾದಗಳೂ ನಡೆದವು. ಆದರಲ್ಲಿ ಸುವರ್ಣ ಚಾನೆಲ್‌ನ ಶಶಿಧರ್ ಭಟ್ ನಡೆಸಿದ ವಿಚಾರ-ವಿವಾದ ಒಂದು ಚರ್ಚೆ ಹೇಗೆ ನಡೆಯಬೇಕೆಂಬುದನ್ನು ತೋರಿಸಿಕೊಟ್ಟಿತು. Compare ಮಾಡಿದ ಭಟ್ ಸುಮ್ಮನೆ ಅಂದರಿಕಿ ಮಂಚಿವಾಡು ರೀತಿ ಉಳಿಯದೆ ತಾವೊಂದಿಷ್ಟು ತಯಾರಿ ಮಾಡಿಕೊಂಡು ಬಂದಿದ್ದ ಕಾರಣ ಚರ್ಚೆಯ ಗುಣಮಟ್ಟ ಏರಿತ್ತು. ಜೊತೆಗೆ ಹರಿತ ವಿಶ್ಲೇಷಣೆ, ಚುರುಕು ಮಾತುಗಳ ಶಶಿಧರ್ ಮಧ್ಯಪ್ರವೇಶಗಳು ಇಡೀ ಚರ್ಚೆಯನ್ನು ಜೀವಂತವಾಗಿಟ್ಟಿತ್ತು.



ಇನ್ನಿತರ ಚಾನೆಲ್‌ಗಳವರು ಇದನ್ನು ಗಮನಿಸಲಿ.

ಜೆ.ವಿ. ಅಯ್ಯರ್ ಈಕೆಯನ್ನು ತಮ್ಮ ಕೊನೆಯ ಚಿತ್ರಕ್ಕೆ ಹಾಕಿಕೊಂಡರು. ಆನಂತರ ಶಶಿಕುಮಾರ್ ನಟಿಸಿದ ಸೂತ್ರಧಾರ, ರಮೇಶ್ ಜೊತೆ ಹಂತಕ, ಸಿದ್ಧಾರೂಢ ಮಹಾತ್ಮೆ, ಕಾಶಿನಾಥ್ ಹೀರೋ ಆಗಿದ್ದ ಬಂಪರ್ ಅಳಿಯ, ವಿಶ್ವನಾಥ್ ನಿರ್ದೇಶನದ ಅನುರಾಗ ಗೀತೆ, ನಟಿ ಆರತಿಯವರ ಮಿಠಾಯಿ ಮನೆ ಮುಂತಾದ ಚಿತ್ರಗಳಲ್ಲಿ ಈಕೆ ನಟಿಸಿದ್ದಾಳೆ.

ಆನಂತರ ಇದ್ದಕ್ಕಿದ್ದಂತೆ ಟೀವಿ ಸೀರಿಯಲ್ಲುಗಳಲ್ಲಿ ನಟಿಸಲಾರಂಭಿಸಿದ್ದ ಈ ಪಂಚಾಕ್ಷಿ ನಾಗಾಭರಣ, ನಾಗ್ತಿಹಳ್ಳಿ, ಎಸ್. ನಾರಾಯಣ್, ಫಣಿ ರಾಮಚಂದ್ರ ಮುಂತಾದವರ ಮೆಗಾ ಧಾರಾವಾಹಿಗಳಲ್ಲಿ ನಾಯಕಿ ಪಾತ್ರ ಮಾಡಿಯೇ ಪ್ರಖ್ಯಾತಿಗೆ ಬಂದಳು. ಹೀಗೆ 2005ರ ಫೆಬ್ರವರಿಯಲ್ಲಿ ಗಂಗಾವತಿಯ ಇಕ್ಬಾಲ್ ಅನ್ಸಾರಿ ಸನ್ಮಾನ ಕಾರ್ಯಕ್ರಮಕ್ಕೆಂದು ಹೋದ ಪಂಚಾಕ್ಷಿಗೆ ಕ್ರಮೇಣ ಮಂತ್ರಿ ಸಾಹೇಬರ ಫೋನ್ ಬರುವುದು ಹೆಚ್ಚಾಗಿದೆ. ರಾಯಚೂರು, ಲಿಂಗಸೂಗೂರು, ಕೊಪ್ಪಳದ ಕೆಲ ಜೆಡಿಎಸ್ ಸಭೆಗಳಿಗೂ ಅನ್ಸಾರಿ ಸಾಹೇಬರು ಆಕೆಯನ್ನು ತಮ್ಮ ಕಾರಲ್ಲೇ ಕರೆದೊಯ್ದಿದ್ದಾರೆ.



ನಟಿ ಪಂಚಾಕ್ಷಿಯ ಬಸವೇಶ್ವರನಗರದ ಮನೆ

ಮೂರೇ ತಿಂಗಳಲ್ಲಿ ಪರಿಚಯ ಪ್ರೇಮಕ್ಕೆ ತಿರುಗಿದೆ. 2005ರ ಸೆಪ್ಟೆಂಬರ್ ತಿಂಗಳಲ್ಲಿ ಇಬ್ಬರೂ ಬಂಗಾರಪೇಟೆ ಸಮೀಪದ ದೇವಸ್ಥಾನವೊಂದರಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದಾರೆ. ಸಾಲದ್ದಕ್ಕೆ ಆಕೆಯನ್ನು ಹೈದರಾಬಾದಿಗೆ ಕರೆದೊಯ್ದು ಅನ್ಸಾರಿ ಅಲ್ಲಿನ ದರ್ಗಾ ಒಂದರ ಇಮಾಮರನ್ನು ಹಿಡಿದು ಇಸ್ಲಾಂ ಪದ್ಧತಿಯಂತೆಯೂ ಮದುವೆಯಾಗಿದ್ದಾರೆ. ದಫ್ತರ್‌ನಾಮಾದಲ್ಲಿ ನಟಿಯ ಹೆಸರನ್ನು ಆಯಿಷಾ ಎಂದು ಬರೆಸಿದ್ದಾರೆ!

ಬಹುಶಃ ಇಷ್ಟೊಂದು ಅವಸರವಸರವಾಗಿ ಆಕೆಯನ್ನು ಅನ್ಸಾರಿ ಮದುವೆಯಾಗಿದ್ದು ಆಕೆ ಅಬಾರ್ಷನ್ ಮಾಡಿಸಿಕೊಳ್ಳಲು ಒಪ್ಪದೇ ಹೋದಾಗಲೇ?


ಹಠಕ್ಕೆ ಬಿದ್ದ ನಟಿ ಎಲ್ಲಿ ತನ್ನ ಮಂತ್ರಿಗಿರಿಗೆ ಕುತ್ತು ತರುತ್ತಾಳೋ ಎಂದು ರಹಸ್ಯ ಮದುವೆಗೆ ಒಪ್ಪಿದ ಅನ್ಸಾರಿ, ಆತನಕ ತಾಯಿ ಮನೆಯಲ್ಲಿದ್ದ ಆಕೆಯನ್ನು ಕ್ರಮೇಣ ಬಸವೇಶ್ವರ ನಗರದ ಬಂಗಲೆಯೊಂದಕ್ಕೆ ಸ್ಥಳಾಂತರಿಸಿದ್ದಾರೆ. ಬಸವೇಶ್ವರ ನಗರದಲ್ಲಿ ಮಂತ್ರಿ ಚಲುವರಾಯಸ್ವಾಮಿಯವರ ಮನೆಯೆದುರಿಗೇ ಕಾರ್ನರ್ ಬಂಗಲೆಯೊಂದನ್ನು ಖರೀದಿಸಿ ನಟಿ ಪಂಚಾಕ್ಷಿಯನ್ನು ಇಟ್ಟಿದ್ದಾರೆ. ಇದಾಗಿ ಎಂಟು ತಿಂಗಳಿಗೇ ಆಕೆಗೆ ಗಂಡುಮಗುವಾಗಿದೆ. ಅನ್ಸಾರಿಯೇ ನಿಂತು ನಾಮಕರಣ ಶಾಸ್ತ್ರವನ್ನೂ ಮಾಡಿದ್ದಾರೆ. ತಾವೇ ಮಗುವಿನ ತಂದೆ ಎಂದು ನೆಂಟರಿಷ್ಟರಲ್ಲಿ ಹೇಳಿಕೊಂಡಿದ್ದಾರೆ. ಇದಕ್ಕೆ ತನ್ನ ಧರ್ಮಪತ್ನಿ ಸಮ್ಮತಿಸಿದ್ದಾಳೆಂದೇ ಒಪ್ಪಿಸಿದ್ದಾರೆ.

ಹಕೀಕತ್ತೇನೆಂದರೆ ಹೀಗೆ ಅನ್ಸಾರಿ ಮತ್ತೊಂದು ಮದುವೆಯಾಗಿದ್ದಾಗಲಿ, ಮಗುವಾಗಿದ್ದಾಗಲಿ; ಅವರ ಮನೆಯವರ್‍ಯಾರಿಗೂ ಗೊತ್ತೇ ಇಲ್ಲ!

ನಿಜಕ್ಕೂ ಅನ್ಸಾರಿಯ ಮನೆಯವರು ಈ ಮದುವೆಗೆ ಒಪ್ಪುವುದೇ ಆದಲ್ಲಿ ಅದು ಅಕ್ಷಮ್ಯವೇನಲ್ಲ. ಇಸ್ಲಾಂ ಪ್ರಕಾರ ಒಬ್ಬಾತ ನಾಲ್ಕು ಮದುವೆಯಾಗಬಹುದು. ಆದರೆ ಅದಕ್ಕೆ ಇತರ ಪತ್ನಿಯರ ಸಮ್ಮತಿ ಬೇಕೇಬೇಕು. ಒಂದು ಪಕ್ಷ ಅನ್ಸಾರಿಯ ಮನೆಯವರು ಇದನ್ನು ಒಪ್ಪಿದ್ದೇ ಆದಲ್ಲಿ ಈ ಮದುವೆಯನ್ನು ಅಷ್ಟೊಂದು ನಿಗೂಢವಾಗಿ ಏಕಿಡಬೇಕಿತ್ತು? ಮಗು ಹುಟ್ಟಿದ ದಿನ ಕದ್ದೂಮುಚ್ಚಿ ಆಸ್ಪತ್ರೆಗೆ ಬಂದು ಹೋಗಿದ್ದೇಕೆ? ಏಕೆ ಹೊತ್ತಲ್ಲದ ಹೊತ್ತಿನಲ್ಲಿ ಬಸವೇಶ್ವರ ನಗರದ ಆ ನಟಿಯ ಮನೆಗೆ ಬರುತ್ತಾರೆ? ಕೆಲವೊಮ್ಮೆ ವೇಷ ಮರೆಸಿಕೊಂಡು, ಕೂಲಿಂಗ್ ಗ್ಲಾಸ್ ಮತ್ತು ಕ್ಯಾಪ್ ಹಾಕಿಕೊಂಡು ಬಂದು ಹೋಗುವಂಥದ್ದು ಏನಿದೆ?

ಮತ್ತೊಂದು ಮದುವೆಯಾಗುವುದು ಇಸ್ಲಾಂ ಪ್ರಕಾರ ತಪ್ಪಲ್ಲವೆಂದಮೇಲೆ ಆ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಂಡಲ್ಲಿ ತಪ್ಪೇನಿದೆ?

-ರಾ. ಸೋ.



ಆನುದೇವಾ... ಕೊಡಲಿ-ಗಂಡು ಕೊಡಲಿ

ಬಂಜಗೆರೆ ಜಯಪ್ರಕಾಶ್‌ರವರ 'ಆನುದೇವಾ...' ಕೃತಿಯನ್ನು ನಿಷೇಧಿಸುವಂತೆ ವೀರಶೈವ ಮಹಾಸಭಾ ಸರ್ಕಾರಕ್ಕೆ ಜುಲೈ 25ರ ಗಡುವು ನೀಡಿದೆ. ಅಷ್ಟರೊಳಗೆ ನಿಷೇಧದ ನಿರ್ಧಾರ ಮಾಡದಿದ್ದರೆ 'ಆತ್ಮಾಹುತಿ' ಮಾಡಿಕೊಳ್ಳುವುದಾಗಿ ವಿಶ್ವನಾಥರೆಡ್ಡಿ ಮುದ್ನಾಳ್ ಚೀರಿಕೊಂಡಿದ್ದಾರೆ. ಹುಟ್ಟಿದಾಗಿನಿಂದಲೂ ಒಂದೇ ಒಂದು ಒಳ್ಳೆ ಕೆಲಸ ಮಾಡಿರದ ಕುಮಾರಸ್ವಾಮಿ ಸರ್ಕಾರ ಕನಿಷ್ಠ ಈಗಲಾದರೂ 25ನೇ ತಾರೀಖಿನವರೆಗೂ ತಟಸ್ಥ ನಿಲುವು ತೆಗೆದುಕೊಂಡು ಮುದ್ನಾಳ್ ನಿರ್ಗಮನಕ್ಕೆ ಅವಕಾಶ ಮಾಡಿಕೊಟ್ಟೀತಾ ಅಂತ....!

ಈ ಮುದ್ನಾಳ್ ಸೃಷ್ಟಿಸುವ ತಲೆನೋವುಗಳಿಂದ ಕನ್ನಡಿಗರು ಆಗಲಾದರೂ ಪಾರಾಗಬಹುದೇನೋ... ಸರ್ಕಾರ ಈ ಛಾನ್ಸ್ ಮಿಸ್ ಮಾಡಿಕೋಬಾರದು ಅಂತ ವೀರಶೈವ ಮಹಾಸಭಾದ ಮುದ್ನಾಳ್ ವಿರೋಧಿ ಬಣ ಕಾಯುತ್ತಿದೆ.

ಮತ್ತೊಂದೆಡೆ

'ಆನುದೇವಾ....' ನಿಷೇಧಕ್ಕೆ ಕೊಡಲಿ ಹಿಡಿದು ಹೋರಾಡುವುದಾಗಿ ಭೀಮಣ್ಣ ಖಂಡ್ರೆ ಧಮಕಿ ಹಾಕಿದ್ದಾರೆ. ಇದಕ್ಕೆ ಮರು ಸವಾಲೆಂಬಂತೆ ಚಿತ್ರದುರ್ಗದ ಕಾಡುಗೊಲ್ಲರ ಸಂಘದ ನಾಗಪ್ಪ ಹಾಗೂ ಯಾದವ ಸಂಘದ ಡಾ. ಕಾಟಪ್ಪ ತಾವು ಗಂಡು ಕೊಡಲಿ ಎತ್ತಿಕೊಳ್ಳುವುದಾಗಿ ಚಾಲೆಂಜ್ ಮಾಡಿದ್ದಾರೆ.

ಲಿಂಗಾಯತರಲ್ಲಿ ಕೊಡಲಿ ಸಂಸ್ಕೃತಿ ಇಲ್ಲಾ ಅಂತ ಅವರ ಸಂಶೋಧನೆ.

ಹೀಗೆ ಕೊಡಲಿ-ಗಂಡು ಕೊಡಲಿಗಳು ಆಚೆ ಬರುತ್ತಿರುವುದನ್ನು ನೋಡಿ ಸರ್ಕಾರ ನೇಮಿಸಿರುವ ಸತ್ಯಶೋಧನಾ ಸಮಿತಿಯವರ ಸ್ಥಿತಿ ಏನಾಗಬೇಡ. ಚಂಪಾ, ಬರಗೂರು, ಕಲ್ಬುರ್ಗಿ, ಗೀತಾ ನಾಗಭೂಷಣ, ಮ.ನ. ಜವರಯ್ಯ ಈ ಸಮಿತಿಯಲ್ಲಿದ್ದಾರೆ. ಅಂದಹಾಗೆ ಕಲ್ಬುರ್ಗಿ ಬಿಟ್ಟರೆ ಉಳಿದವರೆಲ್ಲಾ 'ಖಡ್ಗವಾಗಲಿ ಕಾವ್ಯ' ಎಂದಿದ್ದ ಬಂಡಾಯ ಸಾಹಿತ್ಯ ಪರಂಪರೆಯವರು. ಹೀಗೆ ಖಂಡ್ರೆಯ ಕೊಡಲಿ, ಯಾದವರ ಗಂಡುಕೊಡಲಿಯ ಜಂಗೀರ್, ಜಂಗೀರ್ ಗದಾಯುದ್ಧಕ್ಕೆ ರೆಫರಿಗಳಾಗಿರುವ ಬಂಡಾಯದವರ ಖಡ್ಗದಂತಹ ತೀರ್ಪಿಗಾಗಿ ಎಲ್ಲಾ ಕಾಯುತ್ತಿರುವಾಗ ಕರ್ನಾಟಕದ ಅತೀ ಬುದ್ಧಿವಂತ, ಅಹಿಂಸಾವಾದಿ ಜಿ.ಕೆ. ಗೋವಿಂದ ರಾಯರು ಸುಮ್ಮನಿರುವುದು ಸರಿಯೆ...?

ಅವರೂ ತಕ್ಷಣ ತಮ್ಮ ಬಿಂಜಾಚಿತಕ ಚಿಂತನೆಗಳ ಮೊಂಡುಗತ್ತಿಯನ್ನು ಹಿಡಿದು ಅವಾದ ಪ್ರವೇಶಿಸಲಿ ಎಂಬುದು ಕೇವಲ ಕುಹಕಿಗಳ ಒತ್ತಾಯ ವಷ್ಟಾಗಿದೆ. ಈ ಗೇಲಿ ನಿಜವೇ ಆದಲ್ಲಿ ನಾವದನ್ನು ಖಂಡತುಂಡವಾಗಿ, ತುಂಡುತುಂಡಾಗಿ ಖಂಡಿಸುತ್ತೇವೆ ಎಂಬುದನ್ನು ಅಹಿಂಸಾತ್ಮಕವಾಗಿ ಮುಂದಿಸಬಯಸುತ್ತೇವೆ.



ದ್ಯಾವೇಗೌಡರ ಗಂಡಸುತನದ ಪ್ರಶ್ನೆ ಈಗೇಕೆ?

ಥೂತ್ತೇರಿ — ಯಾಹೂ

ಈ ಮುಪ್ಪಿನ ಕಾಲದಲ್ಲಿ ದೇವೇಗೌಡರು "ನಾನೂ ಕೂಡ ಗಂಡಸು" ಎಂದುಬಿಟ್ಟಿದ್ದಾರಂತಲ್ಲಾ, ಗಂಡಸನ್ನು ಗಂಡು ಎನ್ನಬೇಕಾದರೆ ಆ ಅಧಿಕಾರವಿರುವುದು ಹೆಣ್ಣಿಗೆ. ಆದರೆ ಯಾವ ಹೆಂಗಸೂ ತನ್ನ ಗಂಡನನ್ನು ಗಂಡಸು ಅಥವಾ ಗಂಡೆಂಗುಸು ಎಂದು ಎಲ್ಲೂ ಹೇಳುವುದಿಲ್ಲ. ಅಷ್ಟರಮಟ್ಟಿಗೆ ಮರ್ಯಾದೆ ಕಾಪಾಡಿಕೊಂಡು ಹೆಂಗಸರು ಅಪ್ಪಟ ಹೆಂಗಸಿನಂತೆ ಇರುತ್ತಾರೆ. ಆದರೆ ಇದ್ದಕ್ಕಿದ್ದಂತೆ ಐದಾರು ಮಕ್ಕಳ ತಂದೆಯೊಬ್ಬ ತನ್ನ ಎದುರಾಳಿ ರಾಜಕಾರಣಿಗಳಿಗೆ ತಾನೂ ಗಂಡಸೆಂದು ಘರ್ಜಿಸಬೇಕಾದರೆ ಒಂದೋ ಆತನ ಗಂಡಸ್ತನದ ಕೆಲಸ ನಿಂತುಹೋಗಿರಬೇಕು ಅಥವಾ ಆತ ರಾಜಕಾರಣದಲ್ಲಿ ಗಂಡಸ್ತನದ ರಾಜಕಾರಣ ಮಾಡಿರಲಾರ ಎಂದು ದೇವೇಗೌಡರಿಂದ ಮರ್ಮಸ್ಥಾನದ ಮೂದಲಿಕೆಗೆ ತುತ್ತಾದ ರಾಜಕಾರಣಿಗಳು ಚರ್ಚಿಸುತ್ತಿರಬೇಕಾದರೆ ದೇವೇಗೌಡರ ಗಂಡಸ್ತನದ ಸಾಹಸಗಳ ಸರಮಾಲೆಯೇ ಹೊಳೆಯಿತಲ್ಲಾ, ಥೂತ್ತೇರಿ!

* * * * * * * * * * *

ಮಹಾಗಂಡಸಿನಂತೆ ಮಾತನಾಡುವ ಈ ದೇವೇಗೌಡರು ಮೀಸೆ ಬಿಟ್ಟಿದ್ದನ್ನು ಯಾರೂ ನೋಡಲಿಲ್ಲ. ಶಕುನಿಯಂತೆ ಗಡ್ಡಬಿಟ್ಟಿದ್ದನ್ನೂ ನೋಡಿದವರಿಲ್ಲವಂತಲ್ಲಾ, ಆದರೂ ಭೀಷ್ಮನಂತಹ ರಾಜಕಾರಣಿಗಳ ಎದುರು ಬೃಹನ್ನಳೆಯಾಗಿ ವರ್ತಿಸಿದ್ದನ್ನು ನೋಡಿದವರಿದ್ದಾರಂತೆ. ಹೆಗಡೆ ಪಕ್ಕದಲ್ಲಿದ್ದು ಶುದ್ಧ ಶಕುನಿಯಂತೆ ನಡೆದುಕೊಂಡಿದ್ದನ್ನು ನೋಡಿದ್ದಾರಂತೆ. ಮಹಾನ್ ಜಟ್ಟಿಯಾಗಿ, ತೊಡೆ ತಟ್ಟಿ ರಾಜಕಾರಣ ಮಾಡಿದ ದೇವರಾಜ ಅರಸು ಎದುರಿಗೆ ಭುಜ ತಟ್ಟುವುದು ಬಿಟ್ಟು ಗೋಳೋ ಎಂದು ಅಳುತ್ತ ಕಡೆಗೂ ಗುಂಡೂರಾಯನ ಮೊರೆಹೊಕ್ಕು ಆತನನ್ನು ಹೊಳೆನರಸಿಪುರಕ್ಕೆ ಕರೆದೊಯ್ದು ಮೆರವಣಿಗೆ ಮಾಡಿ, ಸಾಲ ಸೋಲ ತೀರಿಸಿಕೊಂಡು ಏತ ನೀರಾವರಿ ವ್ಯವಸ್ಥೆ ರಸ್ತೆ ಚರಂಡಿ, ವ್ಯವಸ್ಥೆಯ ಕಂಟ್ರಾಕ್ಟ್ ಬಿಲ್ಲುಗಳಾಗುವಂತೆ ಮಾಡಿಕೊಂಡಿದ್ದು ನರಿಬುದ್ಧಿ ಮಾಡುವ ರಾಜಕಾರಣವೇ ಹೊರತು ಗಂಡಸುತನದ ಘರ್ಜನೆಯವರು ಮಾಡುವ ರಾಜಕಾರಣವಲ್ಲವಂತಲ್ಲಾ, ಥೂತ್ತೇರಿ!

* * * * * * * * * * *

ಸ್ವಾಭಿಮಾನದ ರಾಜಕಾರಣದ ಸಂಕೇತವಾಗಿದ್ದ ವೈ.ಕೆ. ರಾಮಯ್ಯನನ್ನು ಎದುರಿಸಲಾರದೆ ಆತನ ಏರಿಯಾದಲ್ಲಿ ಮಾಟಮಂತ್ರದ ಸಾಮಗ್ರಿ ಹರಡಿದ್ದು ಸ್ವತಃ ವೈ.ಕೆ. ರಾಮಯ್ಯನವರ ಗಮನಕ್ಕೇ ಬರಲಾಗಿ ವಿಷಾದದಿಂದ ನಕ್ಕಿದ್ದರಂತಲ್ಲಾ. ಕೆ.ಎನ್. ನಾಗೇಗೌಡ ಸಾಯುವ ಮುನ್ನ "ನನಗೆ ಯಾರೋ ಮಾಟ ಮಾಡಿಸಿದ್ದಾರೆ. ನನ್ನನ್ನು ಯಾರೂ ಉಳಿಸಿಕೊಳ್ಳಲಾರಿರಿ" ಎಂದು ಕೂಗಿಕೊಂಡೇ ತೀರಿಹೋದಾಗ, ನಾಗೇಗೌಡರ ಪತ್ನಿ ಸಾವಿರಾರು ಜನ ಸಾರ್ವಜನಿಕರ ಎದುರು ನನ್ನ ಗಂಡ ತೀರಿಹೋಗಿ ಸಿದ್ಧರಾಮಯ್ಯನಲ್ಲಿ ಸೇರಿಕೊಂಡಿದ್ದಾರೆ ಎಂದು ಹೇಳುತ್ತಲೇ ಸಿದ್ಧರಾಮಯ್ಯನ ಪಾಳೆಯದಿಂದ ದಳದ ಪಾಳೆಯಕ್ಕೆ ದಯಮಾಡಿಸಿದ್ದನ್ನು ನೋಡಿದರೆ. ಎರಡು ದಶಕದ ಗೌಡರ ಶಿಷ್ಯ ಸಿದ್ಧರಾಮಯ್ಯನಿಗೂ ಗೌಡರ ದೋಷ ಅಂಟಿರಬಹುದೆಂದು ಆಗದವರು ಆಡಿಕೊಳ್ಳುವಂತಾಗಿದೆಯಂತಲ್ಲಾ, ಥೂತ್ತೇರಿ!!

* * * * * * * * * * *


ತೆರೆಯಮರೆಯಲ್ಲಿ ಮಗನನ್ನು ಮುಖ್ಯಮಂತ್ರಿ ಮಾಡುವ ಎಲ್ಲಾ ಸಂಚುಗಳನ್ನು ರೂಪಿಸಿ, ಕಣ್ಣೀಟವಾದುತ್ತ ಅಳುವ ನಟನೆ ಮಾಡಿದ್ದನ್ನು ನೋಡಿದ ಎಂ.ಪಿ. ಪ್ರಕಾಶ್ ಒಳಗೊಳಗೇ ನಗುತ್ತಿರುವುದನ್ನು ನೋಡಲಾಗದೆ ಎ.ಕೆ. ಆಂಟನಿ ಹುಡುಕಿಕೊಂಡು ಬನ್ನಿ ಎಂದು ಕಳುಹಿಸಿ, ಇತ್ತ ಬೆನ್ನೆಲುಬಿಲ್ಲದ ಕೆ.ಆರ್. ಪೇಟೆ ಕೃಷ್ಣನನ್ನು ಕೂರಿಸಿಕೊಂಡು ಎಲ್ಲಾ ಸೂತ್ರಗಳನ್ನು ಹೇಳಿಕೊಟ್ಟು ಒಳಗೊಳಗೇ ಮರಣಾನಂದದ ಖುಷಿ ಅನುಭವಿಸಿದ್ದು, ಗಂಡಸ್ತನವಿದ್ದವರು ಮಾಡುವ ರಾಜಕಾರಣವೇ ಎಂದು ಸಿಂಧ್ಯಾನ ಕಡೆಯ ಟೈಲರ್‌ಗಳು ಆಡಿಕೊಂಡು ನಗುತ್ತಿವೆಯಂತಲ್ಲಾ, ಸದ್ಯಕ್ಕೆ ಮುಂದೆ ತನ್ನ ಮಕ್ಕಳ ಹಾದಿಗೆಲ್ಲಿ ಮುಳ್ಳಾಗುತ್ತಾನೋ ಎಂದು ಹೆದರಿ ಚೆಲುವರಾಯಸ್ವಾಮಿಯನ್ನು ಸೋಲಿಸಲೆಂದು ಈಗಾಗಲೇ ಡಮ್ಮಿ ಅಭ್ಯರ್ಥಿಯ ಬಾಲ ತುರಿಸುತ್ತ ಕುಳಿತಿರುವ ಗೌಡರು ಒಂದೇ ಒಂದು ಗಂಡಸ್ತನದ ರಾಜಕಾರಣ ಮಾಡಿದ್ದರೆ ತೋರಿಸಿ ಎಂದು ಅಕಾಲ ಮರಣಕ್ಕೆ ತುತ್ತಾದ ಪುಟ್ಟಸ್ವಾಮಿ ಗೌಡರ ಕಡೆ ಹೈದರು ಸವಾಲಾಕುತ್ತಿವೆಯಂತಲ್ಲಾ, ಥೂತ್ತೇರಿ!!

* * * * * * * * * * *

ದೇವೇಗೌಡರ ಕೈಗೊಂಬೆಯಂತಿರುವ ಮೂವರು ಮಂದಮತಿಗಳಂತಹ ಮಂತ್ರಿಗಳು ಮಣಭಾರದ ಹಾರ ತೆಗೆದುಕೊಂಡು ಹೋಗಿ, ತಮಗಾಗಿ ತಮ್ಮೆಲ್ಲಾ ಬುದ್ಧಿ ಬೆಲೆ ಮರ್ಯಾದೆಯನ್ನು ತ್ಯಾಗ ಮಾಡುತ್ತಿರುವ ಎಂ.ಪಿ. ಪ್ರಕಾಶ್‌ರ ಕೊರಳಿಗೆ ಹಾಕಿ ಚಪ್ಪಾಳೆ ಹೊಡೆದವಂತಲ್ಲಾ. ಗರಬಡಿದಂತಾದ ಎಂ.ಪಿ. ಪ್ರಕಾಶ್ ಇದೇಕೆಂದು ಕೇಳಲಾಗಿ ರೇವಣ್ಣ "ನಿಮಗಾಗ್ಲೆ ಅರವತ್ತೊರ್ಸಾಯ್ತಲ್ಲಾ ಸಾ ಅದಕ್ಕೆ" ಎಂದನಂತಲ್ಲಾ. ಅದಕ್ಕೆ ಕುಮಾರಸ್ವಾಮಿ "ಏ ಅರವತ್ತಲ್ಲ ಅರವತ್ತೈದು" ಎಂದು ತಿದ್ದಿದರಂತಲ್ಲಾ. ಇವರಿಬ್ಬರ ಲೆಕ್ಕವನ್ನು ತಿದ್ದಿದ ಚಲುವರಾಯಸ್ವಾಮಿ "ಪ್ರಕಾಶ್‌ಗಾಗಲೇ ಅರವತ್ತೇಳಾಗಿದೆ. ಅದ್ಕೆ ಅವುರು ಚನ್ನಾಗಿ ಮಾತಾಡೋದು, ನಾವು ಅವುರಂಗೆ ಓದಿ ಬುದ್ಧಿವಂತರಾಗಿ ಯಲ್ಲಾನು ತಿಳಕೊಬೇಕಾದ್ರೆ ಇನ್ನ ಹತ್ತದನ್ಯೆದೊರ್ಸ ಕಾಯಬೇಕಲ್ಲ ಹೇಳಿ" ಎಂದರಂತಲ್ಲಾ. ತನಗಾಗಲೇ ಅರವತ್ತೇಳಾದುದನ್ನು ಒಪ್ಪಿಕೊಳ್ಳಲಾರದ ಪ್ರಕಾಶ್, ಹಾರ ತುರಾಯಿ ಸಂದರ್ಭದ ನಗು ನಗುತ್ತಿರಬೇಕಾದರೆ ರೇವಣ್ಣ "ಯ್ಯಾಪಿ ಬರ್ತಡೇ ಸಾ" ಎಂದರಂತಲ್ಲಾ, ಥೂತ್ತೇರಿ!!!

* * * * * * * * * * *

ಜನರಿಗೆ ಬೇಕಿಲ್ಲದ ಆದರೆ ದೇವೇಗೌಡರಿಗೆ ಮಾತ್ರ ಬೇಕಾಗಿರುವ ಈ ಸರ್ಕಾರದ ಮಂತ್ರಿಗಳು, ಕತ್ತೆ ಮೆದುಳು ಪಡೆದವರಂತೆ ವಿಧಾನಸೌಧದಲ್ಲಿ ಮೆರೆಯುತ್ತಿರಬೇಕಾದರೆ, ಅತ್ತ ಮಲೆನಾಡಿನ ಮೂಲೆಯೊಂದರಲ್ಲಿ ತಲೆಮರೆಸಿಕೊಂಡಂತಿದ್ದ ರಾಮೇಗೌಡರ ಮನೆಯೊಳಗಿಂದ ಹರಿದ ರಕ್ತ ಮಳೆ ನೀರಿನೊಡನೆ ಸೇರಿ ಕಾಡುಸೇರುತ್ತಿತ್ತಂತಲ್ಲಾ. ಎನ್‌ಕೌಂಟರ್‌ಗೆ ಬಲಿಯಾದ ರಾಮೇಗೌಡ ಮತ್ತು ಕಾವೇರಮ್ಮನ ಮಗ ಆದರ್ಶ, ಅಪ್ಪ ಅವ್ವನ ಶವ ನೋಡುತ್ತ ಅಳುವನ್ನೇ ಕಳೆದುಕೊಂಡವನಂತೆ ಗರ ಹೊಡೆದು ನಿಂತಿದ್ದನಂತಲ್ಲಾ, ಅರ್ಧ ರಾತ್ರಿಯಲ್ಲಿ ಹೋಟೆಲಿನವರು ಅನ್ನ ಕೊಡಲಿಲ್ಲವೆಂದು ಗೌಡರ ಮೊಮ್ಮಗ ಮಾಡಿದ ದಾಂಧಲೆಗೆ ಮರುದಿನವೇ ಮೊಮ್ಮಗನ ಪರ ವಕಾಲತ್ತು ವಹಿಸಿ ಮಾತನಾಡಿದ ದೇವೇಗೌಡರ ಸರ್ಕಾರದ ಕುರುಡು ಗೋಲಿಗಳಿಗೆ ತುತ್ತಾಗಿ ಸತ್ತ ರಾಮೇಗೌಡ ಕಾವೇರಮ್ಮನ ಮಗನ ಪರ ಯಾರು ವಕಾಲತ್ತು ವಹಿಸಬೇಕು, ಯಾರು ಅನ್ನಕೊಡಬೇಕು. ಈ ಬಗ್ಗೆ ಹುಟ್ಟಿದಬ್ಬ ಮಾಡಿಕೊಂಡ ಗೃಹಮಂತ್ರಿಯಿಂದಲೂ ಉತ್ತರವಿಲ್ಲವಂತಲ್ಲಾ, ಥೂತ್ತೇರಿ!!!



ಗಿರಿಜನರ ಕೊಲೆ ನಡೆದದ್ದು ಹೀಗೆ...

ಜುಲೈ 10ರಂದು ಮೆಣಸಿನ ಹಾಡ್ಯದಲ್ಲಿ ಪೊಲೀಸರು ನಡೆಸಿದ ನಕ್ಸಲ ಗೌತಮ್ ಹಾಗೂ ನಾಲ್ವರು ಗಿರಿಜನರ ಹತ್ಯಾಕಾಂಡವೆಂಬ ರುದ್ರ ಭಯಾನಕ ಘಟನಾವಳಿಗಳ ವಿವರ ಇಲ್ಲಿದೆ....

ಅದು ಜುಲೈ 10 ಮಂಗಳವಾರ ಬೆಳಗಿನ ಜಾವ 6 ಗಂಟೆ 30 ನಿಮಿಷ.

ಕೊಪ್ಪ ತಾಲ್ಲೂಕಿನ ಮೇಗೂರು ಬಳಿಯ ಒಡೆಯರ ಮಠ ಎಂಬ ಸ್ಥಳದಲ್ಲಿರುವ ಆದಿವಾಸಿ ಗಿರಿಜನ ರಾಮೇಗೌಡ-ಕಾವೇರಮ್ಮ ದಂಪತಿಗಳಿಗೆ ಅದು ಎಂದಿನಂತೆ ಮಳೆಗಾಲದ ಒಂದು ಸಾಮಾನ್ಯ ದಿನವಾಗಿ ಮುಗಿದು ಹೋಗಬೇಕಿತ್ತು. ಆದರೆ ಪೊಲೀಸರು ತಮ್ಮದೇ ಕಾರಣಗಳಿಗಾಗಿ ಆ ದಿನವನ್ನೇ ಅವರ ಬದುಕಿನ ಕೊನೆ ದಿನವನ್ನಾಗಿಸಲು ತೀರ್ಮಾನಿಸಿ ಮರಣದಂಡನೆ ವಿಧಿಸಿಬಿಟ್ಟರು. ಅಷ್ಟೇ ಅಲ್ಲ, ಈ ದಂಪತಿಗಳ ನೆಂಟರ ಹುಡುಗರಾಗಿದ್ದ ಅತ್ತದ ಶೇಷಗೌಡ್ರು ಮಗ ಪರಮೇಶ್, ಗೋಳಗುಂಡಿ ಅಪ್ಪುಗೌಡರ ಮಗ ಸುಂದರೇಶ್‌ನೂ ಆಕಸ್ಮಾತ್ತಾಗಿ ಅವತ್ತು ಅಲ್ಲೇ ಉಳಿದುಕೊಂಡಿದ್ದರಾದ ಕಾರಣ ಅವರಿಗೂ ಯಾವುದೇ ರಿಯಾಯಿತಿ ತೋರಿಸದೆ ಗುಂಡಿಕ್ಕಿ ಕೊಲ್ಲಲಾಗಿದೆ. ಅವತ್ತು ಮನೆಯಲ್ಲೇ ಇದ್ದ ಗಿರಿಜನ ದಂಪತಿಗಳ ಹಿರಿಮಗ 15 ವರ್ಷದ ಪ್ರಶಾಂತ ಈಗ ನಾಪತ್ತೆಯಾಗಿದ್ದಾನೆ.

ಪರಮೇಶ್ ಕುದುರೆಮುಖ ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟದ ಕಾರ್ಯದರ್ಶಿಯಾಗಿ ಮುಖ್ಯವಾಹಿನಿಯಲ್ಲಿದ್ದುಕೊಂಡೇ ಕಾನೂನುಬದ್ಧ ಹೋರಾಟ



ರಾಮೇಗೌಡ, ಕಾವೇರಮ್ಮ ಮತ್ತು ಸುಂದರೇಶ್ ಕೊಲೆಯಾದ ಸ್ಥಳ. ಪೊಲೀಸರು ಹಾರಿಸಿರುವ ಗುಂಡು ನೆಲವನ್ನು ಕೊರೆದು ತೂತು ಮಾಡಿರುವುದು

ನಡೆಸಿಕೊಂಡಿದ್ದವನು. ಇನ್ನು ಸುಂದರೇಶ್ ಬುಧವಾರ ಬೆಳಗ್ಗೆ ಅಡಿಕೆ ತೋಟಕ್ಕೆ ಔಷಧ ಸಿಂಪಡಿಸುವ ಕೆಲಸಕ್ಕಾಗಿ ಹಿಂದಿನ ರಾತ್ರಿಯೇ ರಾಮೇಗೌಡರ ಮನೆಗೆ ಬಂದು ಉಳಿದುಕೊಂಡಿದ್ದ ಗಿರಿಜನ ರೈತ ಯುವಕ. ಆದರೆ ಸರ್ಕಾರ ತನ್ನ ವಿರೋಧಿಗಳನ್ನು ಮುಗಿಸಿಬಿಡುವ ತೀರ್ಮಾನ ಒಮ್ಮೆ ತೆಗೆದುಕೊಂಡರೆ ಅವರಲ್ಲಿ ಬಂದುಕೋರ, ಬೆಂಬಲಿಗ, ಮುಗ್ಧರೆಂಬ ತಾರತಮ್ಯ ಮಾಡುವುದಿಲ್ಲವೆಂದು ಅವರಿಗೆ ಹೇಗೆ ಗೊತ್ತಾಗಬೇಕು?

ಕಳೆದ ಒಂದು ತಿಂಗಳಿಂದಲೂ ಮಲೆನಾಡಿನಲ್ಲಿ ನಕ್ಸಲ್ ದಳಗಳು ತಮ್ಮ ಕ್ಯಾಂಪ್‌ಗಳಿಂದ ಹೊರಬಂದು ಕೆಲ ಕಾರ್ಯಾಚರಣೆ ನಡೆಸಿದ್ದವು. ಜೂನ್ 3 ರಂದು ವೆಂಕಟೇಶ್ ಎಂಬಾತನನ್ನು ಪೊಲೀಸ್ ಇನ್‌ಫಾರ್ಮರ್ ಎಂದು ಆರೋಪಿಸಿ ನಕ್ಸಲರು ಕೊಂದಿದ್ದರು. ಜುಲೈ 1 ರ ಬೆಳಗ್ಗೆ ಆಗುಂಬೆಯ ತಲ್ಲೂರು-ಅಂಗಡಿ ಹತ್ತಿರ ಕೆಎಸ್‌ಆರ್‌ಟಿಸಿ ಬಸ್ ಒಂದನ್ನು ಸುಟ್ಟು ಹಾಕಲಾಗಿತ್ತು. ಜುಲೈ 4 ರಂದು ಹೊಲ್ಲೂರು ಬೈಲಿನ ಕೇಶವ ಹೆಗಡೆ ಮನೆ ಮೇಲೆ ದಾಳಿ ಮಾಡಿದ ನಕ್ಸಲರು ಒಂದು ಬಂದೂಕು ಹಾಗೂ 55 ಸಾವಿರ ನಗದನ್ನು ಕಿತ್ತುಕೊಂಡು ಹೋದರೆಂಬ ಸುದ್ದಿಯಾಗಿತ್ತು. ಅದಾದ ನಾಲ್ಕೇ ದಿನದಲ್ಲಿ ಜುಲೈ 8 ರಂದು ಶೃಂಗೇರಿಯ ಬಿಜೆಪಿ ಲೀಡರ್ ನಮ್ಮಾರ್ ರಂಗನಾಥನ ಮಾವಿನಕಾಡು ಮನೆಯಲ್ಲಿ ಹಗಲು ವೇಳೆಯಲ್ಲೇ ಪ್ರತ್ಯಕ್ಷವಾದ ನಕ್ಸಲ್ ದಳ ಭಜರಂಗಿಗಳ ಪುಂಡಾಟ ನಿಲ್ಲಿಸುವಂತೆ ಎಚ್ಚರಿಕೆ ನೀಡಿ ಹೋಗಿತ್ತು.

ನಕ್ಸಲರು ಇಷ್ಟು ಧೈರ್ಯವಾಗಿ ಮತ್ತೆ ಓಡಾಡಲು ಶುರು ಮಾಡಿದರೆ ಪೊಲೀಸರು ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ ಎಂಬುದು ನಕ್ಸಲರಿಗೆ ಗೊತ್ತಿರದ ಸಂಗತಿ ಏನಾಗಿರಲಿಲ್ಲ. ಆದರೆ ಈ ಬಾರಿ ಕಾರ್ಯತಂತ್ರದಲ್ಲಿ ಪೊಲೀಸರು ಜಾಸ್ತಿ ಮುಂದಾಲೋಚನೆ ಮಾಡಿರುತ್ತಾರೆಂಬುದನ್ನು ಮಾತ್ರ ನಕ್ಸಲರು ನಿರೀಕ್ಷಿಸಿರಲಿಲ್ಲವೆಂದು ಕಾಣುತ್ತದೆ.

ಒಡೆಯರ ಮಠದ ರಾಮೇಗೌಡರ ಮನೆಯಲ್ಲಿ ನಕ್ಸಲ್ ಗೌತಮ ಹಾಗೂ 12 ಪೊಲೀಸರ ತಂಡ ಅನಿರೀಕ್ಷಿತವಾಗಿ ಮುಖಾಮುಖಿಯಾಗಿದ್ದು ಅಂಥ ಸಂದರ್ಭದಲ್ಲೇ! ಸಾಮಾನ್ಯವಾಗಿ ನಕ್ಸಲ್ ಗೆರಿಲ್ಲಾಗಳು 2+1, 4+1 ರೀತಿ ಸಂಚರಿಸುತ್ತಾರೆಂಬುದು ಚೆನ್ನಾಗಿ ಗೊತ್ತಿರುವ ಪೊಲೀಸರಿಗೆ ಜುಲೈ 8 ರಂದು ನಮ್ಮಾರ್ ರಂಗನಾಥನ ಮನೆಗೆ ಒಟ್ಟು 12 ಜನ ಬಂದು ಹೋದರೆಂಬ ಸುದ್ದಿ ಸಿಕ್ಕ ನಂತರ ತಮ್ಮ ಹಳೆಯ ಅನುಭವ, ತಿಳಿವಳಿಕೆಯನ್ನೆಲ್ಲಾ ಇಟ್ಟುಕೊಂಡು ವಿಶ್ಲೇಷಿಸಿ ಕೊನೆಗೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಬೇರೆಬೇರೆ ಕಡೆ ಇದ್ದ ಎರಡು ಅಥವಾ ಮೂರು ನಕ್ಸಲ್ ದಳಗಳು ಒಟ್ಟು ಸೇರಿ ರಂಗನಾಥನ ಮನೆಗೆ ಬಂದು ನಂತರ ಮತ್ತೆ ತಮ್ಮ ಏರಿಯಾಗಳಿಗೆ ಹಿಂತಿರುಗುತ್ತಾರೆ. ಮತ್ತು ಹಾಗೆ ಹಿಂತಿರುಗುವ ದಾರಿಯಲ್ಲಿ ಯಾವ್ಯಾವ ಹಳ್ಳಿಗಳಿಗೆ ಭೇಟಿ ನೀಡಿ ಹೋಗುವ ಸಾಧ್ಯತೆ ಇದೆ ಎಂಬುದನ್ನು ಲೆಕ್ಕ ಹಾಕಿ ಅಲ್ಲೆಲ್ಲಾ ಪೊಲೀಸ್ ದಳಗಳನ್ನು ಕೂಂಬಿಂಗ್‌ಗಾಗಿ ಕಳುಹಿಸಿದ್ದಾರೆ.

ಇದು ಕಾಡಿನೊಳಗೆ ನಡೆಸುತ್ತಿದ್ದ ಕೂಂಬಿಂಗ್ ಅಲ್ಲ, ಬದಲಾಗಿ ನಕ್ಸಲರ ಪರ ಸಹಾನುಭೂತಿ, ಬೆಂಬಲ ನೀಡುತ್ತಾರೆಂಬ ಶಂಕೆ ಇರುವವರ ಮನೆ ಮನೆಗೆ ಹೋಗಿ ಚೆಕ್ ಮಾಡಿ ಬರುವುದು, ನಿಗಾ ಇಟ್ಟಿರುವುದು, ಇನ್‌ಫಾರ್ಮರ್‌ಗಳ ಮೂಲಕ ಮಾಹಿತಿ ಸಂಗ್ರಹಿಸುವ ಕಾರ್ಯಾಚರಣೆ ಅದು. ಊಟ, ಆಶ್ರಯಕ್ಕಾಗಿ ನಕ್ಸಲರು ಆ ದಾರಿಯಲ್ಲಿನ ಮನೆಗಳಿಗೆ ಬರುವ ಸಾಧ್ಯತೆ ಇದೆ ಎಂಬ ಕಾರಣಕ್ಕೆ ಜುಲೈ 10 ರ ಎನ್‌ಕೌಂಟರ್ ನಡೆದ ದಿನವೂ ಮೆಣಸಿನಹಾಡ್ಯ ಸುತ್ತಮುತ್ತಲಿನ ಪ್ರದೇಶದಲ್ಲಿ 10-12 ಜನರ ಪೊಲೀಸ್ ಗುಂಪು ಇದೇ ಕೆಲಸದಲ್ಲಿ ನಿರತವಾಗಿತ್ತು. ಅವತ್ತು ಬೆಳಗ್ಗೆ ರಾಮೇಗೌಡರ ಮನೆಗೆ ಹೋಗುವ ಮುನ್ನ ಕೆಂಪೇಗೌಡ್ರು ಎಂಬಾತನ ಮನೆಗೆ 6 ಗಂಟೆ ಸುಮಾರಿಗೆ ಹೋದ ಪೊಲೀಸರು ಅಲ್ಲಿ ಚೆಕ್ ಮಾಡಿದ ನಂತರ ಅಲ್ಲಿಂದ 1 ಫರ್ಲಾಂಗ್ ದೂರದಲ್ಲಿರುವ ರಾಮೇಗೌಡರ ಮನೆಯತ್ತ 6.30 ರ ಸುಮಾರಿಗೆ ಬಂದಿದ್ದಾರೆ.

ಅಲ್ಲಿ ನಕ್ಸಲರ ನೇತ್ರಾವತಿ ದಳದ ಕಮಾಂಡರ್ ಗೌತಮ್ ಅಲಿಯಾಸ್ ಚೆನ್ನಪ್ಪ ಕಲ್ಲೂರ ಇದ್ದ ಮತ್ತದು ಪೊಲೀಸರಿಗೆ ಗೊತ್ತಿರಲಿಲ್ಲ ಎಂಬುದು ಸ್ಪಷ್ಟ. ಹಿಂದಿನ ರಾತ್ರಿ ಭಾರಿ ಮಳೆ ಬೀಳುತ್ತಿದ್ದ ಕಾರಣ ಊಟ-ಆಶ್ರಯ ಹುಡುಕಿಕೊಂಡು ತಡರಾತ್ರಿ ಗೌತಮ ಅಲ್ಲಿಗೆ ಬಂದಿದ್ದಿರಬಹುದು. ಈತ ರಾಯಚೂರಿನವನಾಗಿದ್ದು ಮಲೆನಾಡಿನ terrain ಅಷ್ಟು ಪರಿಚಯವಾಗಿರಲಿಕ್ಕಿಲ್ಲ, ಒಂದು ವರ್ಷದ ಹಿಂದಷ್ಟೇ ನಕ್ಸಲ್ ದಳ ಸೇರಿದ್ದವನಾದ್ದರಿಂದ ಕಾಡಿನಲ್ಲಿ ದಾರಿತಪ್ಪಿ ರಾಮೇಗೌಡರ ಮನೆಗೆ ಬಂದಿರುವ ಸಾಧ್ಯತೆಯೂ ಇದೆ.



ಪರಮೇಶ್ ತಂದೆ-ತಾಯಿ


ಅವತ್ತು ಬೆಳಗ್ಗೆ ತಮ್ಮ ಮನೆಗೆ ಪೊಲೀಸ್ ಸರ್ಚ್ ಪಾರ್ಟಿ ಬರಬಹುದೆಂಬ ಕಲ್ಪನೆಯೂ ಇರದ ರಾಮೇಗೌಡ ದಂಪತಿಗಳು ಕಾಫಿ ಮಾಡಿಕೊಂಡು ಕುಡಿಯುತ್ತಾ ಕುಳಿತಿದ್ದಾರೆ. ಅತ್ತ ಪರಮೇಶ್ ತೋಟಕ್ಕೆ ಔಷಧಿ ಹಾಕಲು ರೆಡಿ ಮಾಡಿಕೊಳ್ಳುತ್ತಿದ್ದರೆ ಸುಂದರೇಶ್ ಇನ್ನೂ ನಿದ್ದೆಯಲ್ಲಿದ್ದಾನೆ. ಗೌತಮ್ ಅದೇ ಮನೆಗೆ ನಡುರಾತ್ರಿ ಬಂದಿದ್ದಾನೆಂಬ ಸಂಗತಿ ಇವರಿಬ್ಬರಿಗೆ ಗೊತ್ತಿತ್ತಾ ಎಂಬುದು ಈಗ ಪೊಲೀಸರಿಗಷ್ಟೇ ಗೊತ್ತು.

ಬಹಳ ಲೋಕಾಭಿರಾಮವೆಂಬಂತೆ ಹಿತ್ತಲಿನ ಓಣಿ ಹಾದಿ ಮೂಲಕ ಬಳಸಿಕೊಂಡು ಮನೆ ಬಾಗಿಲಿಗೆ ಬಂದ ಪೊಲೀಸರು ಬಾಗಿಲು ತಟ್ಟಿ ಒಳಬರುತ್ತಾ "ಏನ್ ಕಾವೇರಮ್ಮ, ಕಾಫಿ ಕುಡಿತಿದ್ದೀರಾ, ನಮಗೂ ಕೊಡಿ. ಮನೆ ಸರ್ಚ್ ಮಾಡಬೇಕು" ಎಂಬಿತ್ಯಾದಿ ಕೇಳಿದ್ದಾರೆ.

ಬಿಳಿದಾಳೆ ಈಶ

ಪರಮೇಶ್ ಮುಖ ನೋಡಿ "ಏನ್ ಪರಮೇಶ್ ನೀನು ಇಲ್ಲಿದ್ದೀಯಾ?" ಎಂತಲೂ ಕೇಳಿದ್ದಾರೆ. ಕೇವಲ ಗಿರಿಜನರಿಗಷ್ಟೇ ಅಲ್ಲ, ಪೊಲೀಸರಿಗೂ ಪರಮೇಶ್ ಅಷ್ಟು ಪರಿಚಿತನಾಗಿದ್ದಾತ. ಮುಂದಿನ 10 ನಿಮಿಷದಲ್ಲಿ ಅಲ್ಲಿ ಒಬ್ಬನನ್ನು ಕೊಲ್ಲಲಾಗುತ್ತದೆಂಬ ಊಹೆ ಯಾರಿಗೂ ಇರಲಿಲ್ಲ. ಅಷ್ಟೇ ಅಲ್ಲ, 'ಕಾಫಿ ಕೊಡಿ' ಅಂತಾ ಕೇಳಿದ ಪೊಲೀಸರೇ ಅಲ್ಲಿಂದಾಚೆ ಒಂದು ಗಂಟೆಯ ನಂತರ ತಮಗೂ ಗುಂಡಿಕ್ಕುತ್ತಾರೆಂಬ ಕಲ್ಪನೆಯೂ ಅವರಿಗಿರಲಿಲ್ಲ.

ಹಾಗೆ ಸರ್ಚ್ ಮಾಡಲೆಂದು ಒಳಹೊಕ್ಕ ಇಬ್ಬರು ಪೊಲೀಸರು ಮನೆ ಜಗಲಿ, ಪುಟ್ಟ ರೂಂ, ಅಡುಗೆಮನೆಯನ್ನೆಲ್ಲಾ ನೋಡಿ ನೇರ ಹಿತ್ತಲ ಬಾಗಿಲ ಕಡೆಗಿದ್ದ ಬಚ್ಚಲು ಮನೆಯತ್ತ ಸಾಗಿದ್ದಾರೆ. ಅಲ್ಲಿ ಬಾಗಿಲಿನ ಎಡ



ನಿಶ್ಶಸ್ತ್ರಧಾರಿಯಾಗಿದ್ದ ಪರಮೇಶ್ ಶವದ ಬಳಿ ನಂತರ ಗನ್ ತಂದಿಟ್ಟಿರುವುದು

ಎಂ.ಪಿ. ಪ್ರಕಾಶ್ ಸದನದಲ್ಲಿ ಹೇಳಿದ್ದು

ಮಂಗಳವಾರ ವಿಧಾನಸಭಾ ಸೆಷನ್ ಪ್ರಾರಂಭವಾಗುವಷ್ಟರಲ್ಲೇ ಎನ್‌ಕೌಂಟರ್ ಸುದ್ದಿ ಎಲ್ಲೆಡೆ ಹಬ್ಬಿ ಹೋಗಿತ್ತು, ಸದನದಲ್ಲಿ ಗೃಹ ಸಚಿವ ಎಂ.ಪಿ. ಪ್ರಕಾಶ್ ಮೊದಲ ಹೇಳಿಕೆ ನೀಡುವಾಗ 'ಒಬ್ಬ ನಕ್ಸಲ್ ಗೌತಮನ ಹತ್ಯೆಯಾಗಿದೆ. ಉಳಿದ ನಾಲ್ವರನ್ನು ಬಂಧಿಸಲ್ಪಟ್ಟಿದ್ದಾರೆ' ಎಂದರು. ನಂತರ 'ಇಬ್ಬರ ಹತ್ಯೆ (ಅಷ್ಟರಲ್ಲಿ ಪರಮೇಶನ ಹತ್ಯೆ ಮುಗಿದಿತ್ತು) ಮೂವರ ಬಂಧನ' ಎಂದರು ಪ್ರಕಾಶ್. ಕೊನೆಗೆ ಗುಂಡಿನ ಚಕಮಕಿಯಲ್ಲಿ ಎಲ್ಲಾ 5 ನಕ್ಸಲರ ಹತ್ಯೆಯಾಗಿದೆ ಎಂದು ನಿರ್ಲಿಪ್ತವಾಗಿ ಹೇಳಿದರು. ಅಷ್ಟೇ ಅಲ್ಲ ಈ ಎಲ್ಲರ ಮೇಲೂ ಕೇಸುಗಳಿದ್ದಾವೆಂದೂ ಗೃಹಮಂತ್ರಿ ಹೇಳಿದ್ದಾರೆ.



ಜವಾಬ್ದಾರಿ ಸ್ಥಾನದಲ್ಲಿರುವ ಪ್ರಕಾಶರು ಈಗಲಾದರೂ ಸತ್ತವರ ಮೇಲಿದ್ದ ಕೇಸಿನ ವಿವರಗಳನ್ನು ಬಹಿರಂಗಪಡಿಸಲಿ. ಇಲ್ಲದಿದ್ದರೆ ಪೊಲೀಸರು ಅವರ ಅಭಿಪ್ರಾಯವನ್ನು ಕೇಳದೆ, ಅವರ ಗಮನಕ್ಕೂ ತಾರದೆ ಈ ಕೃತ್ಯ ನಡೆಸಿದ್ದಾರೆ ಎಂಬುದನ್ನಾದರೂ ಒಪ್ಪಿಕೊಳ್ಳಲಿ.

ಇದು ಪ್ರಕಾಶರಿಂದ ಸಾಧ್ಯವೇ?




ರಾಮೇಗೌಡ

ನಮ್ಮ ಕಣ್ಣೆದಿರಿನ ಒಂದು ಸಾಮಾಜಿಕ-ಆರ್ಥಿಕ ಸಮಸ್ಯೆಗೆ, ನೊಂದ ಜನರ ನ್ಯಾಯಯುತ ಪ್ರತಿಭಟನೆಗೆ ಸರ್ಕಾರವು ಪೊಲೀಸರ ಬಂದೂಕಿನಿಂದ ಉತ್ತರ ಕೊಟ್ಟಿರುವ ಭೀಕರ ಪರಿಣಾಮವೇ ಮೆಣಸಿನ ಹಾಡ್ಯ ಕಗ್ಗೊಲೆಗಳು.

ಕರ್ನಾಟಕದಲ್ಲಿ ಈ ಮೊದಲೆಲ್ಲಾ ನಕ್ಸಲ್ ಗೆರಿಲ್ಲಾಗಳನ್ನು 'Catch and Kill' ಎಂಬ ಪಾಲಿಸಿ ಮೂಲಕ ಹತ್ಯೆ ಮಾಡುತ್ತಿದ್ದ ರಾಜ್ಯ ಪೊಲೀಸರು ಶಂಕರ್ ಬಿದರಿ ಕಾನೂನು ಮತ್ತು ಸುವ್ಯವಸ್ಥೆ ಡಿಜಿಪಿಯಾಗಿ ಬಂದ ನಂತರ ತಮ್ಮ ಬಂದೂಕನ್ನು ಗಿರಿಜನರ ಮೇಲೂ ತಿರುಗಿಸಿದ್ದಾರೆ.

ಇದು ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಲಿದೆ. STF ಮುಖ್ಯಸ್ಥರಾಗಿದ್ದ ಬಿದರಿ ವೀರಪ್ಪನ್‌ನನ್ನು ಹಿಡಿಯಲಾಗದೇ ಅಲ್ಲಿನ ಅಸಂಖ್ಯಾತ ಅರಣ್ಯವಾಸಿ ಗಿರಿಜನರ ಮೇಲೆ ದೌರ್ಜನ್ಯ ನಡೆಸಿ ಕುಖ್ಯಾತಿ ಗಳಿಸಿದ್ದವರು. ಹಾಗೆ ಜನರಲ್ಲಿ ಪೊಲೀಸ್ ಟೆರ್ರರ್ ಉಂಟು ಮಾಡಿ ವೀರಪ್ಪನ್‌ಗೆ ಯಾರಿಂದಲೂ ಮಾಹಿತಿ, ಆಶ್ರಯ ಊಟದಂತಾ ನೆರವು ಸಿಗದಂತೆ ಮಾಡಬೇಕೆಂಬುದೇ ಆ ದಮನ ದೌರ್ಜನ್ಯಗಳಿಗೆ ಕಾರಣವಾಗಿತ್ತು.

ಇಷ್ಟಾದರೂ ವೀರಪ್ಪನ್ ಬಿದರಿ ಕೈಗೆ ಸಿಗಲೇ ಇಲ್ಲ. ಬಿದ್ದರಿಯ STF ಪಡೆಗಳಿಂದ ದೌರ್ಜನ್ಯಕ್ಕೊಳಗಾದ ಅಮಾಯಕ ಜನ National Human Rights Commissionನ ಮೊರೆಹೋದರು. ಅದರ ತನಿಖೆ ನಡೆಸಿದ ನ್ಯಾಯಮೂರ್ತಿ ಸದಾಶಿವ ಆಯೋಗ ಪೊಲೀಸ್‌ರ ಅತಿರೇಕ, ಅತ್ಯಾಚಾರ, ದೌರ್ಜನ್ಯಗಳು ನಿಜ ಎಂದು ತೀರ್ಪು ನೀಡಿ ಎರಡೂ ರಾಜ್ಯ ಸರ್ಕಾರಗಳು ಹತ್ತಾರು ಕೋಟಿ ಪರಿಹಾರ ನೀಡಲು ಆದೇಶಿಸಿತ್ತು.


ಶಂಕರ ಬಿದರಿ

ಬಿದರಿಯವರು ಈ ಮುಖಭಂಗದಿಂದಲೂ ಪಾಠ ಕಲಿತಂತೆ ಕಾಣುತ್ತಿಲ್ಲ. ಮಲೆನಾಡಿನಲ್ಲೀಗ ಅಮಾಯಕರ ಮೇಲೂ ಮತ್ತದೇ ದಮನಕಾಂಡ ತಂತ್ರ ಆರಂಭಿಸುತ್ತಿದ್ದಾರೆ. ಜುಲೈ 1 ರಂದು ಆಗುಂಬೆ ಬಳಿ ನಕ್ಸಲರು ಬಸ್ ಸುಟ್ಟ ನಂತರ ಶೃಂಗೇರಿಗೆ ಹೋಗಿ ನಕ್ಸಲ್ ನಿಗ್ರಹ ಪಡೆಯ ಉನ್ನತಾಧಿಕಾರಿಗಳ ಸಭೆ ನಡೆಸಿದ ಬಿದರಿ 'ಕೇವಲ ನಕ್ಸಲ್ ಗೆರಿಲ್ಲಾಗಳನ್ನು ಕೊಲ್ಲುವುದು ಮಾತ್ರವಲ್ಲ, ಅವರಿಗೆ ಬೆಂಬಲ ಆಶ್ರಯ ಕೊಡುವ ಆದಿವಾಸಿಗಳಿಗೂ ತಕ್ಕ ಪಾಠ ಕಲಿಸಿ, ಭೀತಿ ಹುಟ್ಟಿಸಿ' ಎಂದು ಹೇಳಿ ಹೋಗಿದ್ದಾರೆ. ಅದರ ಮರುದಿನವೇ ತಾರೋಳ್ಳಿಕೊಡಿಗೆ ಗ್ರಾಮದ ಪರಮೇಶ್ ಎಂಬಾತನ ಮನಗೆ ಹೋದ ಪೊಲೀಸರು ಅವನ ಮನೆ ಸರ್ಚ್ ಮಾಡಿದ್ದಾರೆ. ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟದ ಗ್ರಾಮ ಸಮಿತಿ ಕಾರ್ಯದರ್ಶಿಯಾಗಿದ್ದ ಪರಮೇಶ್ ಅವತ್ತು ಮನೇಲಿರಲಿಲ್ಲ. ನಂತರ ಅವನಿದ್ದಾಗಲೇ ಇನ್ನೊಮ್ಮೆ ಮನೆಗೆ ನುಗ್ಗಿದ್ದ ಪೊಲೀಸರು ಸರ್ಚ್ ನೆಪದಲ್ಲಿ ಒಂದು ಚೀಲ ತೆರೆದು ತೋರಿಸುವಂತೆ ಹೇಳಿದ್ದಾರೆ. ಏನೆಂದು ಅರಿಯದ ಪರಮೇಶ್ ಚೀಲ ತೆರೆದರೆ ಅದರಲ್ಲಿ ಮಾವೋವಾದಿಗಳ 2 ಕರಪತ್ರ ಸಿಗಬೇಕೆ?

ಮೊದಲ ಬಾರಿ ಸರ್ಚಿಗೆ ಬಂದಿದ್ದಾಗ ಪೊಲೀಸರೇ ಇಟ್ಟುಹೋಗಿದ್ದ ಕರಪತ್ರಗಳವು ನಂತರ ಪರಮೇಶನನ್ನು ಬಂಧಿಸಿ ಎಳೆದೊಯ್ದು 2 ದಿನ ಎಲ್ಲಿದ್ದಾನೆಂಬುದನ್ನು ತಿಳಿಸದೆ ಹಿಂಸಿಸಿ ಈಗ ಕೇಸ್ ಹಾಕಲಾಗಿದೆ. ಒಕ್ಕೂಟದ ಅಧ್ಯಕ್ಷ ವಿಠಲ ಹೆಗಡೆ ವಿರುದ್ಧ ಜಾತಿ ನಿಂದನೆ, ಶಾಂತಿ ಭಂಗದಂತ ಕೇಸ್‌ಗಳನ್ನು ಹಾಕಲಾಗಿದೆ.

ಜುಲೈ 10 ರ ಮೆಣಸಿನಹಾಡ್ಯ ಹತ್ಯೆ ನಡೆದ ದಿನ ಆಕ್ರೋಶಗೊಂಡಿದ್ದ ಯಾರೋ ತಹಶೀಲ್ದಾರ್ ಜೀಪಿಗೆ ಬೆಂಕಿ ಕೊಟ್ಟರೆ ಸ್ಥಳದಲ್ಲಿ ಇಲ್ಲದಿದ್ದ ವಿಠಲ ಹೆಗಡೆ ಮೇಲೆ ಕೇಸ್ ಹಾಕಿ ಎರಡು ದಿನ ಜೈಲಿನಲ್ಲಿಡಲಾಯಿತು. ಈ ಘಟನೆಗಳಿಗೆ ಮೊದಲೇ ಬಿದರಿ 'ಮಲೆನಾಡಿನಲ್ಲಿ ನಕ್ಸಲರ ಮೇಲೆ ಸಹಾನುಭೂತಿ ಇಟ್ಟುಕೊಂಡಿರುವವರು ಎಚ್ಚರದಿಂದಿರಬೇಕು. ನಾವು ಸುಮ್ಮನಿರುವುದಿಲ್ಲ' ಎಂದು ಟಿವಿ ಚರ್ಚೆಯೊಂದರಲ್ಲಿ ಬಹಿರಂಗವಾಗೇ ಬೆದರಿಸಿದ್ದರು. ಆಗಷ್ಟೇ ನಕ್ಸಲ್ ಬೆಂಬಲಿಗರ, ಸಂಘಟನೆಗಳ ಪಟ್ಟಿ ಬಿಡುಗಡೆ ಮಾಡಿ ಎಲ್ಲಾ ಪ್ರಜಾತಂತ್ರವಾದಿಗಳಲ್ಲಿ ಭೀತಿ ಹುಟ್ಟಿಸಲು ಯತ್ನಿಸಿದ್ದರು.

ಜುಲೈ 10 ರ ಬೆಳಗ್ಗೆ ಗೌತಮ್ ಹತ್ಯೆ ಹಾಗೂ ಇನ್ನಿತರ ನಾಲ್ವರು ಗಿರಿಜನರ ಬಂಧನದ ಸುದ್ದಿ ಬಂದಾಗ ಬಹುಶಃ ಉನ್ನತ ಪೊಲೀಸ್ ಅಧಿಕಾರಿಗಳು ಯೋಚಿಸಿರುವುದಿಷ್ಟೇ: ಒಬ್ಬ ನಕ್ಸಲನ ಹತ್ಯೆ ಆಗಿಹೋಗಿದೆ. ಪರಮೇಶ್ ಮತ್ತು ಸುಂದರೇಶ್ ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟದಲ್ಲಿರುವವರು. ಇನ್ನು ರಾಮೇಗೌಡ ದಂಪತಿ ಗಿರಿಜನ ಕುಟುಂಬ. ಈ ಮೂರು ಗುಂಪಿನ ಜನಗಳಿಗೆ ನಕ್ಸಲರ ಸಂಪರ್ಕವಿದೆ ಎಂದು ಪ್ರತಿಪಾದಿಸುವ ಅವಕಾಶ ತಂತಾನೇ ಸಿಕ್ಕಿರುವಾಗ ಬಿದರಿಯವರ 'ತಂತ್ರ' ಜಾರಿಯಾಗಿದೆ. ಎಲ್ಲರನ್ನೂ ಒಮ್ಮೆಗೆ ಮುಗಿಸಿದ್ದಾರೆ!

ಮುಖ್ಯವಾಗಿ ಗಿರಿಜನರಿಗೆ ಇಂತಾದ್ದೊಂದು ಸಾವಿನ ಸಂದೇಶ ನೀಡುವ ಅಗತ್ಯ ಬೇರೆಲ್ಲರಿಗಿಂತಾ ಬಿದರಿಯವರಿಗೇ ಜಾಸ್ತಿ ಇತ್ತೆಂದು ಕಾಣುತ್ತದೆ. ಏಕೆಂದರೆ ಅವರ ಕಾರ್ಯವಿಧಾನ ಮೊದಲಿನಿಂದಲೂ ಹಾಗೇ ಇದೆ.

ಈ ಪೊಲೀಸ್ ಟೆರ್ರರ್ ಪ್ರಜಾತಂತ್ರ ವ್ಯವಸ್ಥೆಗೆ ಮಾರಕ.

ಮೂಲೆಯಲ್ಲಿ ನೀರು ಕಾಯಿಸುವ ಹಂಡೆಯೊಂದಿದ್ದು, ಬಲ ಮೂಲೆಯಲ್ಲಿ ಸೌದೆಯನ್ನು ರಾಶಿಯಾಗಿ ಪೇರಿಸಿಡಲಾಗಿತ್ತು. ಗೌತಮ ಅಲ್ಲೇ ಅಡಗಿಕೊಳ್ಳಲು ಯತ್ನಿಸುತ್ತಿದ್ದಾಗ ಪೊಲೀಸರ ಕಣ್ಣಿಗೆ ಬಿದ್ದಿದ್ದಾನೆ. ಅವರಲ್ಲೊಬ್ಬನನ್ನು ಕಂಡ ಕೂಡಲೇ ಗೌತಮ ಫೈರ್ ಮಾಡಿದ್ದಾನೆ. ಅನಿರೀಕ್ಷಿತವಾಗಿ ಹಾರಿ ಬಂದ ಈ ಗುಂಡಿನಿಂದ ಗಲಿಬಿಲಿಗೊಂಡ ಪೊಲೀಸರು ಕೂಡ ಗೌತಮನತ್ತ ಫೈರ್ ಮಾಡಿ ಕೂಗಿಕೊಳ್ಳುತ್ತಾ ಮನೆಯ ಮುಂಬಾಗಿಲಿನತ್ತ ಓಡಿದ್ದಾರೆ. ಗುಂಡಿನ ಶಬ್ದ ಕೇಳಿ ಮನೆಯ ಹೊರಗಿದ್ದ ಸುಮಾರು ಹತ್ತು ಜನ ಪೊಲೀಸರು ಮನೆಯತ್ತ ದಿಕ್ಕುದೆಸೆ ಇಲ್ಲದೆ ಶೂಟ್ ಮಾಡಿದ್ದಾರೆ.

ಅಂದ ಮುಂಜಾನೆ ಎಂದಿನಂತೆ ತಮ್ಮ ದೈನಂದಿನ ಕೆಲಸಗಳಿಗಾಗಿ ಗದ್ದೆ ತೋಟಗಳತ್ತ ಹೊರಟಿದ್ದ ಕೆಲ ಗಿರಿಜನ ರೈತರು ಒಂದು ಪೊಲೀಸ್ ಟೀಂ ಬೆಳಗ್ಗೆ ರಾಮೇಗೌಡನ ಮನೆಯತ್ತ ಹೋದದ್ದನ್ನು, ಕೆಲ ಹೊತ್ತಿನಲ್ಲೇ ಒಂದು ಗುಂಡು ಹಾರಿದ ಸದ್ದನ್ನೂ ಗಮನಿಸಿದ್ದಾರೆ. ಈ ರಾಮೇಗೌಡನ ಮನೆಯ ಗೋಡೆಯ ನೇರಕ್ಕೆ ಪೂರ್ವಕ್ಕೆ ಒಂದು 100 ಅಡಿ ಎತ್ತರದ ಗುಡ್ಡವಿದ್ದು ಅಲ್ಲೇ ಮಣ್ಣಿನ ದಾರಿಯೂ ಇದೆ. ಕೆಲ ಗಿರಿಜನರು ಅಲ್ಲಿ ನಿಂತಿದ್ದರೆ ಪಶ್ಚಿಮ ಹಾಗೂ ದಕ್ಷಿಣದತ್ತ ಮನೆಗಳಿದ್ದು ಅಲ್ಲಿನ ಗಿರಿಜನರಿಗೆ ಮುಂದೆ ನಡೆದದ್ದೆಲ್ಲ ಶಬ್ದದ ಮೂಲಕವೇ ಗೊತ್ತಾಗಿದೆ.

ಇತ್ತ ಮನೆಯ ಸುತ್ತ-ಹಿತ್ತಲು ಭಾಗ ಒಂದನ್ನು ಬಿಟ್ಟು-ಕವರ್ ಆಗಿದ್ದ ಪೊಲೀಸರಿಗೆ ಹಿತ್ತಲ ಬಾಗಿಲಿನಿಂದ ಗೌತಮ ಹೊರಬಿದ್ದು ಕುಂಟುತ್ತಾ ಕಾಡಿನತ್ತ ಓಡಲು ತೊಡಗಿದ್ದು ಕಾಣಿಸಿದೆ. ಮನೆಯೊಳಗೆ ಸೌದೆ ರಾಶಿ ಹತ್ತಿರ ಪೊಲೀಸರು ಹಾರಿಸಿದ್ದ ಮೊದಲ ಗುಂಡು ಬಹುಶಃ ಗೌತಮನ ಕಾಲಿಗೆ ಬಡಿದಿರಬೇಕು. ಏಕೆಂದರೆ ಹಿತ್ತಲ ಬಾಗಿಲ ಹತ್ತಿರ ಮೂರು ಕಡೆ ರಕ್ತ ಚೆಲ್ಲಿದ್ದ ಗುರುತುಗಳಿದ್ದವು. ಹಾಗೆ ಹೊರಬಿದ್ದ ಗೌತಮನನ್ನು ಮನೆಯ ನೆತ್ತಿ ಮೇಲೇ ಗುಡ್ಡದ ನಡುವೆ ನಿಂತಿದ್ದ ಪೊಲೀಸರು ಗುಂಡು ಹಾರಿಸಿ ಕೊಂದಿದ್ದಾರೆ. ಆಗ ಸಮಯ ಇನ್ನೂ 6.40 ದಾಟಿರಲಿಲ್ಲ.



ಪರಮೇಶನ ಮುಖವನ್ನು ಬಂದೂಕಿನಿಂದ ಚಚ್ಚಿದಾಗ ಉದುರಿರುವ ಹಲ್ಲುಗಳು

ಕುದುರೆಮುಖ ರಾಷ್ಟ್ರೀಯ ಉದ್ಯಾನ ಬೇಡ, ಆದಿವಾಸಿ ಗಿರಿಜನರನ್ನು ಬೀದಿಪಾಲು ಮಾಡಬೇಡಿರೆಂದು ಸಶಸ್ತ್ರ ಗೆರಿಲ್ಲಾ ಹೋರಾಟಕ್ಕಿಳಿದು ಕೊಲ್ಲಲ್ಪಟ್ಟ ಎಂಟನೇ ವ್ಯಕ್ತಿ ಗೌತಮನಾದ.

ಅಲ್ಲಿಂದಾಚೆಗೆ ನಡೆದದ್ದು ಮಾತ್ರ ಭಯಾನಕ. ಯಾವಾಗ ಗೌತಮನ ಹತ್ಯೆಯಾಯಿತೋ ಮನೆಯೊಳಗೇ ಇದ್ದ ರಾಮೇಗೌಡ, ಕಾವೇರಮ್ಮ, ಪರಮೇಶ್, ಸುಂದರೇಶ್ ಹಾಗೂ ಪ್ರಶಾಂತ್ ಈ ಎಲ್ಲರೂ ಬಂದೂಕು ಇರದ ನಿಶಸ್ತ್ರರೂ ಆಗಿದ್ದರಿಂದ, ತಾವು ನಕ್ಸಲರಲ್ಲವೆಂದೂ, ಮನೆಯತ್ತ ಗುಂಡು ಹಾರಿಸದಂತೆಯೂ

(13 ನೇ ಪುಟಕ್ಕೆ)

ಪರಮೇಶ್ ಎಂತಾ ಹುಡುಗ



ಎಸ್‌ಎಸ್‌ಎಲ್‌ಸಿವರೆಗಷ್ಟೇ ಓದಿದ್ದ ಶೇಷಗೌಡರ ನಾಲ್ವರು ಗಂಡು ಮಕ್ಕಳಲ್ಲಿ ಒಬ್ಬನಾಗಿದ್ದ ಪರಮೇಶ್ ಇಡೀ ಮೆಣಸಿನ ಹಾಡ್ಯ, ಅತ್ಯಡ್ಕ, ಮೇಗೂರು, ಒಡೆಯರ ಮಠ ಸುತ್ತಮುತ್ತಾ ಜನರ ಅಚ್ಚುಮೆಚ್ಚಿನ ಹುಡುಗ. ಅಪಾರ ಓದಿನ ಹವ್ಯಾಸವಿದ್ದ ಅವನ ರಾಜಕೀಯ ತಿಳವಳಿಯೂ ಬೆಳೆದು ಕೊನೆಗೆ ಕುದುರೆಮುಖ ನ್ಯಾಷನಲ್ ಪಾರ್ಕ್ ಹೋರಾಟಕ್ಕೆ ಕಾಲಿಟ್ಟಿದ್ದ. ಅದಕ್ಕೂ ಮೊದಲು ಚೀರಮ್ಮ ಎಂಬಾಕೆಯ ಕಾಲಿಗೆ ಗುಂಡೇಟು ಬಿದ್ದಿದ್ದ ಪ್ರಕರಣದಲ್ಲಿ ಪರಮೇಶನ ಮೇಲೂ ಕೇಸ್ ಹಾಕಲಾಗಿತ್ತಾದರೂ ಆತನ ನಿರ್ದೋಷಿ ಎಂದು ಬಿಡುಗಡೆಯಾಗಿದ್ದ.


ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟದಲ್ಲಿ ಓಟಾಟದ ಖರ್ಚಿಗೂ ಹಣವಿರದಿದ್ದಾಗಲೂ ಹಸಿದುಕೊಂಡೇ ಊರೂರು ಸುತ್ತಿ ಗಿರಿಜನರನ್ನು ಸಂಘಟಿಸುತ್ತಾ ಇದ್ದಾತ. ಹಳ್ಳಿಯ ಜನರಿಗೆ ಬಿಪಿಎಲ್ ಕಾರ್ಡ್, ಜಾತಿ ಪತ್ರ ಮಾಡಿಸಲು, ಸರ್ಕಾರಿ ಸೌಲಭ್ಯ ಪಡೆಯಲು ಓಡಾಡುವುದು, ಅನಾರೋಗ್ಯವಾದವರಿಗೆ ನೆರವಾಗುವ ಗುಣದ ಪರಮೇಶ್ ತೀರಾ ಇತ್ತೀಚೆಗೆ ಜೂನ್ 27 ರಂದು ಚಿಕ್ಕಮಗಳೂರಿಗೂ ಬಂದು ಹೋಗಿದ್ದ. ಅವತ್ತು ಜಿಲ್ಲೆಯ ನಾನಾ ಭಾಗಗಳಿಂದ ಬಂದಿದ್ದ ಒಂದು ಸಾವಿರದಷ್ಟು ಆದಿವಾಸಿ ಗಿರಿಜನ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಬಂದರೆ ಜಿಲ್ಲಾಧಿಕಾರಿ ಕರೆದು ಮಾತಾಡಿಸಿರಲೂ ಇಲ್ಲ. ಇಂತಾ ಪರಮೇಶನ ಮೇಲೆ ಕೇಸುಗಳಿದ್ದವು ಹಾಗಾಗೇ ಕೊಲ್ಲಬೇಕಾಯಿತು ಎಂದು ಪ್ರಕಾಶ್ ಸಮರ್ಥಿಸಿಕೊಳ್ಳುತ್ತಾರೆ. ಅವನ ಬಂಧು ಸುಂದರೇಶ್ ಕೂಡ ಅಡಿಕೆ ಕೋಟಿಕೆ [illegible] ಹೊಡೆಯುವವನಾಗಿ ಇಡೀ ಶೃಂಗೇರಿ ಸುತ್ತಮುತ್ತಾ ಎಲ್ಲರಿಗೂ ಬೇಕಾದವನಾಗಿದ್ದ.

ಕಾನೂನುಬದ್ಧವಾಗೇ ಚಟುವಟಿಕೆ ನಡೆಸುತ್ತಿದ್ದಾಗಲೂ ಕೇವಲ ಸರ್ಕಾರಕ್ಕೆ ಅಡೆತಡೆಯಾಗಿದ್ದ [illegible] ಕಾರಣದಿಂದ ಕಾನೂನುಪಾಲನೆ ಹೆಸರಿನಲ್ಲೇ ಪರಮೇಶನನ್ನು ಕೊಲೆಗೈಯಲಾಗಿದೆ.

ಕರ್ನಾಟಕ ಪೊಲೀಸರು ಈ ಕೃತ್ಯ ನಡೆಸುವ ಮೂಲಕ ಜನತೆಯ ವಿಶ್ವಾಸ-ನಂಬಿಕೆ ಕಳೆದುಕೊಂಡಿದ್ದಾರೆ

[illegible]

* ಮೊದಲನೆಯದಾಗಿ ಗಿರಿಜನರನ್ನೆಲ್ಲ ನಕ್ಸಲೈಟರೆಂದು ಹೇಳುವುದೇ ಪ್ರಜಾತಂತ್ರ ವಿರೋಧಿಯಾದದು. ನಕಲಿ ಎನ್‌ಕೌಂಟರ್ ಎಂದು ಹೇಳುವುದಕ್ಕೆ ಸಾಕ್ಷಿಯೇ ಬೇಕಿಲ್ಲ. ಅಲ್ಲಿ ಸತ್ತವರಲ್ಲಿ ನಾಲ್ಕು ಜನರ ಬಳಿ ಆಯುಧವೇ ಇರಲಿಲ್ಲ. ಆಯುಧವೇ ಇರದಿದ್ದ ಮೇಲೆ ಎನ್‌ಕೌಂಟರ್ ಅಂತ ಹೇಗಾಗುತ್ತೆ? ಬಹಳ ಎಂದರೆ ಅವರೆಲ್ಲಾ ಬೊಬ್ಬೆ ಹೊಡೆದಿರಬಹುದು ಅಷ್ಟೇ. ಅದನ್ನು ಎನ್‌ಕೌಂಟರ್ ಅನ್ನಲಿಕ್ಕಾಗುತ್ತಾ? ಗೌತಮ್ ಅನ್ನುವ ವ್ಯಕ್ತಿ ಸ್ಥಳೀಯರಿಗೂ ಅಪರಿಚಿತ. ಆತ ಇವರ ಮನೆಯ ಒಳಗೂ ಇರಲಿಲ್ಲ. ಆ ಜಾಗವನ್ನು ನೋಡಿದ ಯಾರಿಗಾದರೂ ಇದು ಎನ್‌ಕೌಂಟರ್ ಅಲ್ಲ ಅಂತ ಚೆನ್ನಾಗಿ ಗೊತ್ತಾಗುತ್ತೆ. ಹಾಗಾಗಿ,



ಕಲ್ಕುಳಿ ವಿಠಲ ಹೆಗ್ಡೆ

ಪರಮೇಶ್ವರ್ ನಕ್ಸಲೈಟ್ ಅನ್ನಲು ಚಿಕ್ಕಮಗಳೂರು ಎಸ್‌ಪಿ ಎರಡು ಕಾರಣಗಳನ್ನು ಹೇಳಿದ್ದಾರೆ. 'ಅವನ ಮೇಲೆ ಕೇಸುಗಳಿದ್ದವು. ನಮಗೆ ಬೇಕಾಗಿದ್ದ' ಎಂದಿದ್ದಾರೆ. ಮೊದಲನೆಯ ಕೇಸು ಚೀರಮ್ಮನ ವಿಚಾರದ್ದು; ಅದು ಖುಲಾಸೆಯಾಗಿ ಒಂದು ವರ್ಷವಾಗಿದೆ. ಇನ್ನು ಆತ ಪೊಲೀಸರಿಗೆ ಬೇಕಾಗಿದ್ದ ವ್ಯಕ್ತಿಯಾಗಿದ್ದರೆ, ಕಳೆದ 27 ರಂದು ಚಿಕ್ಕಮಗಳೂರಿನಲ್ಲಿ ನಡೆದ ಒಕ್ಕೂಟದ ಕಾರ್ಯಕ್ರಮಕ್ಕೆಂದು ಪೊಲೀಸ್ ಅನುಮತಿ, ಮೈಕ್ ಪರ್ಮಿಷನ್ ಎಲ್ಲದಕ್ಕೂ ಆತನೇ ಓಡಾಡಿದ್ದನಲ್ಲ; ಕಾರ್ಯಕ್ರಮದಲ್ಲೂ ಭಾಗವಹಿಸಿದ್ದನಲ್ಲ, ಆಗಲೇ ಹಿಡಿದುಕೊಳ್ಳಬಹುದಿತ್ತಲ್ಲಾ?

ಪರಮೇಶ್ವರ, ಸುಂದರೇಶ್‌ರನ್ನು ಸಾಯಿಸಿರುವುದು ಏಕೆಂದು ನಮಗನ್ನಿಸುತ್ತೆ ಅಂದರೆ, ಅಂದು ಬೆಳಿಗ್ಗೆ ಒಬ್ಬ ನಕ್ಸಲೈಟನ ಹತ್ಯೆಯಾಗಿದೆ. ಆತನ ಹೆಸರು ಗೌತಮ್ ಅಂತ ಹೇಳಿದ್ದಾರೆ. ನಾಲ್ವರು ಬಂಧನ ಅಂತಲೂ ಹೇಳಿದ್ದಾರೆ. ಆದರೆ ಮಧ್ಯಾಹ್ನದ ಹೊತ್ತಿಗೆ 5 ಜನರ ಹತ್ಯೆ ಅಂತ ಹೇಳಿದ್ದಾರೆ. ಇದರರ್ಥವೇನು? ಪರಮೇಶ್ವರನಿಗೆ ಚಿತ್ರಹಿಂಸೆ ಕೊಟ್ಟು, ಮಿಕ್ಕವರನ್ನು ಹಿಡಿದು ಕೊಂದಿದ್ದಾರೆ.

ತಾರೊಳ್ಳಿ ಪರಮೇಶ್ವರ್‌ನ ಬಂಧನ, ಪರಮೇಶ್ವರನ ಹತ್ಯೆ, ನಮ್ಮೆಲ್ಲರ ಮೇಲೆ ಹಾಕಿರುವ ಕೇಸು ಇವನ್ನೆಲ್ಲ ನೋಡಿದರೆ. ಇವರಿಗೆ ಇಲ್ಲಿನ ಗಿರಿಜನರು ಮತ್ತು ಗಿರಿಜನರ ಪರವಾದ ಜನರನ್ನು ದಮನಿಸಬೇಕಾಗಿದೆ. ಅದಕ್ಕೆ ನಕ್ಸಲೀಯರ ಪಟ್ಟ ಕಟ್ಟಬೇಕಾಗಿದೆ ಅಷ್ಟೆ. ಇವರು ಕೊಂದ ದನವೂ ನಕ್ಸಲೈಟ್ ಆಗಿತ್ತಾ?

ಎನ್‌ಕೌಂಟರ್ ಆಕಸ್ಮಾತಾಗಿ ಆಗಿರುವುದಾ? ಇಲ್ಲಾ ವ್ಯವಸ್ಥಿತವಾ? ನಿಮಗೇನನ್ನಿಸುತ್ತೆ?

* ಪರಮೇಶ್ವರ, ಸುಂದರೇಶ್ ಇವರನ್ನೆಲ್ಲಾ ಕೊಂದಿರುವುದು ವ್ಯವಸ್ಥಿತ, ಯೋಜಿತ. ಸಾಕ್ಷಿ ನಾಶ ಮಾಡಲು ಮಿಕ್ಕವರನ್ನು ಕೊಂದಿದ್ದಾರೆ. ಇದು ಎನ್‌ಕೌಂಟರ್ ಅಲ್ಲ, ನಿರಾಯುಧರ ಮೇಲೆ ದಾಳಿ.

ಇಂತಹ ಮಳೆಗಾಲದಲ್ಲಿ ಕಾಡಿನ ಒಳಗೆ ಹೋಗಿ ಮೇಲಾಗಲೀ, ಜಿಲ್ಲಾಡಳಿತದ ಮೇಲಾಗಲೀ ಇಲ್ಲಿನ ಗಿರಿಜನರಿಗೆ ನಂಬಿಕೆಯಿಲ್ಲ, ನಿಮ್ಮಂತಹ ಜವಾಬ್ದಾರಿಯುತ ಜನಪ್ರತಿನಿಧಿಯೊಬ್ಬರು ಬಂದು ಇಲ್ಲಿನ ಜನರ ಹತ್ತಿರ ಮಾತಾಡಿ ಎಂದೆ. ಆಗ ಅವರು ನಾನು ಪೊಲೀಸ್ version ಮಾತ್ರ ಕೇಳಿದ್ದೆ, ಈಗ ನೀವು ಹೇಳಿರುವುದನ್ನು ಕೇಳಿದ್ದೇನೆ. ಸರಿ ಎಲ್ಲಾ ವಿಚಾರಿಸಿ, ಬೆಳಿಗ್ಗೆ ಮಾತಾಡುತ್ತೇನೆ ಎಂದರು. ಆದರೆ ಮಧ್ಯರಾತ್ರಿ ಒಂದು ಗಂಟೆಗೆ ಲಾಠಿಚಾರ್ಜ್

ಸಂದರ್ಶನ

ಕುಮಾರ್ ಬುರಡಿಕಟ್ಟಿ

ಮಾಡಿ ಶವಗಳನ್ನೆತ್ತಿಕೊಂಡು ಹೋದರು. ಅಂದರೆ ನೀವೇ ಯೋಚಿಸಿ ಇದರ ಹಿಂದಿನ ಪ್ರೇರಣೆ ಏನು ಅಂತ.

ಮೆಣಸಿನಹಾಡ್ಯದಲ್ಲಿ ಜೀಪ್ ಸುಟ್ಟ ಕೇಸನ್ನು ನಿಮ್ಮ ಮೇಲೆ ಹಾಕಿದ್ದಾರಲ್ಲ? ಅದರಲ್ಲಿ ನಿಮ್ಮ ಪಾತ್ರವೇನು?

ಅಲ್ಲಿಗೆ ನಾನು ಮತ್ತು ಮರಿಯಪ್ಪ ಹೋದಾಗ ಜೀಪಿಗೆ ಬೆಂಕಿ ಕೊಟ್ಟು ಹೆಚ್ಚೂ ಕಡಿಮೆ ಅದು ಉರಿದು ಹೋಗಿತ್ತು. ಇದು ಎಸಿ, ಎಸ್ಪಿ ಎಲ್ರಿಗೂ ಗೊತ್ತು. ಅನ್ನಪೂರ್ಣ ಎನ್ನುವ ಹುಡುಗಿ ಆ ದಿನ ತಿಪಟೂರಿನಲ್ಲಿ ಗ್ರಾಮೀಣ ಅಭಿವೃದ್ಧಿ ಟ್ರೇನಿಂಗ್‌ನಲ್ಲಿದ್ದಳು. ಆಕೆಯೂ ಸೇರಿದಂತೆ ನಮ್ಮೆಲ್ಲರ ಮೇಲೂ ಈ ಕೇಸನ್ನು ಹಾಕಿದ್ದಾರೆ. ಅಂದರೆ ಏನಾದರೂ ನಡೆದರೆ ಯಾರ ಮೇಲೆ ಕೇಸು ಹಾಕಬೇಕೆಂಬ ಪಟ್ಟಿ ಅವರ ಹತ್ತಿರ ಮುಂಚಿತವಾಗಿಯೇ ಇತ್ತು.

ಹೋದರೆ, ಮೊನ್ನೆ ಜೂನ್ 2 ರಂದು ಇಡೀದಿನ ಅ[...] ಕಚೇರಿಯ ಮುಂದೆ ಕಾದು ಕುಳಿತರೂ ಡಿಸಿ ಬರ[...] ಇಲ್ಲವಲ್ಲ, ಇನ್ನು ಈ ಪ್ಯಾಕೇಜ್‌ಗಳಿವೆಯಲ್ಲಾ ನಕ್ಸ[...] ಪ್ಯಾಕೇಜ್ ಇತ್ಯಾದಿ. ಇದನ್ನು ಈ ಸರ್ಕಾರ ತಂದ[...] ನಕ್ಸಲೀಯರಿಗಾಗಿಯೇ ತಾನೇ? ಇದರಲ್ಲಿ ನಕ್ಸಲೀಯ[...] ಸರಿ ಎನ್ನುವ ಭಾವನೆ ಯಾರಾದರೂ ಮೂಡಿಸುತ್ತಿ[...] ಅದು ಸರ್ಕಾರವೇ. ಅದರ ಬದಲಿಗೆ ಪ್ರಜಾಶಾಂತಿ[...] ಕಾನೂನುಬದ್ಧ ಹೋರಾಟ ನಡೆಸುತ್ತಿದ್ದ ನಮ್ಮ ಕೂ[...] ಸ್ಪಂದಿಸಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ.

ಸರ್ಕಾರ ಹಲವು ಪ್ಯಾಕೇಜ್‌ಗಳನ್ನು ಪ್ರಕಟಿಸಿತಲ್[...] ಅವುಗಳ ಕತೆ ಏನಾಗಿದೆ?

ಹಾಜಿಮಾ-ಪಾರ್ವತಿಯರನ್ನು ಕೊಂದಾಗ 6[...] ಕೋಟಿ ಪ್ಯಾಕೇಜ್ ಅಂದರು, ಸಾಕೇತ್‌ರಾಜನ್ ಸತ್ತ[...] ಮತ್ತೆ ಪ್ಯಾಕೇಜ್ ವಿಷಯ ಬಂತು. ಯಾರನ್ನಾದರ[...] ಕೊಂದಾಗ ಮಾತ್ರ ಪ್ಯಾಕೇಜ್ ಪ್ರಸ್ತಾಪ ಬರುತ್ತದೆ. ಈ[...] ಅವರೇ ಹೇಳಿರುವಂತೆ, 3 ಕೋಟಿ ಪ್ಯಾಕೇಜ್ ಅ[...] ಬಳಸಿದ್ದಾರೆ. ಜನರ ಅನುಕೂಲಕ್ಕೇಂತ ಮಾಡ್ತಿದ್ದಾರೋ ಇಲ್ಲವೋ ಒಟ್ಟು ಕೆಲವು ರಸ್ತೆಗಳನ್ನು ಮಾಡಿದ್ದಾರೆ. 10[...] ಜನಕ್ಕೆ ಸೋಲಾರ್ ಲೈಟ್, ಕೊಟ್ಟಿದ್ದಾರೆ ಅದು ಬಿಟ್ಟ[...] ಹೆಚ್ಚೇನೂ ಕಂಡಿಲ್ಲ.

ಒಕ್ಕೂಟದ ಮುಂದಿನ ಗುರಿಗಳೇನು? ವಿ[...] ಮಾಡಬೇಕೆಂದು ಕೂಂಡಿದ್ದೀರಿ?

ಯೋಚಿಸಬೇಕು; ತಾಲ್ಲೂಕು, ಜಿಲ್ಲಾ ಕೇಂದ್ರಗಳಿ[...] ಹೋಗಿ ನಮ್ಮ ಅಹವಾಲು ಹೇಳುವ ಹಾಗಿ[...] ಚಿಕ್ಕಮಗಳೂರಿಗೆ ಹೋಗಿ ಕಾರ್ಯಕ್ರಮ ಮಾಡಲ[...] ಹಲವು ನಿರ್ಬಂಧಗಳಿವೆ. ಮೈಕ್ ಲೈಸೆನ್ಸ್ ಕೊಡಲ[...] ಮುಚ್ಚಳಿಕೆ ಬರೆದುಕೊಟ್ರೂ ಇಲ್ಲ. ಜನರು ಬರು[...] ವಾಹನಗಳನ್ನು ತಡೀತಾರೆ. ಕೇಸು ಹಾಕ್ತಾರೆ. ಭಜರಂಗದ[...] ವರಿಗಾದರೆ ರಾತ್ರಿ 12 ಗಂಟೆ ತನಕ ಕಾರ್ಯಕ್ರಮಗಳ[...] ಮಾಡಬಹುದು. ಅದರ ಬಗ್ಗೆ ತಕರಾರಿಲ್ಲ, ನಮ್ಮನ್ನಾದರೆ ಬಂಧಿಸ್ತಾರೆ, ಕೊಂದೂ ಹಾಕ್ತಾರೆ[...] ಪ್ರತೀಕಾರಕ್ಕೆ ನಮ್ಮಲ್ಲಿ ಯಾವುದೇ ಆಯುಧಗಳಿಲ್ಲ. ಹಾಗಾಗಿ ಒಂದು ಆಲೋಚನೆಯ[...] ಇವೆ. ಇಡೀ ಗಿರಿಜನ ಆಮರಣಾಂತ ಉಪವಾ[...] ಕೂರೋದು. ಏನು ಮಾಡ್ತಾರೋ ಮಾಡಲಿ ಅಂ[...] ನೋಡೋಣ. ಕರ್ನಾಟಕದ ಪ್ರಗತಿಪರರೆಲ್ಲರೂ ಗಿರಿಜನರ[...] ಬೆಂಬಲಿಸಬೇಕು ಅನ್ನಿಸುತ್ತೆ.

ನಿಮ್ಮ ಮಗನನ್ನು ಕಾಲೇಜಿಗೆ ಕಳ್ಸಿ ಬೇರೆಯವ[...] ಮಕ್ಕಳನ್ನು ನಕ್ಸಲೈಟ್ ಮಾಡ್ತಿದ್ದೀರ ಅಂತ ನಿಮ್ಮ ಮೇ[...] ಆಪಾದನೆ ಇದೆಯಲ್ಲ?

ಬಿಜೆಪಿ ಶಾಸಕರಾದ ಅರಗ ಜ್ಞಾನೇಂದ್ರ, ಸುನಿಲ್ ಕುಮಾರ್ ಈ ರೀತಿಯ ಆಪಾದನೆ ಮಾಡ್ತಿದ್ದಾರೆ ಅಂ[...] ಹೇಳಿದ್ದಾರೆ. ನಾನು ನಕ್ಸಲೈಟ್ ಆಗಿದ್ದಿದ್ರೆ ಖಂಡಿತಾ ಮ[...] ನನ್ನೂ ನಕ್ಸಲೈಟ್ ಮಾಡ್ತಿದ್ದೆ. ಅಲ್ಲವಾದ್ದರಿಂದ ಕಳಿಸ್ಲಿ[...] ಮಿಕ್ಕವರನ್ನು ನಾನು ಕಳಿಸಿದ್ದೇನೆ ಅನ್ನೋ ಪ್ರಶ್ನೇನೇ ಇ[...] ಇಷ್ಟು ಹೇಳಬಹುದಷ್ಟೆ.

ಇದು ಎನ್‌ಕೌಂಟರ್ ಅಲ್ಲ, ಸರ್ಕಾರ ಮಾಡಿದ ಗಿರಿಜನರ ಕಗ್ಗೊಲೆ

ಅದು ಎನ್‌ಕೌಂಟರ್ ಅಲ್ಲ, ಸರ್ಕಾರ ಮಾಡಿದ ಗಿರಿಜನರ ಕಗ್ಗೊಲೆ.

ಕು.ರಾ.ಉ.ವಿ. ಒಕ್ಕೂಟವನ್ನು ಸರ್ಕಾರ ನಕ್ಸಲೀಯ ಬೆಂಬಲಿಗ ಸಂಘಟನೆ ಅಂತ ಹೇಳಿತು. ನೀವು ಅದನ್ನು ನಿರಾಕರಿಸಿದ್ದಿರಿ. ಆದರೆ ಈಗ ನಿಮ್ಮ ಒಕ್ಕೂಟದ ಕಾರ್ಯದರ್ಶಿ ಪರಮೇಶ್ವರ ನಕ್ಸಲೀಯರ ಜೊತೆಗೆ ಸತ್ತಿದ್ದಾನೆ. ನೀವು ಅದನ್ನು ಅದ್ಹೇಗೆ ನಕ್ಸಲೀಯ ಬೆಂಬಲಿಗ ಸಂಘಟನೆಯಲ್ಲ ಅಂತೀರಿ?

ಪರಮೇಶ್ವರ್ ಮನೆಯಲ್ಲಿ ಬೇರೆ ಸಮಸ್ಯೆ ಇದ್ದುದರಿಂದ, ಆತ ಹೆಚ್ಚು ರಾಮೇಗೌಡ, ಕಾವೇರಿ ಅವರ ಮನೆಯಲ್ಲೇ ಉಳೀತಿದ್ದದ್ದು. ಜೊತೆಗೆ ಗಿರಿಜನರು ರಾತ್ರಿ ತಡವಾದರೆ ಎಲ್ಲಿರುತ್ತಾರೋ ಅಲ್ಲೇ ಉಳೀತಾರೆ. ಹಸಿವಾದಾಗ ಎಲ್ಲಿರುತ್ತಾರೋ ಅಲ್ಲೇ ಊಟ ಮಾಡ್ತಾರೆ. ಇದು ಬಹಳ ಸಾಮಾನ್ಯ.

ಪೊಲೀಸರು ಈ ರೀತಿ ಮಾಡಿದ್ದಾರೆ ಅಂದರೆ ಅದಕ್ಕಿರುವ ಪ್ರೇರಣೆಯೇನು?

* ಒಂದು, ನಕ್ಸಲೈಟರ ಬಗ್ಗೆ ಇವರಿಗೆ ಅಷ್ಟೇನೂ ಭಯವಿಲ್ಲ. ರಾತ್ರಿ, ಹಗಲು ಎಲ್ಲಾ ಕಡೆ ಓಡಾಡುತ್ತಿದ್ದಾರೆ. ಮೊನ್ನೆ ಪೊಲೀಸ್ ಅಧಿಕಾರಿಯೊಬ್ಬರು ನನಗೆ ಹೇಳಿದ್ದೇನೆಂದರೆ, 'ಇನ್ನು ಮುಂದೆ ಸತ್ಯ ನ್ಯಾಯ ಇತ್ಯಾದಿ ಕೇಳಬೇಡಿ. ಇನ್ನು ಏನಿದ್ದರೂ ಗಿರಿಜನರು V/s ಪೊಲೀಸರು' ಅಂತ. ಬಿಜೆಪಿ, ಸಂಘ ಪರಿವಾರ ಬಿಟ್ಟರೆ ಯಾರೂ ಇಷ್ಟೊಂದು ಮಾತಾಡುತ್ತಿಲ್ಲ. ಇವರ ಕೋಮುವಾದಿ ಅಜೆಂಡಾಕ್ಕೆ ವಿರೋಧವಾಗಿರುವವರು ನಾವು.

ಎನ್‌ಕೌಂಟರ್ ನಡೆದ ದಿನ ರಾತ್ರಿ ಮೆಣಸಿನಹಾಡ್ಯದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿತ್ತು. ಆಗ ಎಂ.ಪಿ. ಪ್ರಕಾಶ್ ಎಸ್‌ಪಿಯವರ ಫೋನಿನಲ್ಲಿ ನನ್ನ ಜೊತೆ ಮಾತಾಡಿದರು. ನಾನು ಅವರಿಗೆ ಪರಿಸ್ಥಿತಿಯನ್ನು ವಿವರಿಸಿ, ಪೊಲೀಸರ

ಜನಪ್ರತಿನಿಧಿಗಳು, ಸರ್ಕಾರದ ಮತ್ತು ನಿಮ್ಮ ಒಕ್ಕೂಟ ಎಲ್ಲಾ ಇದ್ದರೂ ಜನರೇಕೆ ನಕ್ಸಲೀಯರನ್ನು ಬೆಂಬಲಿಸುತ್ತಿದ್ದಾರೆ? ಇದು ನಿಮ್ಮ ಒಕ್ಕೂಟದ failure ಅಲ್ಲವೇ?

ಇದರಲ್ಲಿ ಒಕ್ಕೂಟದ failure ಇಲ್ಲ. ನಮ್ಮ ಜೊತೆ ಜನರು ಹಿಂದಿನಂತೆಯೇ ಬರುತ್ತಿದ್ದಾರೆ. ಇನ್ನು ಪೊಲೀಸರು ಬಂದರೆ ಜನರು ಹೇಗೆ ಊಟ, ಆಶ್ರಯ ಕೊಡುತ್ತಾರೋ ಹಾಗೆ ನಕ್ಸಲೀಯರಿಗೂ ಕೊಡುತ್ತಾರೆ. ಹಾಗೆಂದ ಮಾತ್ರಕ್ಕೆ ಅವರನ್ನೆಲ್ಲ ನಕ್ಸಲೀಯರ ಬೆಂಬಲಿಗರನ್ನೆಲಾಗುತ್ತದೆಯೇ?

ಈ ಸರ್ಕಾರದ ಧೋರಣೆಯನ್ನು ನೋಡಿ. ಅವರು 'ಶಸ್ತ್ರ ಕೆಳಗಿಟ್ಟು ಬನ್ನಿ, ನಿಮ್ಮೊಂದಿಗೆ ಮಾತುಕತೆಯಾಡುತ್ತೇವೆ' ಎಂದು ನಕ್ಸಲೀಯರಿಗೆ ಹೇಳುತ್ತಾರೆ. ನಾವು (ಒಕ್ಕೂಟ) ಶಸ್ತ್ರ ಹಿಡಿದಿಲ್ಲವಲ್ಲ, ನಮ್ಮ ಜೊತೆ ಯಾಕೆ ಮಾತಾಡೋಲ್ಲ? ನಾವು ಸಾವಿರಾರು ಜನ ಕಷ್ಟಪಟ್ಟು ಚಿಕ್ಕಮಗಳೂರಿಗೆ

ಎನ್‌ಕೌಂಟರ್ ಹೆಸರಿನಲ್ಲಿ ಪೊಲೀಸರಿಂದ ಅಮಾನುಷವಾಗಿ ಕೊಲ್ಲಲ್ಪಟ್ಟ ರಾಮೇಗೌಡ ಒಂದು ವೇಳೆ ನಕ್ಸಲ್ ಬೆಂಬಲಿಗನಾಗಿ ಅವರಿಗೆ ಆಶ್ರಯ ಕೊಟ್ಟಿದ್ದ ಎನ್ನುವುದಾದರೆ ಅದಕ್ಕೆ ಕಾರಣ ಇಲ್ಲದಿಲ್ಲ. ಸರ್ಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಘೋಷಿಸಿ ಆದಿವಾಸಿಗಳನ್ನು ಅಲ್ಲಿಂದ ಒಕ್ಕಲೆಬ್ಬಿಸುವ ನಿರ್ಧಾರ ತೆಗೆದುಕೊಂಡಾಗಿನಿಂದ ಆವನಿಗೆ ನೆಮ್ಮದಿ ಇಲ್ಲ, ಯಾವಾಗ ತನ್ನನ್ನು ಮತ್ತು ತನ್ನ ಸಂಸಾರದವರನ್ನು ಕಾಡಿನಿಂದ ಹೊರದಬ್ಬುತ್ತಾರೋ ಎಂಬ ಆತಂಕ. ಹೀಗಾಗಿ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟಗಳು ಎಲ್ಲೆಲ್ಲಿ ನಡೆದಿವೆಯೋ ಅಲ್ಲೆಲ್ಲಾ ಅನ್ನ, ನೀರು ಬಿಟ್ಟು ಭಾಗವಹಿಸಿದ. ರಾಷ್ಟ್ರೀಯ ಉದ್ಯಾನ ಯೋಜನೆಯನ್ನು ವಿರೋಧಿಸಿದ ನಕ್ಸಲೀಯರನ್ನು ಪ್ರಾಯಶಃ ಈ ಕಾರಣಕ್ಕೇ ಆತ ಬೆಂಬಲಿಸಿರಬೇಕು.

ತಾ. 26.8.2006 ರಂದು ರಾಮೇಗೌಡ ಪತ್ರಕರ್ತರಿಗೆ ಬರೆದ ಪತ್ರವನ್ನು ಯಥಾವತ್ತಾಗಿ ಇಲ್ಲಿ ಪ್ರಕಟಿಸಿದ್ದೇವೆ. ವಾಸ್ತವದಲ್ಲಿ ಇದು ಕೇವಲ ರಾಮೇಗೌಡನೊಬ್ಬನ ಮನದಾಳದ ಆತಂಕ ಮಾತ್ರವಲ್ಲ, ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಎಲ್ಲಾ ಗಿರಿಜನರ ಆತಂಕವನ್ನೂ ಪ್ರತಿನಿಧಿಸುವಂತಿದೆ. ರಾಮೇಗೌಡ ಕೇಳಿದ ಪ್ರಶ್ನೆಗಳಿಗೆ ಆತನನ್ನು ಕೊಂದವರು ಉತ್ತರಿಸುತ್ತಾರೆಯೇ?

ಗೆ,

ಸಂಪಾದಕರು/ ವರದಿಗಾರರು

ಇಂದ,

ರಾಮೇಗೌಡ ಬಿನ್ ಮಂಜೇಗೌಡ

ಮೇಗೂರು, ಕೊಪ್ಪ ತಾಲ್ಲೂಕು

ವಿಚಾರ: ಸರ್ಕಾರ ನನ್ನ ಮನೆಯನ್ನು ವಜಾಗೊಳಿಸಿರುವ ಬಗ್ಗೆ.

ನಾನು ತಲತಲಾಂತರದಿಂದ ಕೊಪ್ಪ ತಾಲ್ಲೂಕಿನ ಮೇಗೂರು ಹೋಬಳಿಯ ವಡೇರಮಠ ಎಂಬಲ್ಲಿ ಮನೆ ಕಟ್ಟಿಕೊಂಡು ತುಂಡು ಭೂಮಿಯಲ್ಲಿ ಕೃಷಿ ಮಾಡಿಕೊಂಡು ಬದುಕುತ್ತಿದ್ದೇನೆ. ಪತ್ನಿ ಮತ್ತು ಇಬ್ಬರು ಗಂಡು ಮಕ್ಕಳನ್ನು ಹೊಂದಿರುವ ನಾನು ಆದಿವಾಸಿ ಜನಾಂಗದವನಾಗಿದ್ದು, ಅವಿದ್ಯಾವಂತನಾಗಿರುತ್ತೇನೆ.


ನಾನು ವಾಸಮಾಡುತ್ತಿರುವ ಈ ಮನೆ ಮತ್ತು ತುಂಡು ಕೃಷಿ ಭೂಮಿ ಮಂಜೂರು ಮಾಡುವಂತೆ ಹತ್ತಾರು ವರ್ಷಗಳಿಂದ ಸರ್ಕಾರಕ್ಕೆ ಹಲವು ಬಾರಿ ಅರ್ಜಿ ಸಲ್ಲಿಸುತ್ತಲೇ ಬಂದಿದ್ದೇನೆ.

ಆದರೆ ದಿನಾಂಕ 18.8.2006ರಂದು ನನ್ನ ಮನೆಯನ್ನು ವಜಾ ಗೊಳಿಸುತ್ತೇವೆ ಎಂದು ಕೊಪ್ಪ ತಾಲ್ಲೂಕು ತಹಶೀಲ್ದಾರರು ನೋಟೀಸ್ ಕೊಟ್ಟಿರುತ್ತಾರೆ. ಈ ನೋಟೀಸ್ ನೋಡಿ ದಿಕ್ಕು ತೋಚದಂತಾಗಿದೆ. ಏನು ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ. ಮನೆ ಇಲ್ಲವೆಂದಾಗಿ, ಹೆಂಡತಿ-ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಗೆ ಹೋಗಲಿ? ಮನೆಯನ್ನೇ ವಜಾಗೊಳಿಸಿದ ಸರ್ಕಾರ ಇನ್ನೂ ಬೆವರು ರಕ್ತ ಹರಿಸಿ ಕೃಷಿ ಮಾಡಿದ ಭೂಮಿಯನ್ನು ನಮಗೆ ಬಿಡುತ್ತದೆಯೇ? ನಾನು ಎಲ್ಲಿ ಹೋಗಲಿ, ಹೇಗೆ ಬದುಕಲಿ?

ನಾನು ಗ್ರಾಮ ಪಂಚಾಯ್ತಿ ಸದಸ್ಯರಿಗೆ ಓಟು ಕೊಟ್ಟಿದ್ದೇನೆ, ಜೀವರಾಜ್‌ಗೆ ಓಟು ಕೊಟ್ಟಿದ್ದೇನೆ, ಡಿ.ಬಿ. ಚಂದ್ರೇಗೌಡರಿಗೆ ಓಟು ಕೊಟ್ಟಿದ್ದೇನೆ, ಇಂದಿರಾ ಗಾಂಧಿಯನ್ನು ಗೆಲ್ಲಿಸಿದ್ದೇನೆ. ಈಗ ನಾನು ಬದುಕಿನಲ್ಲಿ ಸೋತಿದ್ದೇನೆ. ಅವರು ವಜಾಗೊಳಿಸಲು ಕೊಟ್ಟಿರುವ ಕಾರಣ 'ಕುದುರೆಮುಖ ರಾಷ್ಟ್ರೀಯ ಉದ್ಯಾನ' ಎಂಬುದು. ಇದೊಂದು ಪೀಡೆ ನನ್ನ ಬದುಕಿನಲ್ಲಿ ಕಳೆದ ಎಂಟು ಹತ್ತು ವರ್ಷಗಳಿಂದ ಪ್ರವೇಶ ಮಾಡಿದೆ. ಇದನ್ನು ತೊಲಗಿಸಲು ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ, ಗಿರಿಜನ ಹಿತರಕ್ಷಣಾ ಸಮಿತಿ, ದುರ್ಗಾ ಪರಮೇಶ್ವರಿ ಯುವಕ ಸಂಘ, ಮೆಣಸಿನಹಾಡ್ಯ ಇವರುಗಳು ಮಾಡಿದ ಎಲ್ಲಾ ಸ್ಟ್ರೈಕುಗಳಲ್ಲೂ ಅನ್ನ, ನೀರು ಬಿಟ್ಟು ಓಡಾಡಿದ್ದೇನೆ. ಮನೆಮಠ, ಬದುಕು ಉಳಿಯುತ್ತದೆಂಬ ಭರವಸೆಯಿಂದ. ಆದರೆ ಈಗ ಆ ಹೋರಾಟಗಳಿಂದ ಕೂಡಾ ನನ್ನ ಮನೆ ಉಳಿಸುವ ಭರವಸೆ ಕಳೆದುಕೊಳ್ಳುವಂತಾಗಿದೆ. ನಿರಾಶಾವಾದಿಯಾಗಿದ್ದೇನೆ. ಈಗೇನು ಮಾಡಲಿ? ದಿಕ್ಕು ತೋಚುತ್ತಿಲ್ಲ, ನೀವಾದರೂ ಹೇಳಿ. ಹೇಗೆ ಬದುಕಲಿ? ನಿಮ್ಮಿಂದ ಉತ್ತರವನ್ನು ಕಾಯುತ್ತಿರುತ್ತೇನೆ. ಇಲ್ಲದಿದ್ದಲ್ಲಿ ಹೋರಾಟವನ್ನು ಮುಂದುವರೆಸುತ್ತೇನೆ.

ತಾ. 26.8.2006

ರಾಮೇಗೌಡ



ಗಿರಿಜನರ ಕೊಲೆ......

(11ನೇ ಪುಟದಿಂದ)

ಕೂಗಿ ಕೂಗಿ ಹೇಳಿದ್ದಾರೆ. ಸ್ವಲ್ಪ ಧೈರ್ಯ ವಹಿಸಿ ಪರಮೇಶ್ ಮನೆಯಿಂದ ಹೊರಬಂದಿರಲಿಕ್ಕೂ ಸಾಕು, ಮನೆ ಸುತ್ತುವರಿದಿದ್ದ ಪೊಲೀಸರು ತನಗೆ ಪರಿಚಿತರೇ



ಪೊಲೀಸ್ ಫೈರಿಂಗ್‌ನಲ್ಲಿ ತೂತು ಬಿದ್ದ ಗೋಡೆಗಳು

ತಾನೇ ಎಂದು.

ನಂತರ ಗುಂಡಿನ ಸದ್ದು ಯಾರಿಗೂ ಕೇಳಿಬಂದಿಲ್ಲ, ಗುಡ್ಡದ ಮೇಲಿನಿಂದ ಹುಡುಕಿ ನೋಡಿದ ಗಿರಿಜನರಿಗೆ ಮನೆಯ ಹಿತ್ತಲಲ್ಲಿ ಒಬ್ಬಾತನ ಶವ (ಗೌತಮನದ್ದು) ಬಿದ್ದಿರುವುದು, ಅದರ ಪಕ್ಕದಲ್ಲೇ ಕೆಲ ಪೊಲೀಸರು ಸೌದೆ ಒಡ್ಡಿ ಬೆಂಕಿ ಹಚ್ಚಿ ಚಳಿ ಕಾಯಿಸಿಕೊಂಡು ಕುಳಿತದ್ದೂ ಕಾಣಿಸಿದೆ. ಮನೆಯೊಳಗೆ ಉಳಿದವರನ್ನು ಬಂಧಿಗಳಾಗಿ ಇರಿಸಿಕೊಳ್ಳಲಾಗಿತ್ತು ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಆಮೇಲೆ ಎಲ್ಲೆಲ್ಲಿಂದಲೋ ಹೊರಟು ಬಂದ ಪೊಲೀಸ್ ವೆಹಿಕಲ್‌ಗಳು ಏಳರಿಂದ ಏಳುವರೆಯಷ್ಟರಲ್ಲಿ ರಾಮೇಗೌಡರ ಮನೆಗೆ ಬಂದು ತಲುಪಿವೆ. ಒಬ್ಬನ ಹತ್ಯೆ ಹಾಗೂ ಉಳಿದವರ ಬಂಧನದ ಸುದ್ದಿ ಚಿಕ್ಕಮಗಳೂರು ಹಾಗೂ ಬೆಂಗಳೂರಿನ ಉನ್ನತ ಪೊಲೀಸ್ ಅಧಿಕಾರಿಗಳಿಗೂ ತಲುಪಿದೆ. ಈ ಹಂತದಲ್ಲಿ ಮೀಡಿಯಾಗಳಿಗೆ 'ಒಂದು ಹತ್ಯೆ ನಾಲ್ವರ ಬಂಧನ'ವೆಂಬ ಸುದ್ದಿ ಪೊಲೀಸ್ ಮೂಲಗಳಿಂದಲೇ ಗೊತ್ತಾಗಿತ್ತು. ಈ ನಾಲ್ವರು ಗಿರಿಜನರು ಎನ್‌ಕೌಂಟರ್‌ನಲ್ಲಿ ಸಾಯಲಿಲ್ಲ ಎಂಬುದಕ್ಕೆ ಪೊಲೀಸರೇ ಉಳಿಸಿರುವ ಸಾಕ್ಷಿ ಏನೆಂದರೆ ಹತ್ಯೆಯಾದವನು ಗೌತಮ ಎಂಬುದು ಸ್ವತಃ ಪೊಲೀಸರಿಗೂ ಗೊತ್ತಿರಲಿಲ್ಲ, ಅವರೇ ಪ್ರಕಟಿಸಿರುವ 19 ನಕ್ಸಲರ ಪಟ್ಟಿಯಲ್ಲೂ ಅವನ ಹೆಸರಿರಲಿಲ್ಲ.

ಅಂದಮೇಲೆ ಬಂಧಿತ ರಾಮೇಗೌಡನೋ, ಕಾವೇರಮ್ಮನೋ ಆ ವ್ಯಕ್ತಿ ತಮಗೆ ಹೇಳಿರಬಹುದಾದ 'ಗೌತಮ'ನೆಂಬ ಹೆಸರನ್ನೇ ಪೊಲೀಸರಿಗೂ ಹೇಳಿರುತ್ತಾರೆ. ಅದೇ ಹೆಸರೇ ಮೇಲಾಧಿಕಾರಿಗಳಿಗೆ, ಟಿವಿ, ಪತ್ರಿಕೆಗಳವರಿಗೂ ಬಿತ್ತರಿಸಲ್ಪಟ್ಟಿದೆ. ಅದರರ್ಥ ಗೌತಮನ ಹತ್ಯೆ ನಂತರವೂ ಈ ನಾಲ್ವರು ಗಿರಿಜನರು ಜೀವಂತವಾಗಿದ್ದರು ಎಂದಾಯಿತು. ಆದರೆ ಬೆಳಗ್ಗೆ 8 ಗಂಟೆಯ ವೇಳೆಗೆ ಪರಿಸ್ಥಿತಿ ಬದಲಾಗತೊಡಗಿತು. ದೂರದಿಂದ ಅಲ್ಲಲ್ಲೆ ನಿಂತು ಈ ದೃಶ್ಯಗಳನ್ನು ನೋಡುತ್ತಿದ್ದ ಸ್ಥಳೀಯರನ್ನು ದೂರಕ್ಕೆ ಓಡಿಸಲಾಯಿತು. ಕೆಲ ನಿಮಿಷದಲ್ಲೇ ಮತ್ತೆ ಒಂದೇ ಸಮ ಫೈರಿಂಗ್ ಶಬ್ಧ ಸ್ಥಳೀಯರಿಗೆ ಕೇಳಿಸಿದೆ.

ಬಹುಶಃ ಅದೇ ನಿಷ್ಪಾಪಿ ಗಿರಿಜನ ದಂಪತಿ ರಾಮೇಗೌಡ, ಕಾವೇರಮ್ಮನವರಿಗೆ ಮರಣದಂಡನೆ ಜಾರಿಯಾದ ಸಮಯ. ಮೆಣಸಿನಹಾಡ್ಯ ಸುತ್ತಮುತ್ತ ಎಲ್ಲರ ಕಷ್ಟ-ಸುಖ ವಿಚಾರಿಸುತ್ತಾ, ನೆರವಾಗುತ್ತಾ ಬಂದಿದ್ದ, ಎತ್ತಂಗಡಿ ಭಯದಲ್ಲಿದ್ದ ಜನರಿಗೆ ಸ್ಥೈರ್ಯ ತುಂಬುತ್ತಾ ಬಂದಿದ್ದ, ನಿಷ್ಕಪಟಿ ಯುವಕರಾಗಿದ್ದ ಪರಮೇಶ್, ಸುಂದರೇಶರ ಚೈತನ್ಯಪೂರ್ಣ ಬದುಕನ್ನೂ ಪೊಲೀಸರ ಬಂದೂಕುಗಳು ಕೊನೆಗಾಣಿಸುತ್ತಿದ್ದ ಸಮಯ ಅದು. ರಾಮೇಗೌಡನ ಮನೆಯೊಳಗೆ ಮುಂದೇನು ನಡೆಯಲಿದೆ ಎಂಬುದು ಗೊತ್ತಾದ ಮೇಲೂ ಯಾರನ್ನೂ ರಕ್ಷಿಸಿಕೊಳ್ಳಲಾಗದ ಗಿರಿಜನರ ಅಸಹಾಯಕ ಗಳಿಗೆಯೂ ಅದಾಗಿತ್ತು.

ಇದು ಎನ್‌ಕೌಂಟರ್ ಅರ್ಥಾತ್ ಗುಂಡಿನ ಚಕಮಕಿಯಲ್ಲಿ ಸಂಭವಿಸಿದ ಸಾವುಗಳೆಂದು ಪೊಲೀಸರು ಹೇಳುತ್ತಿದ್ದಾರೆ. ಅವತ್ತೇ ಸ್ಥಳಕ್ಕೆ ಭೇಟಿ ನೀಡಿದ ಕೆಲ ಪತ್ರಕರ್ತರು ಹಾಗೂ ನಂತರ ಸ್ಥಳೀಯರು ಈಗ ನೀಡುತ್ತಿರುವ ಮಾಹಿತಿ, ಲಭ್ಯವಿರುವ ಫೋಟೋಗಳು, ಮೃತರ ದೇಹಗಳು ಸಿಕ್ಕ ಸ್ಥಳ, ಗುಂಡೇಟು ಬಿದ್ದ ಭಾಗ ಹಾಗೂ ಹತ್ಯೆ ನಡೆದ ಮನೆಯ ಒಳಹೊರಗನ್ನೆಲ್ಲಾ ಪರಿಶೀಲಿಸಿದರೆ... ಅಷ್ಟೇ ಅಲ್ಲ ಸ್ಥಳದಲ್ಲಿದ್ದ ಕೆಲ ಪೊಲೀಸರ ಮಾತುಗಳನ್ನು ಪರಿಗಣಿಸುವುದಾದರೆ.... ಆ ನಾಲ್ವರನ್ನು ಮುಗಿಸಿಬಿಡುವಂತೆ ಮೇಲಿನಿಂದ ಆದೇಶ ಬಂದಿದೆ. ತಮ್ಮ ವಿಚಾರಣೆಯೇ ನಡೆಸದೆ ಮರಣ ದಂಡನೆಯನ್ನು ಜಾರಿಗೊಳಿಸಲಾಗುತ್ತಿದೆ ಎಂಬುದರ ಸುಳಿವೂ ಅರಿಯದೆ ಬೆದರಿ ಕುಳಿತಿದ್ದವರ ಪೈಕಿ ಪರಮೇಶನನ್ನು ಎಳೆದೊಯ್ದು ನೆಲಕ್ಕೆ ಕೆಡವಿಕೊಂಡು ಬಂದೂಕಿನ ಹಿಂತುದಿ (Butt)ನಿಂದ ಮುಖಮೂಗು, ಜಜ್ಜಿ ಹಾಕಲಾಗಿದೆ, ಮೊಣಕಾಲೂರಿ ಮೇಲೇಳಲು ಯತ್ನಿಸಿದ ಪರಮೇಶನ ಮೂಗಿನ ಎಡಭಾಗಕ್ಕೆ ರೈಫಲ್ ಇಟ್ಟು ಗುಂಡು ಹಾರಿಸಲಾಗಿದೆ. ನಂತರ ಮನೆಯೊಳಕ್ಕೆ ಹೋಗಿ ರಾಮೇಗೌಡ, ಕಾವೇರಮ್ಮ, ಸುಂದರೇಶ್ ಈ ಮೂವರಿಗೂ ನೇರ ತಲೆಗೇ ಗುರಿ ಮಾಡಿ ಗುಂಡು ಹೊಡೆದು ಹತ್ಯೆ ನಡೆಸಲಾಗಿದೆ. ಒಂದೇಸಮನೆ ಬೀಳುತ್ತಿದ್ದ ಮಳೇನೀರೂ ಸಹ ಕರಗಿಸಲಾಗದಷ್ಟು



ನಾಲ್ವರು ಗಿರಿಜನರ ಸಮಾಧಿ

ರಕ್ತ ಅಲ್ಲೆಲ್ಲಾ ಹರಿದು ಹೆಪ್ಪುಗಟ್ಟಿತ್ತು.

ಸುತ್ತಮುತ್ತಲಿನ ಜನರಿಗೆ ಮೂರನೇ ಬಾರಿಗೆ ಕೇಳಿಸಿದ ಗುಂಡಿನ ಸದ್ದುಗಳು ಇದರದ್ದೇ. ಅನಂತರ ಕಾವಲಿದ್ದ ಪೊಲೀಸರ ಕಣ್ಣುತಪ್ಪಿಸಿ ದೂರದ ಗುಡ್ಡದ ತುದಿಗಳಿಂದ ತಗ್ಗಿನಲ್ಲಿದ್ದ ರಾಮೇಗೌಡರ ಮನೆಯತ್ತ ನೋಡುತ್ತಿದ್ದವರಿಗೆ ಪೊಲೀಸರು ಶವಗಳನ್ನು ಅತ್ತಇತ್ತ ಎಳೆದಾಡುತ್ತಿದ್ದುದು ಕಾಣಿಸಿದೆ. ಒಮ್ಮೆ ಪರಮೇಶ್ ಹಾಗೂ ಗೌತಮರ ಶವಗಳನ್ನು ಹಿತ್ತಲಿನಲ್ಲಿ ಒಟ್ಟಿಗೆ ಎಸೆದರೆ ಕೆಲ ಹೊತ್ತಿನ ನಂತರ ಪರಮೇಶನ ಶವವನ್ನು ತಂದು ಮನೆ ಮುಂದಿನ ಕಣ (ಅಂಗಳ)ಕ್ಕೆ ಸ್ಥಳಾಂತರಿಸಿದ್ದಾರೆ. ರಾಮೇಗೌಡ, ಕಾವೇರಮ್ಮ ಹಾಗೂ ಸುಂದರೇಶರನ್ನು ಅಡುಗೆಮನೆಯಲ್ಲೇ ಬಿಡಲಾಗಿದೆ.

ಇತ್ತ ಗೃಹ ಸಚಿವ ಎಂ.ಪಿ. ಪ್ರಕಾಶ್ 'ಒಬ್ಬನ ಹತ್ಯೆ ನಾಲ್ವರ ಬಂಧನ'ವೆಂಬ ಹೇಳಿಕೆಯನ್ನು ಸದನದಲ್ಲಿ ನೀಡುತ್ತಿದ್ದಾಗ ಅತ್ತ ನಾಲ್ಕು ನಿಶ್ಶಸ್ತ್ರ ಅಮಾಯಕರನ್ನು ಬಲಿ ತೆಗೆದುಕೊಂಡ ಗಳಿಗೆಯ ರುದ್ರ ನಾಟಕವಿದು.

ಕೊನೆಯದಾಗಿ 11.30 ರ ಸುಮಾರಿಗೆ ಮತ್ತೆ ಗುಂಡಿನ ಮೊರೆತ ಕೇಳಿಬಂದಾಗ ಅದಾಗಲೇ ಸ್ಥಳದಲ್ಲಿದ್ದ ಪತ್ರಕರ್ತರಿಗೆ ಪೊಲೀಸರು ಹೇಳಿದ್ದು-ಕಾಡೊಳಗೆ 'ಗುಂಡಿನ ಚಕಮಕಿ' ಇನ್ನೂ ನಡೆಯುತ್ತಿದೆಯೆಂದು. ಆದರೆ ರಾಮೇಗೌಡರ ಪುಟ್ಟ ಮನೆಯೊಳಗೇ, ಮನೆ ಯೊಳಗಿನಿಂದಲೇ ಪೊಲೀಸರು ಯದ್ವಾತದ್ವ ಗುಂಡು ಹಾರಿಸಿರುವ ಗುರುತುಗಳಿವೆ. ಇದೊಂದು ಅಸಲಿ ಎನ್‌ಕೌಂಟರ್ ಎಂದು ಬಿಂಬಿಸಲು ಪೊಲೀಸರು ನಡೆಸಿದ ಪ್ರಯತ್ನ ಎಂಬುದು ಯಾರಿಗಾದರೂ ಗೊತ್ತಾಗುವಂತಿದೆ.

ನಕ್ಸಲ್‌ನೊಬ್ಬನಿಗೆ ಆಶ್ರಯ ನೀಡಿದ ತಪ್ಪಿಗೆ ರಾಮೇಗೌಡರ ಇಡೀ ಕುಟುಂಬ ಬಲಿಯಾಗ ಬೇಕಾಯಿತು ಎಂದು ಈ ಹತ್ಯಾಕಾಂಡಕ್ಕೆ ವಿವರಣೆ ನೀಡಲಾಗುತ್ತಿದೆ. ಆದರೆ ನಮ್ಮ ಸಮಾಜದ ವಿಪರ್ಯಾಸ ಏನೆಂದು ನೋಡಿ.

ಅಂತಾ ದುಷ್ಟ ಪರಕೀಯ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗಲೂ ಜನ ಅಹಿಂಸೆಯ ಹಾದಿಯನ್ನೇ ಆರಿಸಿಕೊಂಡಿದ್ದರು. ಅವರು 'ಭಾರತ ಬಿಟ್ಟು ತೊಲಗಿದ' ಮೇಲೆ ಈಗ ನಮ್ಮವರೇ ನಾಯಕರ ಸರ್ಕಾರಗಳು 'ಗಿರಿಜನರೆ, ನಿಮ್ಮ ಮನೆ ಭೂಮಿ ಬಿಟ್ಟು ತೊಲಗಿ' ಎನ್ನುತ್ತಿದೆ. ಇವರು ತಾವು ಹುಟ್ಟಿ ಬೆಳೆದ ಜಾಗವನ್ನು ಬಿಟ್ಟು ಯಾಕೆ ಹೋಗಬೇಕು? ಎಲ್ಲಿಗೆ ಹೋಗಬೇಕು? ಯಾವ ತಪ್ಪಿಗೆ ಈ ಶಿಕ್ಷೆ ಅಂತಾ ಯಾರೂ ಕೇಳುತ್ತಿಲ್ಲ. ಯಾವ ಕಾಂಗ್ರೆಸ್, ಜನತಾದಳ, ಬಿಜೆಪಿ, ಕಮ್ಯುನಿಸ್ಟರು, ಸಮಾಜವಾದಿಗಳೂ "ನಿಮ್ಮ ಪರವಾಗಿ ನಾವಿದ್ದೇವೆ" ಎಂದು ಹೇಳುತ್ತಿಲ್ಲ. ಮತ್ತೊಂದೆಡೆ ಕಲ್ಕುಳಿ ವಿಠಲ ಹೆಗಡೆ ನೇತೃತ್ವದ ಕುದುರೆಮುಖ ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟದ ಕಾನೂನು ಬದ್ಧ ಶಾಂತಿಯುತ ಹೋರಾಟಗಳಿಗೆ ನಮ್ಮ ಸರ್ಕಾರ ಕಿಲುಬು ಕಾಸಿನ ಬೆಲೆಯನ್ನೂ ನೀಡಿಲ್ಲ.

ರಾಮೇಗೌಡ-ಕಾವೇರಮ್ಮರಂತಹ [illegible] ನಕ್ಸಲರತ್ತ ಸರಿಯುವಂತೆ ಮಾಡಿದ ತಪ್ಪು [illegible]

[illegible]

ಭಜರಂಗಿಗಳ ದರೋಡೆ ಹಾಗೂ ಬಸ್‌ಗೆ ಬೆಂಕಿ ಪ್ರಕರಣ

ಮಲೆನಾಡಿನಲ್ಲಿ ಕೆಲವು ಭಜರಂಗದಳ ಕಾರ್ಯಕರ್ತರು ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂಬುದು ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ಈಗ್ಗೆ ಒಂದು ವರ್ಷದ ಹಿಂದೆ ಕಲ್ಲುಗುಡ್ಡೆ ಎಂಬಲ್ಲಿ ನಾಲ್ವರು ದುಷ್ಕರ್ಮಿಗಳ ಗುಂಪೊಂದು ನಾಲ್ಕು ಮನೆಗಳಿಗೆ ನುಗ್ಗಿ ಹಣ ದರೋಡೆ ನಡೆಸಿತ್ತು. ತನಿಖೆ ನಡೆಸಿದ ಪೊಲೀಸರು ಕಳಸದ ಒಬ್ಬ ಭಜರಂಗಿ ಹಾಗೂ ಕಲ್ಲುಗುಡ್ಡೆ ಸುತ್ತಲಿನ ಮೂವರು ಭಜರಂಗಿಗಳೇ ಡಕಾಯಿತರೆಂಬುದನ್ನು ಪತ್ತೆಹಚ್ಚಿದ್ದರು.

ಆಮೇಲೆ ಕುಂಚೆಬೈಲು ಎಂಬಲ್ಲೂ 2 ಮನೆಗೆ ನುಗ್ಗಿ ಗಾಜು ಪುಡಿಗಟ್ಟಿ ದಾಂಧಲೆ ನಡೆಸಿ ಹಣ ಕಿತ್ತುಕೊಂಡು ಹೋದ ಘಟನೆಯಲ್ಲೂ ಪೊಲೀಸರು ಇಬ್ಬರು ಭಜರಂಗ ದಳದವರನ್ನು ಬಂಧಿಸಿ ಕೇಸು ಹಾಕಿದ್ದರು. ನಕ್ಸಲರು ದರೋಡೆ ಮಾಡಿದರೆಂಬ ಸುದ್ದಿ ಕೇಳಿಬರುತ್ತಿರುವಾಗ ಅದೇ ಮಲೆನಾಡಿನಲ್ಲಿ ಕೆಲ ಭಜರಂಗಿಗಳಿಗೆ ಇದು ವೃತ್ತಿಯಾಗಿದೆ ಎಂಬುದು ಪೊಲೀಸರಿಗೆ, ಜನರಿಗೆ ನೆನಪಿರಲಿ.

ಈ ಭಜರಂಗಿಗಳು ಬರೀ ದರೋಡೆ ಮಾತ್ರವಲ್ಲ ಬಸ್‌ಗೆ ಬೆಂಕಿ ಹಚ್ಚುವುದರಲ್ಲೂ ನಿಪುಣರೆ. ಬಾಬಾಬುಡನ್‌ಗಿರಿಯಲ್ಲೊಮ್ಮೆ ಸರ್ಕಾರಿ ಪ್ರಾಯೋಜಿತ ದತ್ತ ಜಯಂತಿಗೆ ನಿಷೇಧ ಹೇರಿದಾಗ ಅದನ್ನು ಭಜರಂಗದಳ ಪ್ರತಿಭಟಿಸುತ್ತಾ, ಮೈಸೂರು-ಶೃಂಗೇರಿ ಬಸ್‌ಗೆ ಅಗಳಗಂಡಿ ಬಳಿ ಬೆಂಕಿ ಹಚ್ಚಿ ಪರಾರಿಯಾಗಿತ್ತು.

ಪೊಲೀಸರು ಇದುವರೆಗೂ ಆ ಪುಂಡರನ್ನು ಪತ್ತೆಹಚ್ಚಿಲ್ಲ.

ನಕ್ಸಲರು ದರೋಡೆ ಮಾಡಿದರಾ?

ಈ ಬಗ್ಗೆ ಕರ್ನಾಟಕ ಜನತೆಗೆ ನಕ್ಸಲರು ಒಂದು ಸ್ಪಷ್ಟನೆ ನೀಡಲೇಬೇಕಿದೆ. ತಮ್ಮ ಹೋರಾಟ ಜನರ ಪರವಾಗಿ ಎಂದು ಹೇಳುತ್ತಾ ಬಂದಿರುವ ಮಾವೋವಾದಿಗಳು ಜುಲೈ 4 ರಂದು ಹುಲ್ಲಾರ ಬೈಲು ಕೇಶವ ಹೆಗಡೆ ಮನೆಗೆ ನುಗ್ಗಿ ಒಂದು ಬಂದೂಕು ಹಾಗೂ 55 ಸಾವಿರ ಹಣ ಕಿತ್ತುಕೊಂಡು ಹೋದರೆಂದು ದೂರು ದಾಖಲಾಗಿದೆ. ಇದೇ ಭಾನುವಾರ ಜುಲೈ 15 ರಂದು ತಲ್ಲೂರಿನಲ್ಲಿ ಮನೆಯೊಂದಕ್ಕೆ ನುಗ್ಗಿ 40 ತೋಲೆ ಚಿನ್ನ, 76 ಸಾವಿರ ನಗದು ಒಂದು ಗನ್ ದೋಚಿದ್ದಾರೆಂದು ವರದಿ ಬರುತ್ತಿದೆ. ಅಲ್ಲದೆ ಸತೀಶ್ ಎಂಬ ಬಸ್ ಮಾಲೀಕನೊಬ್ಬನನ್ನು ಬೆದರಿಸಿ ಹಣ ಕಿತ್ತು ಕೈಗೆ ಕರಪತ್ರ ನೀಡಿ ಹೋಗಿದ್ದಾರೆಂತಲೂ ಸುದ್ದಿಯಾಗಿದೆ.

ಒಂದು ವೇಳೆ ಈ ದರೋಡೆಗಳನ್ನು ನಕ್ಸಲರು ಮಾಡಿಲ್ಲ ಎಂದಾದರೆ ಈ ದರೋಡೆ ಪ್ರಕರಣಗಳ ಹಿಂದೆ ಪೊಲೀಸರ ಇನ್ನೊಂದು ಪ್ಲಾನ್ ಇರುವ ಸಾಧ್ಯತೆಯೂ ಇದೆ. ಮಲೆನಾಡಿನ ಹಳ್ಳಿಗಳಲ್ಲಿ ನಕ್ಸಲರ ಡಕಾಯಿತಿ ಗಳಿಂದ ಜನರಿಗೆ ರಕ್ಷಣೆ ಇಲ್ಲವಾಗಿದ್ದು ಹಾಗಾಗಿ ಜನಗಳೇ ಗ್ರಾಮ ರಕ್ಷಕ ಸಶಸ್ತ್ರ ದಳಗಳನ್ನು (Armed Village Defence Squad) ರಚಿಸಿಕೊಳ್ಳುವಂತೆ ಪ್ರೇರೆಪಿಸಲು ಈ ಘಟನೆಗಳನ್ನು ಬಳಸಿಕೊಳ್ಳುವುದು. ಆ ಮೂಲಕ ನಕ್ಸಲ್ ಬೆಂಬಲಿಗರನ್ನು ಹತ್ತಿಕ್ಕುವುದು ಮತ್ತು ಎಲ್ಲಾ ಪ್ರಗತಿಪರ ಜನರ ಕೋಮುವಾದದ ವಿರೋಧಿಗಳ ದನಿ ಅಡಗಿಸುವ ಹುನ್ನಾರವೂ ಪೊಲೀಸರಿಗೆ ಇರುವಂತಿದೆ. ಆ ಹಿನ್ನೆಲೆಯಲ್ಲಿ ಈ ದರೋಡೆ ಪ್ರಕರಣಗಳನ್ನು ವಿಶ್ಲೇಷಿಸಬೇಕಿದೆ.

(4 ನೇ ಪುಟದಿಂದ)

ವಾಪಾಸು ಹೋಗುತ್ತಾ ಎಡವನಹಳ್ಳಿ, ಸಿಂಗೇನ ಅಗ್ರಹಾರ, ಹೀಲಲ್ಲಿಗೆ ಮುಂತಾದ ಊರುಗಳಲ್ಲಿ ಬೆದರಿಕೆ ಹಾಕಿದ್ದಾರೆ.

ಹೀಗೆ ತಮ್ಮ ಮೇಲೆ ವಿನಾಕಾರಣವಾಗಿ ಅನಿರೀಕ್ಷಿತವಾಗಿ ನಡೆದ ಸರಣಿ ದಾಳಿಯಿಂದ ಆಘಾತಗೊಂಡ ದಲಿತರು, ದಲಿತ ಸಂಘಟನೆಗಳ ಮುಖಂಡರನ್ನು, ಇತರೆ ಸಂಘಟನೆಗಳನ್ನು ಕರೆದು ಜುಲೈ 9 ರಂದು ಹೊಸೂರು ರಸ್ತೆಯ ಮೇಲೆ ಪ್ರತಿಭಟನಾ ಧರಣಿ ನಡೆಸಿ, ದೂರು ನೀಡಿದ್ದಾರೆ. ಸ್ಥಳಕ್ಕೆ ಬಂದ ಎಸ್.ಪಿ, ಶ್ರೀನಿವಾಸ್ ಎರಡೇ ದಿನದಲ್ಲಿ ತಪ್ಪಿತಸ್ಥರನ್ನು ಹಿಡಿಯುವ ಆಶ್ವಾಸನೆ ನೀಡಿ ಈಗಾಗಲೇ ಹಲವು ದಿನಗಳಾದರೂ, ಇದಕ್ಕೆ ನೇರವಾಗಿ ಸಂಬಂಧಿಸಿದ ಇಬ್ಬರು ರೆಡ್ಡಿ ಹುಡುಗರನ್ನು ಬಂಧಿಸಿದ್ದು ಬಿಟ್ಟರೆ ನಿಜವಾದ ಅಪರಾಧಿಗಳ ಸುದ್ದಿಗೇ ಹೋಗಿಲ್ಲ! ಪಿಯುಸಿಎಲ್, HRFDL, NCDHR, ಸೇವಾ ಮುಂತಾದ ಸಂಸ್ಥೆಗಳು ಈ ಕುರಿತು ಮಾಹಿತಿ ಸಂಗ್ರಹಿಸಿ, ದೂರನ್ನು ಹಲವು ಮೇಲಧಿಕಾರಿಗಳಿಗೂ, ಇತರೆ ಸಂಬಂಧಪಟ್ಟವರಿಗೆ ಕಳಿಸಿದ್ದರೂ ಇಲ್ಲಿಯವರೆಗೆ ಯಾರೂ ಪ್ರತಿಕ್ರಿಯಿಸಿಲ್ಲ. ಚಂದಾಪುರ ಇರುವ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು ಸ್ವತಃ ದಲಿತರಾದ ಎಂಎಲ್ಎ ನಾರಾಯಣಸ್ವಾಮಿ ಈ ಕಡೆಗೆ ತಿರುಗಿ ನೋಡುವ ಗೋಜಿಗೂ ಹೋಗಿಲ್ಲ. ತಾಲ್ಲೂಕು ಸೋಷಿಯಲ್ ವೆಲ್‌ಫೇರ್ ಆಫೀಸರ್ ಬಸವರಾಜ್ ಬಂದು [illegible]

ಚಂದಾಪುರದಲ್ಲಿ ನಡೆದ ದೌರ್ಜನ್ಯ ಪ್ರಕರಣದಂತಹ ಹಲವು ಘಟನೆಗಳು ಬೆಂಗಳೂರು ನಗರದ ಸುತ್ತ ಮುತ್ತಲಿನ ಪ್ರದೇಶಗಳಿಂದ ವರದಿಯಾಗುತ್ತಲೇ ಇರುವುದನ್ನು ನಾವು ನೋಡುತ್ತಿದ್ದೇವೆ. ಮೇಲ್ನೋಟಕ್ಕೆ ಇವು ಕ್ಷುಲ್ಲಕ ಕಾರಣಕ್ಕೆ ನಡೆದಿವೆ ಎನ್ನಿಸಿದರೂ, ಇವುಗಳು ಆಂತರಿಕ ನೈಜ ಕಾರಣಗಳು ಬೇರೆಯೇ ಆಗಿವೆ.

ಈ ಆಧುನಿಕ ಕಾಲಘಟ್ಟದಲ್ಲಿ ದಲಿತರ ಬದುಕು ಕೂಡಾ ಕೆಲವು ಮಾರ್ಪಾಟುಗಳಿಗೆ ಒಳಗಾಗುತ್ತಿದೆ. ಪಟ್ಟಣದ ಸಮೀಪದಲ್ಲಿರುವ ಪ್ರದೇಶಗಳಲ್ಲಿ ಅಲ್ಪಸ್ವಲ್ಪ ಮಟ್ಟಿಗಾದರೂ ದಲಿತರು ದಕ್ಕಿಸಿಕೊಂಡಿರುವ ಶಿಕ್ಷಣ-ಉದ್ಯೋಗದ ಅವಕಾಶಗಳು, ಆರ್ಥಿಕ ಸ್ವಾವಲಂಬನೆ, ತಮ್ಮ ಸಂಘಟನೆ ಮತ್ತು ಹೋರಾಟದಿಂದ ಪಡೆದುಕೊಂಡ ಚೈತನ್ಯ ಒಂದು ಮಟ್ಟದ ರಾಜಕೀಯ ಅವಕಾಶಗಳು ದಲಿತರ ಸಾಮಾಜಿಕ ಎಚ್ಚರಕ್ಕೆ ದಾರಿ ತೆರೆದಿವೆ. ಇದು ಮೇಲುಜಾತಿಗಳ ಮೇಲಿದ್ದ ಅವಲಂಬನೆಯನ್ನೂ, ದಲಿತರ ಮೇಲೆ ಅವರಿಗಿದ್ದ ಬಿಗಿಮುಷ್ಟಿಯ ಹಿಡಿತವನ್ನೂ ಸಡಿಲಗೊಳಿಸಿದೆ. ಆದರೆ ದಲಿತರ ಈ ಜಾಗೃತಿ ಮತ್ತು ಬದಲಾವಣೆಯನ್ನು ಎಂದಿಗೂ ಸಹಿಸದ, ಒಪ್ಪಿಕೊಳ್ಳಲು ಸಿದ್ಧರಿಲ್ಲದ ಮೇಲ್ಜಾತಿ ಪುಢಾರಿಗಳು ತಮ್ಮ ಕಪಿಮುಷ್ಟಿಯನ್ನು ಮತ್ತೆ ಬಿಗಿಗೊಳಿಸುವ ಪ್ರಯತ್ನವಾಗಿ ಚಂದಾಪುರದಲ್ಲಿ ರವಿರೆಡ್ಡಿ ಗ್ಯಾಂಗ್ ನಡೆಸಿದಂತಹ ದಾಂಧಲೆ- ದೌರ್ಜನ್ಯಗಳನ್ನು ಮಾಡುತ್ತಿದ್ದಾರೆ. ಇದೇ ರವಿರೆಡ್ಡಿಯನ್ನೇ ತೆಗೆದುಕೊಂಡರೂ, ಈತ ಗಲಭೆಕೋರನೆಂಬ ಚರಿತ್ರೆಯೇ ಇದೆ. ಈ ಹಿಂದೆ ಈತನ ಗುಂಪು 2001 ರಲ್ಲಿ ಹುಸ್ಕೂರಿನ ಮದ್ದೂರಮ್ಮನ ಜಾತ್ರೆಯಲ್ಲಿ ಗಲಾಟೆ ಮಾಡಿ, ಆಗಿನ ಎಸ್‌ಐ ರತ್ನಾಕರ್ ಶೆಟ್ಟಿಯ ತಲೆ ಒಡೆದು ಮಾರಣಾಂತಿಕ ಹಲ್ಲೆ ನಡೆಸಿದ್ದರು. ತಮ್ಮ ಸುಳ್ಳು ಬಿಲ್ಲುಗಳಿಗೆ ಸಹಿ ಮಾಡಲು ಒಪ್ಪದ ಕಾರಣಕ್ಕೆ 2006 ರಲ್ಲಿ ಇಗ್ಗಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷೆಯ ಪತಿ ವೆಂಕಟಸ್ವಾಮಿಯನ್ನು ಥಳಿಸಿದ್ದರು. 'ಹಿಂದುಳಿದ ಹಿತರಕ್ಷಣಾ ಸಮಿತಿ'ಯೆಂಬುದೊಂದನ್ನು ತಮ್ಮ ಇಂತಹ ಕೃತ್ಯಗಳಿಗೆ ಪರದೆಯಂತೆ ಬಳಸಲು ರಚಿಸಿದ್ದರು. ಇದರ ಮುಖಂಡರಾಗಿ ಆರ್.ಕೆ. ರಮೇಶ್, ಮಂಜುನಾಥ್ ರೆಡ್ಡಿ, ಪ್ರಭಾಕರ ರೆಡ್ಡಿ, ನಾರಾಯಣ ರೆಡ್ಡಿ ಮೊದಲಾದವರು ಪ್ರತಿಷ್ಠಾಪನೆಗೊಂಡು, ಒಂದೆಡೆ ಲಾರಿ, ರಿಯಲ್ ಎಸ್ಟೇಟ್ ಬಾರ್‌ಗಳ ಬಿಸಿನೆಸ್ಸುಗಳನ್ನು ನಡೆಸುತ್ತಾ ಇನ್ನೊಂದೆಡೆ ಇಂತಹ ದಾಂಧಲೆ ಲೂಟಿಗಳನ್ನು ನಡೆಸುತ್ತಾ ಕೊಬ್ಬಿದ್ದಾರೆ. ದೇಶದೆಲ್ಲೆಡೆ ಎಗ್ಗಿಲ್ಲದೆ ನಡೆಯುತ್ತಲೇ ಬಂದಿರುವ ದಲಿತರ ಮೇಲಿನ ದೌರ್ಜನ್ಯಗಳಲ್ಲಿ ಚಂದಾಪುರ ಮತ್ತೊಂದು ಗಾಯ. ಕಂಬಾಲಪಲ್ಲಿ, ಖೈರ್ಲಾಂಜಿ, ಕಡಕೋಳ, ವೆಂಕಟಮ್ಮನಹಳ್ಳಿ, ವಣೇನೂರು, ಸಿದ್ಧಘಟ್ಟ, ಶೆಟ್ಟಿಹಳ್ಳಿಯ ಯಾತನಾಮಯ ಸರಣಿಗೆ ಇದು ಮತ್ತೊಂದು ಸೇರ್ಪಡೆ. ಚಂದಾಪುರದ ಪ್ರಕರಣವನ್ನು ನಿರ್ಲಕ್ಷಿಸಿ ಮುಂದೆ ಅದು ಗಂಭೀರ ಗಲಭೆಗಳಿಗೂ, ದಲಿತರ ಪ್ರಾಣ ಹಾನಿಗೂ ಕಾರಣವಾಗದಂತೆ ತಡೆಯುವ ಜವಾಬ್ದಾರಿ ಸರ್ಕಾರ ಮತ್ತದರ ಅಂಗಸಂಸ್ಥೆಗಳ ಮೇಲಿದೆ. ಅಲ್ಲಿನ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಕ್ರಮ ಕೈಗೊಳ್ಳುವುದು. ಲಕ್ಷಗಟ್ಟಲೆ ನಷ್ಟವಾಗಿರುವ ದಲಿತ ಕುಟುಂಬಗಳಿಗೆ ಪರಿಹಾರ ಒದಗಿಸುವುದು ತುರ್ತಾಗಿ ಆಗಬೇಕಿದ್ದು ಸರ್ಕಾರ ಇದಕ್ಕೆ ಮುಂದಾಗಬೇಕು. ಹಾಗೆಯೇ ಹೋರಾಟಕ್ಕೆ ಸಿದ್ಧರಾಗಿರುವ ಅಲ್ಲಿನ ದಲಿತರಿಗೆ ಎಲ್ಲಾ ಪ್ರಜಾತಂತ್ರವಾದಿಗಳೂ ಮನಃಪೂರ್ವಕವಾಗಿ ಜೊತೆಯಾಗಬೇಕಿದೆ.

-ಅಭಿಷೇಕ್

ಏಕೆ ಹೀಗನಿಸಿತೋ ಗೊತ್ತಿಲ್ಲ!!



ಸಾವಿರದ ಒಂಬೈನೂರ ಮೂವತ್ತನೆಯ ಇಸವಿ, ಮಾರ್ಚ್ ತಿಂಗಳು. ನಮ್ಮ ಜಿಲ್ಲಾಧಿಕಾರಿ ವಿವಿಯನ್ ನರಭಕ್ಷಕಿಯುಳ್ಳ ಪೀಡಿತವಾದ ಪ್ರದೇಶಗಳಲ್ಲಿ ಪ್ರವಾಸ ಹೊರಟಿದ್ದರು. ಅದೇ ತಿಂಗಳ 23ನೆಯ ತಾರೀಖು ನನಗೆ ಅವರಿಂದ ಒಂದು ತುರ್ತು ಸಂದೇಶ ಬಂತು. ನನ್ನನ್ನು ಕೂಡಲೇ ಕಾಲಾಘರ್‌ಗೆ ಬರುವಂತೆ ಕೋರಿದ್ದರು. ಅವರು ಅಲ್ಲಿಯೇ ಉಳಿದು ನನಗಾಗಿ ನಿರೀಕ್ಷಿಸುತ್ತಿರುವುದಾಗಿ ತಿಳಿಸಿದ್ದರು. ಹೆಚ್ಚೂ ಕಡಿಮೆ ಅಲ್ಲಿಗೆ ನೈನಿತಾಲ್‌ನಿಂದ 50 ಮೈಲಿಗಳಾಗುತ್ತಿತ್ತು, ನಾನು ಕೂಡಲೇ ಹೊರಟು, ಎರಡು ದಿನ ನಿರಂತರವಾಗಿ ಪ್ರಯಾಣ ಮಾಡಿ, ಮೂರನೆಯ ದಿನ ತಿಂಡಿಯ ಹೊತ್ತಿಗೆ ವಿವಿಯನ್ ಮುಂದೆ ಕುಳಿತಿದ್ದೆ. ಅವರು ಕಾಲಾಘರ್‌ನ ಅರಣ್ಯ ಇಲಾಖೆಯ ಪ್ರವಾಸಿ ಬಂಗಲೆಯಲ್ಲಿ ಬಿಡಾರ ಹೂಡಿದ್ದರು.

ತಿಂಡಿ ತಿನ್ನುತ್ತಿದ್ದಾಗ ಈವರೆಗೂ ನಡೆದಿದ್ದನ್ನು ನನಗೆ ವಿವರಿಸಿದರು. ಅವರು 21ನೆಯ ತಾರೀಖು ನಡುದಿನದ ಹೊತ್ತಿಗೆ ಈ ಅರಣ್ಯ ಬಂಗಲೆಗೆ ಬಂದರಂತೆ. ವಿವಿಯನ್ ವರಾಂಡದಲ್ಲಿ ಟೀ ಕುಡಿಯುತ್ತಾ ಕುಳಿತಿದ್ದರಂತೆ. ಆಗ ಬಂಗಲೆಯ ಕಾಂಪೌಂಡಿನ ಪಕ್ಕದಲ್ಲಿ ಐದಾರು ಜನ ಹೆಂಗುಸು ಹುಲ್ಲು ಕೊಯ್ಯುತ್ತಿದ್ದರಂತೆ. ಹುಲಿ ಈ ಹೆಂಗುಸರ ಗುಂಪಿನ ಮೇಲೆ ಹಠಾತ್ತಾಗಿ ದಾಳಿ ಮಾಡಿ ಒಬ್ಬ ಹೆಂಗುಸನ್ನು ಹೊತ್ತುಕೊಂಡು ಕಾಡೊಳಕ್ಕೆ ಮಾಯವಾಯಿತಂತೆ. ತಕ್ಷಣ ಜಿಲ್ಲಾಧಿಕಾರಿಗಳ ಜೊತೆಗಿದ್ದ ರಕ್ಷಣಾ ಸಿಬ್ಬಂದಿ ಬಂದೂಕುಗಳನ್ನು ತೆಗೆದುಕೊಂಡು ವಿವಿಯನ್‌ನ ನೇತೃತ್ವದಲ್ಲಿ ಹುಲಿಯನ್ನು ಬೆನ್ನಟ್ಟಿದರಂತೆ. ಸ್ವಲ್ಪದೂರ ಹೋಗುವ ಹೊತ್ತಿಗೆ ಒಂದು ಓಕ್ ಮರದ ಬುಡದಲ್ಲಿ ಹಬ್ಬಿದ್ದ ಪೊದೆಯ ನಡುವೆ ಆ ಹೆಂಗುಸಿನ ಹೆಣ ಕಾಣಿಸಿತಂತೆ. ತಕ್ಷಣ ಸಿಬ್ಬಂದಿಯ ನೆರವಿನಿಂದ ಸ್ವಲ್ಪದೂರದಲ್ಲಿದ್ದ ಮರದ ಮೇಲೆ ಮಚಾನು ನಿರ್ಮಿಸಲು ಆರಂಭಿಸಿ, ಸಂಜೆಯ ಹೊತ್ತಿಗೆ ವಿವಿಯನ್ ಸಿಬ್ಬಂದಿಯ ಸಮೇತ ಮಚಾನು ಹತ್ತಿ ಕೂತರಂತೆ. ಇಡೀ ರಾತ್ರಿ ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾದಿದ್ದಾರೆ. ಹುಲಿಯ ದರ್ಶನ ಲಭ್ಯವಾಗಿಲ್ಲ, ಮರುದಿನ ಶವವನ್ನು ಸಂಸ್ಕಾರಕ್ಕಾಗಿ ಎತ್ತೊಯ್ಯಲಾಗಿದೆ. ಆದರೆ ವಿವಿಯನ್ ಅಷ್ಟಕ್ಕೇ ಸುಮ್ಮನಾಗುವವನಲ್ಲ, ಅಂದೇ ಅದೇ ಕಾಡುದಾರಿಯಲ್ಲಿ ಕೋಣವೊಂದನ್ನು ಕಟ್ಟಿದ್ದಾರೆ. ಅದನ್ನು ಹುಲಿ ರಾತ್ರಿಗೇ ಕೊಂದು ಹಾಕಿದೆ. ಮರುದಿನ ರಾತ್ರಿಗೆ ವಿವಿಯನ್ ಕಾವಲು ಕೂತಿದ್ದಾರೆ. ಮಬ್ಬುಗತ್ತಲಾಗುವವರೆಗೂ ಅವರಿಗೆ ಏನೂ ಕಂಡಿಲ್ಲ. ನಿಧಾನವಾಗಿ ಸೂರ್ಯ ಪರ್ವತಗಳ ಹಿಂಬದಿಗೆ ಸರಿಯತೊಡಗಿದಂತೆ ಕತ್ತಲಾವರಿಸಿಕೊಳ್ಳಲು ಆರಂಭವಾಗಿದೆ. ಈ ಕತ್ತಲು-ಬೆಳಕುಗಳು ಸಮ್ಮಿಶ್ರಗೊಳ್ಳುವ ವಿಶಿಷ್ಟ ಮುಹೂರ್ತದಲ್ಲಿ ಪೊದೆಯೊಳಗಿನಿಂದ ಪ್ರಾಣಿಯೊಂದು ಕಳೇಬರದತ್ತ ಕಳ್ಳಹೆಜ್ಜೆಗಳನ್ನಿಡುತ್ತಾ ಬರುತ್ತಿರುವುದು ಇವರ ಜ್ಞಾನೇಂದ್ರಿಯಕ್ಕೆ ವೇದ್ಯವಾಗಿದೆ. ಕತ್ತಲಿನಲ್ಲಿ ಅದರ ಭೌತಿಕ ಚಹರೆಯನ್ನು ಅಂದಾಜು ಮಾಡಲು ಪ್ರಯತ್ನಿಸುತ್ತಾ ವಿವಿಯನ್ ಟ್ರಿಗರ್ ಒತ್ತಿದ್ದಾರೆ. ತಕ್ಷಣ ಅವರ ಅಷ್ಟು ಶ್ರಮದ ಶಿಕಾರಿಯ ಪ್ರಯತ್ನ ವಿಫಲವಾಗಿದೆ. ಇವರು ಗುಂಡು ಹೊಡೆದಿದ್ದು ಒಂದು ಕರಡಿಯಾಗಿತ್ತು, ಹಾಗಾಗಿ ಹುಲಿ ಮತ್ತೆ ಹಿಂತಿರುಗಲಿಲ್ಲ, ಅತ್ಯುತ್ತಮ ಶಿಕಾರಿದಾರನಾದರೂ ವಿವಿಯನ್ ಈ ಹುಲಿಯನ್ನು ಬಗಲಿಗೆ ಹಾಕಿಕೊಳ್ಳಲಾಗಲಿಲ್ಲ.

ವಿವಿಯನ್ 25ನೆಯ ತಾರೀಖು ಬೆಳಿಗ್ಗೆ ಇಲ್ಲಿಂದ ಹೊರಟರು. ನಾನು ಕೂಡಲೇ ದಲ್ಯಾನಿಯಾದಲ್ಲಿದ್ದ ನನ್ನ ಕೋಣಗಳನ್ನು ಹೊಡೆತರಲು ನಮ್ಮವರನ್ನು ಓಡಿಸಿದೆ. ಈ ನಡುವೆ ಹಗಲುರಾತ್ರಿ ಅವಳ ಸುಳಿವಿಗಾಗಿ ಕಾಡುಮೇಡು ಸುತ್ತಿದೆ. ಎರಡು ದಿನಗಳಲ್ಲಿ ನಮ್ಮ ಕೋಣಗಳು ಬಂದವು. ಅವುಗಳನ್ನು ಕಾಡುದಾರಿಗಳಲ್ಲಿ ಆಯಕಟ್ಟಿನ ಜಾಗಗಳನ್ನು ಹುಡುಕಿ 100-150ಗಜಗಳ ಅಂತರದಲ್ಲಿ ಕಟ್ಟಿದೆ. ಈ ಬಾರಿಯಾದರೂ ಇವು ಹುಲಿಯನ್ನು ಆಕರ್ಷಿಸಲಿ ಎಂದು ಪ್ರಾರ್ಥಿಸಿದೆ. ಎರಡು-ಮೂರನೆಯ ದಿನ ಹುಲಿ ಕೋಣಗಳ ಮುಂದೆಯೇ ಓಡಾಡಿತ್ತು, ಆದರೆ ಅವುಗಳ ತಂಟೆಗೆ ಹೋಗಿರಲಿಲ್ಲ, ನಾಲ್ಕನೆಯ ದಿನ ರಾತ್ರಿ ಬಂಗಲೆಯ ಹಿಂದಿನಿಂದ ಕಾಡಿನತ್ತ ಹೋಗುತ್ತಿದ್ದ ದಾರಿಯಲ್ಲಿ ಕಟ್ಟಿದ್ದ ಕೋಣವೊಂದು ಸತ್ತು ಬಿದ್ದಿರುವ ವಾರ್ತೆ ಬಂತು. ಹೋಗಿ ಪರೀಕ್ಷಿಸಿದೆ. ನಿರಾಶೆಯಾಯ್ತು, ಚಿರತೆಗಳ ಜೋಡಿಯೊಂದು ಕೋಣದ ಸಾವಿಗೆ ಕಾರಣವಾಗಿತ್ತು, ನಾನು ಕಳೆದ ರಾತ್ರಿ ಅವು ನಡುನಡುವೆ ವಿರಾಮಕೊಟ್ಟು ಘರ್ಜಿಸುತ್ತಿದ್ದುದನ್ನು ಕೇಳಿದ್ದೆ. ನನಗೆ ಅವುಗಳ ಮೇಲೆ ಯಾವ ಸಿಟ್ಟೂ ಇರಲಿಲ್ಲ, ಅವುಗಳನ್ನು ಹೊಡೆಯಲು ಮನಸ್ಸಾಗಲಿಲ್ಲ, ಆದರೆ ಇಲ್ಲಿ ಗೊಂದಲವಿತ್ತು, ಈಗೇನಾದರೂ ನಾನು ಗುಂಡು ಹೊಡೆದು ಗಲಾಟೆ ಮಾಡಿದರೆ ನರಭಕ್ಷಕಿ ಇಲ್ಲಿಂದ ಪಲಾಯನ ಮಾಡುವ ಸಾಧ್ಯತೆಯಿತ್ತು, ಮತ್ತೆ ಅದನ್ನು ನೂರಾರು ಚದರ ಮೈಲಿ ವ್ಯಾಪ್ತಿಯಲ್ಲಿ ಹುಡುಕಿಕೊಂಡು ಅಲೆಯುವುದು ದುಸ್ಸಾಧ್ಯದ ಕೆಲಸವಾಗಿತ್ತು, ಆದರೆ ಈ ಚಿರತೆಗಳನ್ನು ಹೊಡೆಯದೇ ಹೋದರೆ ಅವೇ ನನ್ನ ಕೋಣಗಳಿಗೆ ಕಂಟಕಗಳಾಗಿ ಇಡಿಯಾಗಿ ನಮ್ಮ ಪ್ರಯತ್ನವನ್ನು ನಾಶಮಾಡುತ್ತಿದ್ದವು. ಇದೊಂದು ಸಂದಿಗ್ಧದ ಪರಿಸ್ಥಿತಿ. ಇದೊಂದು ರಾತ್ರಿಗೆ ಅವಕಾಶ ಕೊಟ್ಟು ನೋಡುವುದೆಂದು ತೀರ್ಮಾನಿಸಿ, ನಿರೀಕ್ಷಿಸಿದೆ. ಅಂದು ರಾತ್ರಿಗೆ ಅವು ಮತ್ತೊಂದು ಕೋಣವನ್ನು ಬಲಿ ತೆಗೆದುಕೊಂಡವು. ಇನ್ನು ನಿರೀಕ್ಷಿಸುವುದು ಮೂರ್ಖತನವಾಗುತ್ತಿತ್ತು, ಅಂದು ರಾತ್ರಿಗೆ ಕಾವಲು ಕೂತೆ. ಎರಡೂ ಚಿರತೆಗಳು ಭೂಮಿಯಿಂದ ಮಾಯವಾದವು.

ಈ ಅರಣ್ಯ ಬಂಗಲೆಯ ಪಕ್ಕದಿಂದ ಪೂರ್ವಾಭಿಮುಖವಾಗಿ ಹೋಗುತ್ತಿದ್ದ ರಸ್ತೆಯೊಂದು ಮುಂದೆ ಓಕ್, ಪೈನ್ ಮರಗಳ ದಟ್ಟಣೆಯ ನಡುವೆ ಹಾದುಹೋಗುತ್ತಿತ್ತು, ಈ ದಾರಿಯಲ್ಲಿ ಪ್ರಯಾಣ ಉನ್ಮಾದ ತರಿಸುವಷ್ಟು ಸುಂದರವಾಗಿತ್ತು, ದಾರಿಯುದ್ದಕ್ಕೂ ಥರಥರದ ವನ್ಯಮೃಗಗಳು ಅಡ್ಡಾಗುತ್ತಿದ್ದವು. ಇವುಗಳೊಂದಿಗೆ ಇಲ್ಲಿ ಸಮೃದ್ಧವಾದ ಪಕ್ಷಿಸಂಕುಲವೂ ಇತ್ತು, ಈ ಪ್ರದೇಶದಲ್ಲಿ ಇತ್ತೀಚೆಗೆ ಎರಡು ಕಡವೆಗಳನ್ನು ಹುಲಿ ಕೊಂದಿರುವ ಸಮಾಚಾರ ಸಿಕ್ಕಿತ್ತು, ಅವುಗಳ ತನಿಖೆಗೆ ಹೋಗಿದ್ದೆ. ಕೆಲವು ಚೂರು ಮೂಳೆ ಹಾಗೂ ಕೆಲವು ತೊಟ್ಟು ರಕ್ತದ ಹನಿಗಳ ಹೊರತು ಅಲ್ಲಿ ಹುಲಿಯ ಸಣ್ಣ ಕುರುಹೂ ಕಾಣಲಿಲ್ಲ, ಜಾಡು ಹಿಡಿಯುವ ಪ್ರಶ್ನೆ ದೂರವೇ ಉಳಿಯಿತು.

ಮುಂದಿನ ಹದಿನಾಲ್ಕು ದಿನ ನಾನು ಹುಲಿಯನ್ನು ಹುಡುಕಿ ಅಲೆದಾಡುವುದೇ ಬದುಕಿನ ಏಕೈಕ ಗುರಿಯಾಯಿತು. ಕಂಡು ಕೇಳರಿಯದ ಕಾಡಿನ ದಾರಿಗಳು, ಈವರೆಗೂ ಯಾರೂ ಕಾಲಿಡದಿದ್ದ ಕಾಡಿನ ಮೂಲೆಮೂಲೆಗಳನ್ನು ಇಂಚಿಂಚಾಗಿ ಹುಡುಕಾಡಿದೆ. ಪ್ರಯೋಜನವಾಗಲಿಲ್ಲ ಆದರೆ ಎರಡು ಬಾರಿ ಮಾತ್ರ ಅದಕ್ಕೆ ವಿಚಿತ್ರ ರೀತಿಯಲ್ಲಿ ಸಮೀಪಗತನಾಗಿದ್ದೆ. ನನ್ನ ಜೀವವನ್ನೇ ಅದರ ಮರ್ಜಿಗೊಪ್ಪಿಸಿ ಬದುಕುಳಿದಿದ್ದೆ.

ಒಂದು ಬಾರಿ ಕಾಲಾಘರ್‌ನಿಂದ ದಕ್ಷಿಣಕ್ಕಿದ್ದ ಹಳ್ಳಿಗೆ ಹೋಗುತ್ತಿದ್ದೆ. ಕಳೆದ ಎರಡು-ಮೂರು ವರ್ಷಗಳಿಂದ

ಕೊಲ್ಲುವುದಕ್ಕೆ ಪೊಲೀಸರಿಗೆ ಲೈಸೆನ್ಸ್ ಇಲ್ಲ

ಆರೋಪಿ ಮಾಡಿದ ಅಪರಾಧ ಸಮರ್ಥನೀಯವ್ರೋ ಅಲ್ಲವ್ರೋ ಎಂಬುದನ್ನು ನಿರ್ಧರಿಸುವುದು ನ್ಯಾಯಾಲಯ. ಆದರೆ ಇವತ್ತು ಪೊಲೀಸರೇ ಆ ನಿರ್ಧಾರವನ್ನು ತೆಗೆದುಕೊಂಡು ಎನ್‌ಕೌಂಟರ್ ಹೆಸರಲ್ಲಿ ಜನರನ್ನು ಕೊಲ್ಲುತ್ತಿದ್ದಾರೆ. ಈ ರೀತಿ ಕೊಲ್ಲುವುದಕ್ಕೆ ಪೊಲೀಸರಿಗೆ ಕಾನೂನಿನ ಯಾವ ರೀತಿಯ ಲೈಸನ್ಸೂ ಇಲ್ಲ.



ಯಾವುದೇ ಒಬ್ಬ ವ್ಯಕ್ತಿಯನ್ನು "ಭಯೋತ್ಪಾದಕ" ಎಂದೋ, "ಗ್ಯಾಂಗ್‌ಸ್ಟರ್" ಎಂದೋ, "ಯಾವುದೇ ರೀತಿಯ ಕ್ರಿಮಿನಲ್" ಎಂದೋ ಅವನನ್ನು ಕೊಲ್ಲುವುದಕ್ಕೆ ನಮ್ಮ ಸಂವಿಧಾನದಲ್ಲಾಗಲೀ ಅಥವಾ ಇನ್ನಾವುದೇ ಕಾನೂನಿನಲ್ಲಾಗಲೀ ಅವಕಾಶವಿದೆಯೇ? ಉತ್ತರ ಸ್ಪಷ್ಟ: ಅಂತಹ ಯಾವುದೇ ಅವಕಾಶ ನಮ್ಮ ಕಾನೂನಿನಲ್ಲಿ ಇಲ್ಲ, ಮಾತ್ರವಲ್ಲ, ಪೊಲೀಸರಿಗೆ ಭಯೋತ್ಪಾದಕರನ್ನ ಕೊಲ್ಲುವ ಅಧಿಕಾರವನ್ನು ಟಾಡಾ ಮತ್ತು ಪೋಟಾದಂತಹ ಭಯೋತ್ಪಾದಕ ನಿಗ್ರಹ ಕಾನೂನುಗಳೂ ಕೊಟ್ಟಿಲ್ಲ, ಯಾವುದೇ ವ್ಯಕ್ತಿಯನ್ನು ಕೊಲ್ಲುವ ಅವಕಾಶವಿರುವುದು ಭಾರತೀಯ ದಂಡ ಸಂಹಿತೆಯ (ಐಪಿಸಿ) 100ನೇ ಸೆಕ್ಷನ್ನಿನಡಿಯಲ್ಲಿ ಮಾತ್ರ; ಅದು ಸ್ವರಕ್ಷಣೆಯ ವಿಚಾರಕ್ಕೆ ಸಂಬಂಧಿಸಿದ್ದು. ಅಂತಹ ಕೊಲೆ ಸಮರ್ಥನೀಯವಾದದ್ದು ಎಂದು ತೀರ್ಮಾನಿಸಬೇಕಿರುವುದು ನ್ಯಾಯಾಲಯ. ಯಾವುದೇ ಒಬ್ಬ ವ್ಯಕ್ತಿ ಯಾರನ್ನಾದರೂ ಕೊಂದರೆ, ಮೊಟ್ಟಮೊದಲು ಐಪಿಸಿಯ 302ನೇ ವಿಧಿಯ ಪ್ರಕಾರ ದಾಖಲಾಗಬೇಕು. ಆನಂತರ ಆ ಕೊಲೆ ಸ್ವರಕ್ಷಣೆಗಾಗಿ ನಡೆದದ್ದೆಂದು, ಆ ವ್ಯಕ್ತಿಯನ್ನು ಕೊಲ್ಲದಿದ್ದರೆ ಅವನೇ ತನ್ನನ್ನು ಕೊಂದುಬಿಡುತ್ತಿದ್ದ ಎಂದು ಅಥವಾ ತನ್ನ ಆಸ್ತಿಪಾಸ್ತಿಗೆ ತುಂಬಾ ಹಾನಿಯನ್ನುಂಟುಮಾಡುತ್ತಿದ್ದ, ಹಾಗಾಗಿ ಆತನನ್ನು ಕೊಲ್ಲುವ ಅನಿವಾರ್ಯತೆ ಉಂಟಾಯಿತೆಂದು ಆರೋಪಿ ಸಾಬೀತು ಮಾಡಬೇಕು. ಆರೋಪಿ ಮಾಡಿದ ಕೊಲೆಯು ಸಮರ್ಥನೀಯವ್ರೋ ಅಲ್ಲವ್ರೋ ಎಂಬುದನ್ನು ನಿರ್ಧರಿಸುವುದು ನ್ಯಾಯಾಲಯ. ಆದರೆ ಇವತ್ತು ಪೊಲೀಸರೇ ಆ ನಿರ್ಧಾರವನ್ನು ತೆಗೆದುಕೊಂಡು ಎನ್‌ಕೌಂಟರ್ ಹೆಸರಲ್ಲಿ ಜನರನ್ನು ಕೊಲ್ಲುತ್ತಿದ್ದಾರೆ.

ಇಂತಹ ಎನ್‌ಕೌಂಟರ್ ಕೊಲೆಗಳ ಆರೋಪ ಹೊತ್ತಿರುವ ಯಾವುದೇ ಪೊಲೀಸರ ವಿಚಾರಣೆ ನಡೆಸದಿರುವುದಕ್ಕೆ ಅಥವಾ ಅವರನ್ನು ದೋಷಮುಕ್ತಗೊಳಿಸುವುದಕ್ಕೆ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಾಗಲೀ ಅಥವಾ ಇನ್ನಿತರ ಕಾನೂನುಗಳಲ್ಲಾಗಲೀ ಯಾವುದೇ ಅವಕಾಶವಿಲ್ಲ, ಕೊಲೆ ಒಂದು ಅಪರಾಧವಾಗಿರುವುದರಿಂದ ಇನ್ನಿತರ ಯಾವುದೇ ಅಪರಾಧಗಳಂತೆ ಇದನ್ನೂ ತನಿಖೆಗೆ ಒಳಪಡಿಸಬೇಕಾಗುತ್ತದೆ. ಅಂದರೆ, ಕಾನೂನಿನ ಪ್ರಕಾರ ಒಂದಂತೂ ಸ್ಪಷ್ಟ: ಪೊಲೀಸರು ಕೊಲ್ಲುವುದನ್ನು ಕಾನೂನಿನ ಯಾವುದೇ ನಿಯಮದಡಿಯಲ್ಲಿ ಸಮರ್ಥಿಸಿಕೊಳ್ಳಲು ಬರುವುದಿಲ್ಲ.

ಕಾನೂನುಪಾಲಕ ಅಧಿಕಾರಿಗಳು ಬಳಸುವ ಸಶಸ್ತ್ರ ಮತ್ತು ಬಲಗಳ ಕುರಿತಾದ ವಿಶ್ವಸಂಸ್ಥೆಯ ಮೂಲಭೂತ ನಿಯಮಗಳು (1990) ಕೂಡ ಒತ್ತಿ ಹೇಳುವುದೇನೆಂದರೆ, ಅಧಿಕಾರಿಗಳು ಬಳಸುವ ಸಶಸ್ತ್ರಗಳು ಮತ್ತು ಪಡೆಗಳು ಮಾನವ ಹಕ್ಕುಗಳಿಗೆ ಚ್ಯುತಿಬಾರದಂತಿರಬೇಕು ಎಂದು. ಇದರಲ್ಲಿ ಅತ್ಯಂತ ಪ್ರಮುಖವಾದ ನಿಯಮವನ್ನು ಒಂಭತ್ತನೇ ಅನುಚ್ಛೇದದಲ್ಲಿ ಸೇರಿಸಲಾಗಿದೆ: ಸಂಭಾವ್ಯ ಪ್ರಾಣಾಪಾಯ ಅಥವಾ ಗಂಭೀರ ಗಾಯಗಳ ಸಂದರ್ಭದಲ್ಲಿ ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವುದಕ್ಕೆ, ಅಂತಹ ಅಪಾಯದಿಂದ ಇತರರನ್ನು ರಕ್ಷಣೆ ಮಾಡುವುದಕ್ಕೆ, ಭಾರಿ ಪ್ರಾಣಾಪಾಯಗಳನ್ನು ತಂದೊಡ್ಡುವ ಅಪರಾಧಿ ಕೃತ್ಯಗಳನ್ನು ತಡೆಯುವುದಕ್ಕೆ, ಅಂತಹ ಅನಾಹುತಗಳನ್ನು ಎಸಗಲಿರುವ ಮತ್ತು ಅಧಿಕಾರಿಗಳಿಗೆ ಪ್ರತಿರೋಧ ಒಡ್ಡುವ ವ್ಯಕ್ತಿಯನ್ನು ಬಂಧಿಸುವುದಕ್ಕೆ, ಅಂತಹ ವ್ಯಕ್ತಿಯು ತಪ್ಪಿಸಿಕೊಳ್ಳದಂತೆ ತಡೆಯುವುದಕ್ಕೆ? ಇಂತಹ ಸಂದರ್ಭಗಳನ್ನು ಬಿಟ್ಟು ಕಾನೂನುಪಾಲಕ ಅಧಿಕಾರಿಗಳು ಎಂದೂ ಶಸ್ತ್ರಾಸ್ತ್ರಗಳನ್ನು ಬಳಸುವಂತಿಲ್ಲ ಹಾಗೂ ಇಂತಹ ಸಂದರ್ಭಗಳನ್ನು ನಿಭಾಯಿಸಲು ಕಡಿಮೆ ಅತಿರೇಕದ ಕ್ರಮಗಳು ಸಾಕಾಗುವುದಿಲ್ಲ ಎಂದಾಗ ಮಾತ್ರ ಶಸ್ತ್ರಾಸ್ತ್ರಗಳನ್ನು ಬಳಸಬೇಕು. ಅಂದರೆ ಯಾವುದೇ ಸಂದರ್ಭದಲ್ಲಿ ಜೀವರಕ್ಷಣೆಗೆ ಬೇರಾವುದೇ ಮಾರ್ಗಗಳಿಲ್ಲದಿದ್ದಾಗ ಮಾತ್ರ ಮರಣಾಘಾತುಕ ಶಸ್ತ್ರಾಸ್ತ್ರಗಳನ್ನು ಉದ್ದೇಶಪೂರ್ವಕವಾಗಿ ಬಳಸುವುದಕ್ಕೆ ಅವಕಾಶವಿದೆ ಎಂಬುದೇ ನಿಯಮಗಳು."

ಈ ನಿಯಮಗಳು ಎಲ್ಲಾ ಸಂದರ್ಭಗಳಿಗೂ ಅನ್ವಯವಾಗುತ್ತವೆ. ಆದರೂ ಪೊಲೀಸರು ನಡೆಸುವ ಕೊಲೆಗಳು ಹೆಚ್ಚಾಗುತ್ತಲೇ ಇವೆ. ಇದಕ್ಕೆ ಪ್ರಧಾನ ಕಾರಣಗಳೆಂದರೆ ಕಾನೂನಿನ ಆಡಳಿತದ ಬಗ್ಗೆ ಪೊಲೀಸರಿಗಿರುವ ಗೌರವದ ಕೊರತೆ ಮತ್ತು ಅವರು ಮಾಡುವ ಎಲ್ಲಾ ಅಪರಾಧಗಳ ಕುರಿತಂತೆ ಅವರಿಗಿರುವ ನಿರ್ಭೀತಿ. ಗಲಭೆಗಳ ಸಂದರ್ಭಗಳಲ್ಲಿ ಪೊಲೀಸರು ಮನಸೋ ಇಚ್ಛೆ ಹೊಡೆಯುತ್ತಾ, ಗುಂಡುಹಾರಿಸುತ್ತಾ ಜನರನ್ನು ಕೊಲ್ಲುತ್ತಾರೆ; ಅವರಲ್ಲಿ ಬಹುತೇಕರು ಹಾದಿಯಲ್ಲಿ ಸುಮ್ಮನೇ ನಿಂತ ಮುಗ್ಧರೋ, ದುರ್ಬಲರೋ ಅಥವಾ ವೃದ್ಧರೋ ಆಗಿರುತ್ತಾರೆ. ಹಾಗೆಯೇ ಎನ್‌ಕೌಂಟರ್‌ಗಳಲ್ಲೂ ಪೊಲೀಸರು ಜನರನ್ನು ಕೊಲ್ಲುತ್ತಾರೆ ಅಥವಾ ತಮ್ಮ ಕಸ್ಟಡಿಯಲ್ಲಿದ್ದ ಜನರನ್ನು ಕೊಂದು ಅವರು ಸತ್ತು ಹೋದರೆಂದೋ ಅಥವಾ ಕಾಣೆಯಾದರೆಂದೋ ಹೇಳಿಬಿಡುತ್ತಾರೆ. ಇಂತಹ ಎಲ್ಲಾ ಸಂದರ್ಭಗಳಲ್ಲೂ ಯಾವುದೇ ಪೊಲೀಸರನ್ನು ಗಂಭೀರವಾಗಿ ವಿಚಾರಣೆಗೊಳಪಡಿಸಿ ಶಿಕ್ಷಿಸಿರುವ ಉದಾಹರಣೆಗಳಿಲ್ಲ.

ಮಾರ್ಚ್ 1992ರಲ್ಲಿ, ಆಮ್ನೆಸ್ಟಿ ಇಂಟರ್‌ನ್ಯಾಷನಲ್ 'ಕಸ್ಟಡಿಯಲ್ಲಿ ಚಿತ್ರಹಿಂಸೆ, ಅತ್ಯಾಚಾರ ಮತ್ತು ಸಾವುಗಳು' ಎಂಬ ಶೀರ್ಷಿಕೆಯಿರುವ ವರದಿಯೊಂದನ್ನು ಹೊರತಂದಿತು. ಅದರಲ್ಲಿ ಜನವರಿ 1985 ಮತ್ತು ನವೆಂಬರ್ 1991ರ ನಡುವಿನ ಅವಧಿಯಲ್ಲಿ ಭಾರತದಲ್ಲಿ ಜರುಗಿದ 415 ಕಸ್ಟೋಡಿಯಲ್ ಕೊಲೆಗಳನ್ನು ಪಟ್ಟಿ ಮಾಡಲಾಗಿತ್ತು, ಹಾಗೆಯೇ ಅದರಲ್ಲಿ ಬಂಧನದ ಸಂದರ್ಭ ಮತ್ತು ಸಾವಿಗೆ ಸಂಬಂಧಿಸಿದ ಎಲ್ಲಾ ವಿವರಣೆಗಳನ್ನು ನೀಡಲಾಗಿತ್ತು, ಅದರಲ್ಲಿದ್ದ ಅಂಕಿಅಂಶಗಳನ್ನು ಪ್ರಾರಂಭದಲ್ಲಿ ಸರ್ಕಾರ ನಿರಾಕರಿಸಿತಾದರೂ ನಂತರದಲ್ಲಿ ವಿಚಾರಣೆ ಮಾಡಿದಾಗ ವರದಿಯಲ್ಲಿ ಹೇಳಿದ್ದೆಲ್ಲವೂ ಸತ್ಯವಾಗಿದ್ದುದು ಕಂಡುಬಂದಿತ್ತು, ಆದರೆ ಕೊನೆಗೂ ಉಳಿಯುವ ಪ್ರಶ್ನೆಯೆಂದರೆ, ಈ ಕೊಲೆಗಳನ್ನು ಮಾಡಿದ ಪೊಲೀಸರಲ್ಲಿ ಎಷ್ಟು ಜನರನ್ನು ವಿಚಾರಣೆಗೊಳಪಡಿಸಿ ಶಿಕ್ಷಿಸಲಾಯಿತು ಎಂಬುದು. ಪ್ರಾಯಶಃ ಒಬ್ಬರನ್ನೂ ಇಲ್ಲ.

1992-93ರ ಬಾಬ್ರಿ ಮಸೀದಿ ಧ್ವಂಸದ ನಂತರ ಬಾಂಬೆಯಲ್ಲಿ ನಡೆದ ಗಲಭೆಗಳಲ್ಲಿ ಸುಮಾರು 785 ಜನರು ಸಾವಿಗೀಡಾದರು ಎಂಬುದು ಸರ್ಕಾರದ ಅಧಿಕೃತ ಅಂದಾಜು; ಇದು ವಾಸ್ತವದಲ್ಲಿ ನಡೆದ ಕೊಲೆಗಳ ಅಲ್ಪ ಅಂದಾಜಲ್ಲದೇ ಮತ್ತೇನಲ್ಲ, ನಾನು ಮತ್ತು ಜಸ್ಟೀಸ್ ಎಸ್.ಎಮ್. ದೌದ್ (ನಿವೃತ್ತ) ಸೇರಿ ಸಿದ್ಧಪಡಿಸಿದ 'ಜನರ ತೀರ್ಪು' ಎಂಬ ಸ್ವತಂತ್ರ ವರದಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಸಾವುಗಳಾಗಿದ್ದವು ಎಂದು ದಾಖಲಿಸಿದ್ದೆವು; ಅದರಲ್ಲಿ ಶೇ. 50ಕ್ಕಿಂತ ಹೆಚ್ಚಿನ ಸಾವುಗಳು ಸಂಭವಿಸಿದ್ದು ಪೊಲೀಸರು ನಡೆಸಿದ ಗೋಲಿಬಾರ್‌ನಿಂದ ಎಂದು ಬರೆದಿದ್ದೆವು. ನಮ್ಮ ವರದಿಯಲ್ಲಿ ನಾವು ಕರ್ತವ್ಯಚ್ಯುತಿ ಎಸಗಿದ ಮತ್ತು ಘಟನೆಗಳಿಗೆ ಕಾರಣರಾದ ಸುಮಾರು 73 ಪೊಲೀಸರನ್ನು ಗುರುತಿಸಿದ್ದೆವು. ಇವುಗಳಲ್ಲಿನ ಬಹುತೇಕ ಹೆಸರುಗಳನ್ನು ತದನಂತರದಲ್ಲಿ ಬಂದ ಅಧಿಕೃತ ಶ್ರೀಕೃಷ್ಣ ಆಯೋಗದ ವರದಿಯೂ ದೃಢಪಡಿಸಿತ್ತು, ಅಪರಾಧವೆಸಗಿದ ಪೊಲೀಸರ ಪಟ್ಟಿಯಲ್ಲಿ ಜಂಟಿ ಪೊಲೀಸ್ ಕಮೀಷನರ್ ಆರ್.ಡಿ. ತ್ಯಾಗಿ ಕೂಡ ಇದ್ದರು. ಇವರೆಲ್ಲರ ವಿರುದ್ಧ ಕೊಲೆ ಮತ್ತು ಕೊಲೆಯತ್ನಗಳ ಆರೋಪಗಳಡಿಯಲ್ಲಿ ಕಾನೂನುಕ್ರಮ ಜರುಗಿಸಬೇಕೆಂದು ನ್ಯಾಯಮೂರ್ತಿ ಶ್ರೀಕೃಷ್ಣರವರು ನಿರ್ದೇಶಿಸಿದ್ದರು. ಆದರೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ, ಇದಾದ ಬಹಳ ಕಾಲದ ನಂತರ, ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೂಡಿದ ನಂತರ, ಆರ್.ಡಿ. ತ್ಯಾಗಿಯವರ ವಿರುದ್ಧ ಬಿಲ್ಡಿಂಗ್ ಒಂದರಲ್ಲಿ ನಾಲ್ಕು ಕೆಲಸಗಾರರನ್ನು ಕೊಂದ ಆರೋಪದ ಮೇಲೆ ಕೇಸು ದಾಖಲಿಸಲಾಯಿತು, ಆದರೂ, ತಾಂತ್ರಿಕ ದೋಷದ ಆಧಾರದ ಮೇಲೆ ಸೆಷನ್ಸ್ ಕೋರ್ಟ್ ತ್ಯಾಗಿಯವರನ್ನು ಆರೋಪಮುಕ್ತಗೊಳಿಸಿತು.


ಮುಂಬಯಿಯ ರಮಾಭಾಯಿ ಕಾಲೋನಿ ಘಟನೆಯಲ್ಲಿ

...ಹಳ್ಳಿ ಮನುಷ್ಯರಿಂದ ಶೂನ್ಯವಾಗಿ, ಅನಾಥವಾಗಿ ಬಿದ್ದಿತ್ತು. ...ಭಕ್ಷಕಿಯ ಕಾಟ ಆರಂಭವಾದ ಎಷ್ಟೋ ದಿನಗಳು ...ವನ ಹಿಡಿದು ಬದುಕಿದ್ದ ಹಳ್ಳಿಯ ಜನ ದಿನವೂ ...ಹುಲಿ ಹಾಜರಿ ಹಾಕುವುದನ್ನು ಮುಂದುವರೆಸಿದಾಗ ...ವರ ಸಹವಾಸವೇ ಬೇಡವೆಂದು ಹಳ್ಳಿಯನ್ನು ತೊರೆದು ಹೋಗಿದ್ದರು. ಈ ಹಳ್ಳಿ ಕಣಿವೆಯು ತುಂಬಾ ಇಳಿಜಾರಾ...ದ್ದ ಜಾಗದಲ್ಲಿತ್ತು. ಈ ಇಳಿಜಾರಿನ ತುಂಬಾ ದಟ್ಟವಾದ ...ಡು ಹಬ್ಬಿತ್ತು. ನಾನು ಹಿಂತಿರುಗುವಾಗ ಈ ಕಾಡಿನ ...ಟ್ಟಣೆಯ ನಡುವೆಯೇ ಸಾಗುತ್ತಿದ್ದ ಕಾಲುದಾರಿಯಲ್ಲಿ ಹೋಗಬೇಕಾಗಿತ್ತು. ಈ ಕಾಲುದಾರಿ ಸುಮಾರು ದೂರ...ಗಿ ಇನ್ನೊಂದು ಕಾಡು ರಸ್ತೆಯನ್ನು ಕೂಡಿಕೊಳ್ಳುತ್ತಿತ್ತು. ...ವಕ್ಕೆ ಇನ್ನೂರು ಗಜ ಮುಂಚೆ ರಸ್ತೆ ಹಿಮ್ಮುರಿಯಾಗಿ ...ರುಗುತ್ತಿತ್ತು. ಈ ತಿರುವಿನಿಂದ ಸ್ವಲ್ಪ ಮುಂದೆ ಒಂದು ...ವಿದಾದ ಬಂಡೆಯಿತ್ತು. ಇದರ ಸುತ್ತಮುತ್ತ ಬಹುದೂರದ...ರೆಗೂ ದಟ್ಟವಾದ ಪೊದೆಗಳು ಗಿಡಿದುಕೊಂಡಿದ್ದವು. ...ನು ಈ ಬಂಡೆಗೆ ಹತ್ತಿರಾಗುತ್ತಿದ್ದಂತೆ ನನ್ನ ಮನಸ್ಸು ...ಕುನ ಸದೃಶವಾಗಿ ಭೀತಿಗೊಳಗಾಯಿತು. ನಾನು ...ಜೀವಾಪಾಯದಲ್ಲಿದ್ದೇನೆಂದು ಅನುಮಾನಿಸತೊಡಗಿತು.

ಈ ದಾರಿಯಲ್ಲಿ ನಾನು ಅನೇಕ ಬಾರಿ ಓಡಾಡಿದ್ದೇನೆ. ...ವರೆ ಇಂದೇಕೋ ಆ ಬಂಡೆಯನ್ನು ದಾಟಲು ನನ್ನ ...ಮನಸ್ಸು ಹಿಂದೇಟು ಹೊಡೆಯುತ್ತಿತ್ತು. ಈ ಬಂಡೆಯನ್ನು ...ಟ್ಟು ಬೇರೆ ದಾರಿ ಹಿಡಿಯಬೇಕೆಂದರೆ ಅದಿನ್ನೂ ಭೀಕರ...ವಾಗಿತ್ತು. ಈ ಮೂಲಕ ಹೋದರೆ ನನ್ನ ದೂರ ದ್ವಿಗುಣ...ಗೊಳ್ಳುವುದಲ್ಲದೆ ಅಲ್ಲಿನ ಜೀವಾಪಾಯವನ್ನು ಊಹಿಸು...ವುದೂ ಸಾಧ್ಯವಿರಲಿಲ್ಲ. ಆ ಬಂಡೆಯಾಚೆಗೆ ಹುಲಿ ...ಇದೆಯೋ ಇಲ್ಲವೋ ಆ ವಿಷಯ ಬೇರೆ... ನಾನು ...ಅದನ್ನು ಆದಷ್ಟು ಬೇಗ ದಾಟ ನಡೆಯಲೇಬೇಕಿತ್ತು. ನನ್ನ ಮುಂದೆ ಎರಡು ಮೂರು ಮೈಲಿಗಳ ದಾರಿ ಬಿದ್ದಿತ್ತು. ಸೂರ್ಯ ಆಗಲೇ ದಿಗಂತದಲ್ಲಿ ಕೂತು ಕ್ಷಣಗಣನೆ ಆರಂಭಿ...ದ್ದ. ಹೀಗಾಗಿ ಇಷ್ಟವಿರಲಿ ಬಿಡಲಿ ನನ್ನ ಪ್ರಯಾಣ ಮುಂದುವರಿಯಲೇ ಬೇಕಾಗಿತ್ತು. ನನ್ನ ಎಡಕ್ಕಿದ್ದ ದಟ್ಟ ಪೊದೆಗಳ ಬಗ್ಗೆ ನನಗೆ ಹೆಚ್ಚು ಭಯವಿರಲಿಲ್ಲ. ನಾನು ...ಧಾನವಾಗಿ ಬಂಡೆಯ ಕಡೆಗೆ ಮುಖಮಾಡಿ, ಬಂದೂಕ...ವನ್ನು ಸಿದ್ಧವಾಗಿಟ್ಟುಕೊಂಡು ಅಡ್ಡಡ್ಡವಾಗಿ ಹೆಜ್ಜೆ ಎತ್ತಿಡುತ್ತಾ ಹೊರಟೆ. ಬಂಡೆ ಮುಗಿಯದಿದ್ದರೂ, ಅದರಿಂದ ಮೂವತ್ತು ...ಜ ದೂರದಲ್ಲಿದ್ದ ಒಂದು ತೆರವು ಕಾಣುತ್ತಿತ್ತು. ಅಲ್ಲೊಂದು ಕಾಡು ಮೇಕೆ ಮೇಯುತ್ತಿತ್ತು. ಅದು ನನ್ನನ್ನು ನೋಡುವುದಕ್ಕೆ ಮುಂಚೆ ನಾನು ಅದನ್ನು ನೋಡಿದೆ. ತಕ್ಷಣ ಅದೂ ನನ್ನನ್ನು ನೋಡಿತು. ನಾನು ಅದನ್ನು ನೋಡಿಲ್ಲದಂತೆ ನಟಿಸುತ್ತಾ ಎತ್ತಲೋ ತಿರುಗಿಕೊಂಡೆ. ಅದು ಸೀನುತ್ತಾ, ತಲೆ ಒದರುತ್ತಾ ಅಲ್ಲೇ ನಿಂತಿತು. ಸಾಮಾನ್ಯವಾಗಿ ನಾವು ಅದನ್ನು ನೋಡಿಲ್ಲ ಎಂದು ಅನಿಸಿದರೆ ಕೆಲವು ಪ್ರಾಣಿಗಳು ಹೀಗೆ ವರ್ತಿಸುತ್ತವೆ. ನಾನು ಹಾಗೇ ಮುಂದುವರಿದು ಹಿಮ್ಮುರಿ ತಿರುವಿನಲ್ಲಿಗೆ ಬಂದು ಸಾವಕಾಶವಾಗಿ ತಿರುಗಿಕೊಂಡೆ. ಆಗ ನನ್ನ ಭುಜ ಮಟ್ಟದಲ್ಲಿ ಮತ್ತೆ ಕಾಡು ಮೇಕೆ ಕಾಣುತ್ತಿತ್ತು. ನಾನು ಅತ್ತ ನೋಡುವುದಕ್ಕೂ... ಅದು ಜೀವ ಹೋಗುವಂತೆ ಅರಚಿಕೊಳ್ಳುತ್ತಾ ನುಗ್ಗಿ ಓಡುತ್ತಿರುವುದಕ್ಕೂ ಒಂದೇ ಆಯಿತು. ಖಂಡಿತಾ ಅದು ನನ್ನನ್ನು ನೋಡಿರುವುದು ಸಾಧ್ಯವಿರಲಿಲ್ಲ. ನಾನು ಅದರ ದೃಷ್ಟಿ ವಲಯದಿಂದ ತುಂಬಾ ಪಕ್ಕಕ್ಕಿದ್ದೆ.

ಹಾಗೆಂದುಕೊಳ್ಳುವಷ್ಟರಲ್ಲಿ ಮೇಕೆ ಓಡಿಹೋದ ರಸ್ತೆ ಕಡೆಯ ಪೊದೆಯ ಮೇಲೆ ಕುಳಿತಿದ್ದ ಹಕ್ಕಿಗಳ ಹಿಂಡು ಬರ್ರನೆ ಎದ್ದು ಹಾರಿತು. ಅದೇಕ್ಷಣ ಪೊದೆಗಳ ನಡುವೆ ಜೀವಿಯೊಂದರ ಅಸ್ಪಷ್ಟ ಚಲನೆ ಕಾಣಿಸಿತು. ಹಾಗಾಗಿ ಮೇಕೆ ಮತ್ತು ಹಕ್ಕಿಗಳು ಸುಮ್ಮನೆ ಹಾರಿ ಹೋಗಿಲ್ಲ ಎಂಬ ಗುಮಾನಿ ಹುಟ್ಟಿತು. ಇದನ್ನು ಸರಿಯಾಗಿ ತಿಳಿಯದ ಹೊರತು ಇಲ್ಲಿಂದ ಮುಂದೆ ಸಾಗುವುದು ಮತ್ತೂ ಅಪಾಯಕಾರಿಯಾಗಿತ್ತು. ನಾನು ಬಂದ ರೀತಿಯಲ್ಲೇ ಹಿಂದಕ್ಕೆ ನಡೆದೆ.

ಬಂಡೆಯ ಸೊಂಟದ ಬಳಿ ತಿರುವು ಹಿಮ್ಮುರಿಯಾಗಿ ತಿರುಗುವಲ್ಲಿನ ಇಕ್ಕಟ್ಟಾದ ಕಿಬ್ಬಿಯಂಥ ಜಾಗದಲ್ಲಿ ಬೆಟ್ಟದ ಮೇಲಿನಿಂದ ಜಿನುಗುತ್ತಿದ್ದ ನೀರು ರಸ್ತೆಯ ಮೇಲಿಂದ ಹರಿದು ಬಂಡೆಯ ಅಂಚಿನಲ್ಲೇ ಸಾಗುತ್ತಿತ್ತು. ಇಲ್ಲಿ ನೆಲವೆಲ್ಲಾ ಕೆಸರಾಗಿರುತ್ತದೆ. ಈ ನೆಲ ಜೇಡಿಮಣ್ಣಿನಂತಹ ಜಿಗುಟಾದ ಜಾರುವ ಗುಣದ್ದು. ಹಾಗಾಗಿ ನಾನು ಬರುವಾಗ ಎಚ್ಚರಿಕೆಯಿಂದ ದೃಢವಾದ ಹೆಜ್ಜೆಗಳನ್ನಿಟ್ಟುಕೊಂಡು ಬಂದಿದ್ದೆ. ಈ ಕೆಸರಿನ ಮೇಲೆ ನನ್ನ ಹೆಜ್ಜೆ ಗುರುತುಗಳು ಚೆನ್ನೆ ಹೊಡೆದಂತೆ ಮೂಡಿದ್ದವು. ಈಗ ಹಿಂತಿರುಗಿ ಹೋಗಿ ನೋಡುವಾಗ ನನ್ನ ಹೆಜ್ಜೆಗಳ ಮೇಲೆ ಹುಲಿಯ ಹೆಜ್ಜೆ ಗುರುತು ಮುದ್ರೆ ಹೊಡೆದಂತೆ ಮೂಡಿದ್ದವು. ನನಗಾಗಿ ಹೊಂಚು ಹಾಕಿ ಕುಳಿತಿದ್ದ ಹುಲಿ ನಾನು ತಿರುವನ್ನು ತಿರುಗುತ್ತಿದ್ದಂತೆ ನೆಟ್ಟಗೆ ರಸ್ತೆಗೆ ಹಾರಿ, ನನ್ನನ್ನು ಹಿಂಬಾಲಿಸಿಕೊಂಡು ಬಂದಿತ್ತು. ಅದರ ದುರಾದೃಷ್ಟ ಇದು ಎಗರಿದ್ದನ್ನು ಮೇಕೆ ಕಂಡುಬಿಟ್ಟಿದೆ. ಅದು ನನ್ನ ಗಮನಕ್ಕೆ ಬರುವ ಹೊತ್ತಿನಲ್ಲಿ ವಿಚಲಿತವಾದ ಹುಲಿ ತಕ್ಷಣ ತಿರುವಿನ ಅಂಚಿನಲ್ಲಿದ್ದ ಪೊದೆಯೊಳಕ್ಕೆ ತೂರಿ ಹೋಗಿದೆ. ಆಗಲೇ ಅಲ್ಲಿದ್ದ ಹಕ್ಕಿಗಳು ಬೆಚ್ಚಿಬಿದ್ದು ಹಾರಿವೆ. ಇದು ನನ್ನ ಬೆನ್ನಹಿಂದೆ ನಡೆದಿರುವ ಕತೆ. ಇಷ್ಟನ್ನೂ ಹುಲಿಯ ಹೆಜ್ಜೆಗುರುತುಗಳು ಹೇಳುತ್ತಿದ್ದವು.



ಈ ಪ್ರದೇಶದ ಒಂದೊಂದು ಅಂಗುಲ ಜಾಗವೂ ಚಿರಪರಿಚಿತವಾಗಿರುವ ಹುಲಿ ಅತ್ಯಂತ ಆಯಕಟ್ಟಿನ ಜಾಗವನ್ನೇ ಆರಿಸಿಕೊಂಡಿತ್ತು. ಈಗ ಅದರ ಯೋಜನೆ ಏನಿರಬಹುದೆಂದು ಅಂದಾಜು ಮಾಡಬಹುದು... 'ಇಲ್ಲಿ ತಪ್ಪಿಸಿಕೊಂಡರೇನಂತೆ..., ಮುಂದೆ ಬಾ..., ಅಲ್ಲಿ ಇದಕ್ಕಿಂತ ದುರ್ಗಮವಾದ ಇನ್ನೊಂದು ತಿರುವಿದೆಯಲ್ಲಾ... ಅಲ್ಲಿಂದ ಹೇಗೆ ತಪ್ಪಿಸಿಕೊಳ್ಳುತ್ತೀ?' ಎಂದು ಮುಂದಿನ ತಿರುವಿನಲ್ಲಿ ಕಾಯಲು ಹೋಗಿರಬಹುದೇ?

ಇದೇ ಮಾರ್ಗದಲ್ಲಿ ಮುಂದುವರಿದು ಎರಡನೇ ತಿರುವಿನಲ್ಲಿ ಮತ್ತೆ ಜೀವನನ್ನು ಹುಲಿಯ ದವಡೆಗೆ ಒಪ್ಪಿಸಿ, ಅದರ ಕನಿಕರದಲ್ಲಿ ಮುಂದೆ ಹೋಗುವುದು ಯಾವ ದೃಷ್ಟಿಯಿಂದಲೂ ಸಮರ್ಥನೀಯವಾಗಿರಲಿಲ್ಲ. ತಕ್ಷಣ ನಾನು ನನ್ನ ಜಾಡನ್ನು ಬದಲಿಸಿ, ಕಾಡು ಮೇಕೆ ಕಂಡಿದ್ದ ಬಯಲಿನತ್ತ ಹುಲಿ ಇಳಿದ ಜಾಗದಿಂತ ಹಿಂದೆಯೇ ಕಾಡೊಳಕ್ಕೆ ಇಳಿದು ಹೊರಟೆ. ಸ್ವಲ್ಪ ಕಷ್ಟಪಟ್ಟು ಮುಂದುವರಿದು ಬಯಲನ್ನು ದಾಟುವುದಾದರೆ ಈಗ ನಾನು ಹೋಗಲಿದ್ದ ರಸ್ತೆಯನ್ನು ಮುಂದೆ ತುಂಬಾ ದೂರದಲ್ಲಿ ಕೂಡಿಕೊಳ್ಳಬಹುದಿತ್ತು. ಹುಲಿ ನನ್ನ ಬೆನ್ನು ಹತ್ತಿರುವುದು ಗ್ಯಾರಂಟಿಯಾದರೂ ಈಗಾಗಲೇ ಮುಂದಿನ ತಿರುವಿನತ್ತ ಸಾಗಿರುವ ಹುಲಿಗೆ ಸಂದೇಹವೂ ಬರುವುದಿಲ್ಲ. ಸದ್ಯಕ್ಕೆ ನನಗೆ ಬೆಳಕಿನ ಬೆಂಬಲವಂತೂ ಇದೆ. ಸ್ವಲ್ಪ ಹೊತ್ತು ಕಳೆದರೆ ಅದು ಹುಲಿಯ ಬೆಂಬಲಕ್ಕೆ ನಿಲ್ಲುತ್ತದೆ. ಆಗಂತೂ ಯಾರೂ ನನ್ನನ್ನು ಕಾಪಾಡಲಾರರು. ಈ ಎಲ್ಲಾ ದೃಷ್ಟಿಗಳಿಂದಲೂ ನನ್ನ ನಿರ್ಧಾರ ಸರಿಯಾಗಿತ್ತು.

ಮನುಷ್ಯನೊಬ್ಬನಿಗೆ ಈ ಅಪಾಯದ ಮುನ್ಸೂಚನೆ ಸಿಗುವ ಬಗ್ಗೆಯೇ ನನಗೆ ವಿಚಿತ್ರವಾದ ಗುಮಾನಿಗಳಿವೆ. ಅದು ಹೇಗೆ ನಮ್ಮ ಮನಸ್ಸಿಗೆ ಹಾಗನಿಸುತ್ತದೆ? ಎಂದು ಇಂದಿಗೂ ಇದು ನನಗೆ ಗೊತ್ತಿಲ್ಲ. ಇದನ್ನು ಯಾವ ಭೌತಿಕ ಸಾಕ್ಷಿಗಳ ಮೂಲಕವೂ ವಿವರಿಸಲಾರೆ. ಹೀಗೆ ನನಗೆ ಅನಿಸುತ್ತದೆ ಅಷ್ಟೇ!! ಇದಕ್ಕಿಂತ ಹೆಚ್ಚು ಹೇಳಲಾರೆ. ಈಗ ಆಗಿದ್ದೂ ಹಾಗೇ. ನಾನು ಈ ಬಂಡೆಯನ್ನು ಸಮೀಪಿಸುವುದಕ್ಕೆ ಮುಂಚೆ ಇತ್ತ ನಾನು ಹುಲಿಯನ್ನೂ ಕಂಡಿರಲಿಲ್ಲ, ಅತ್ತ ಯಾವ ಪಶುಪಕ್ಷಿಗಳೂ ನನಗೆ ಈ ಬಗ್ಗೆ ಸೂಚನೆ ಕೊಟ್ಟಿರಲಿಲ್ಲ. ಆದರೆ ಅನುಮಾನದ ಲವಲೇಶವೂ ಇಲ್ಲದಂತೆ ನನಗೆ ಖಚಿತವಾಗಿ ಈ ಬಂಡೆ ಹಿಂದೆ ಹುಲಿ ಇದೆ ಅನಿಸುತ್ತಿತ್ತು. ಅಂದು ನಾನು ಬೆಳಗಿನ ಜಾವದಿಂದ ಹತ್ತಾರು ಮೈಲಿ ಅಪಾಯಕಾರಿ ಕಾಡಿನ ದಾರಿಗಳಲ್ಲಿ ತಿರುಗಿದ್ದೆ. ಎಲ್ಲಿಯೂ ನನಗೆ ಹೀಗೆ ಅನ್ನಿಸಿರಲಿಲ್ಲ. ಈ ಬಂಡೆಯ ಬಳಿಗೆ ಬಂದಾಗಲೇ ಏಕೆ ನನಗೆ ಹಾಗೆ ಅನ್ನಿಸಿತೋ ಗೊತ್ತಿಲ್ಲ. ನನ್ನ ಊಹೆ ತಪ್ಪಾಗಿದ್ದರೆ ನನ್ನ ಹೆಜ್ಜೆಯಮೇಲೆ ಹುಲಿ ಹೆಜ್ಜೆಯ ಮುದ್ರೆಗಳು ಬಿದ್ದಿರುತ್ತಿರಲಿಲ್ಲ. ಹೀಗೆ ನನಗೆ ಅನೇಕ ಬಾರಿ ಆಗಿದೆ.

(ಮುಂದುವರಯುತ್ತದೆ)

ವಿಶೇಷ ಲೇಖನ

ನ್ಯಾಯಮೂರ್ತಿ ಹೊಸ್ಬೆಟ್ ಸುರೇಶ್ (ನಿವೃತ್ತ)



1997ರ ಜುಲೈ 11ರಂದು (ಅಂಬೇಡ್ಕರ್ ಪ್ರತಿಮೆಗೆ ...ಚಪ್ಪಲಿ ಹಾರ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ) ...ಬ್ ಇನ್ಸ್‌ಪೆಕ್ಟರ್ ಕದಮ್ ಎಂಬುವವರು 8-10 ಜನ ...ನ್‌ಸ್ಟೇಬಲ್‌ಗಳ ಜೊತೆಗೂಡಿ ಮನಸೋಯಿಚ್ಛೆ ಗುಂಡು ...ಹಾರಿಸಿ ಹತ್ತು ಜನ ದಲಿತರನ್ನು ಕೊಂದರಲ್ಲದೆ ಇನ್ನಿತರ ...ಹದಿನಾಲ್ಕು ಜನರನ್ನು ತೀವ್ರವಾಗಿ ಗಾಯಗೊಳಿಸಿದರು. ...ವ್ರ ಪ್ರತಿಭಟನೆಗಳ ಕಾರಣ ಸರ್ಕಾರ ಅವರ ಮೇಲೆ ...ನಿವಾರ್ಯವಾಗಿ ಕೇಸು ದಾಖಲಿಸುವ ಒತ್ತಡಕ್ಕೀಡಾ...ಯಿತು. ಆದರೂ, ಘಟನೆ ನಡೆದ ಹತ್ತು ವರ್ಷಗಳ ...ನಂತರವೂ ಈ ಕೇಸನ್ನು ವಿಚಾರಣೆಗಾಗಿ ಕೈಗೆತ್ತಿಕೊಂಡಿಲ್ಲ.

ಕಸ್ಟೋಡಿಯಲ್ ಸಾವುಗಳ ಕಥೆಯೂ ಇದೇ. ...ಪಂಜಾಬ್‌ನಲ್ಲಿ 1984 ರಿಂದ 94ರ ಸಂಕ್ಷೋಭೆಯ ...ದಿನಗಳಲ್ಲಿ ಭಾರಿ ಪ್ರಮಾಣದಲ್ಲಿ ಕಸ್ಟೋಡಿಯಲ್ ...ಸಾವುಗಳಾದವು. ಮಧ್ಯರಾತ್ರಿಯ ರೇಡ್‌ಗಳಲ್ಲಿ ಪೊಲೀಸರು ...ಮನೆಗಳಿಂದ ಎತ್ತಿಕೊಂಡು ಹೋದ ಅನೇಕ ಜನ ...ನಂತರದಲ್ಲಿ 'ಕಾಣೆಯಾಗಿ'ಬಿಟ್ಟರಷ್ಟೆ. ಕೆಲ ಪ್ರಕರಣಗಳಲ್ಲಿ ...ಅವರ ಹೆಣಗಳನ್ನು ರಸ್ತೆಯಲ್ಲಿ ಬಿಸಾಡಲಾಗಿತ್ತು, ಮತ್ತೆ ...ಕೆಲವು ಶವಗಳನ್ನು 'ಎನ್‌ಕೌಂಟರ್‌ನಲ್ಲಿ ಸತ್ತ ...ಭಯೋತ್ಪಾದಕರು' ಎಂಬ ಹಣೆಪಟ್ಟಿಯೊಂದಿಗೆ ಅವರವರ ...ಮನೆಗಳಿಗೆ ಹಿಂತಿರುಗಿಸಲಾಗಿತ್ತು. ಭಾರಿ ಪ್ರಮಾಣದ ...ಶವಗಳನ್ನು ವಾರಸುದಾರರಿಲ್ಲದ ಶವಗಳು ಎಂದು ಹೇಳಿ ...ಸ್ಮಶಾನದಲ್ಲಿ ಸುಟ್ಟು ಹಾಕಲಾಯಿತು. ರಾಷ್ಟ್ರೀಯ ಮಾನವ ...ಹಕ್ಕುಗಳ ಆಯೋಗವು ಅಮೃತಸರ್ ಜಿಲ್ಲೆಯೊಂದರಲ್ಲಿಯೇ ...ಅಂತಹ ಸುಮಾರು 2,059 ಶವಗಳನ್ನು ಪತ್ತೆ ಮಾಡಿತು; ...ಅವುಗಳಲ್ಲಿ 1,245 ಶವಗಳು ಇದಕ್ಕೂ ಮೊದಲು ...'ಕಾಣೆಯಾದವರು' ಎಂಬ ಹಣೆಪಟ್ಟಿ ಹೊತ್ತವರವೇ ...ಆಗಿದ್ದವು. ಇಂತಹುದೇ ಶವಗಳು ಇನ್ನಿತರ ಜಿಲ್ಲೆಗಳಲ್ಲಿಯೂ ...ಕಂಡುಬಂದವು; ಆದರೆ ದುರದೃಷ್ಟವಶಾತ್ ಈ ...ಪ್ರದೇಶಗಳಲ್ಲಿ ಸರಿಯಾದ ತನಿಖೆಗಳೇ ನಡೆಯಲಿಲ್ಲ, ಈ ...ವರೆಗೂ ಕೂಡ. ಇವೆಲ್ಲವೂ ಕೆ.ಪಿ.ಎಸ್. ಗಿಲ್ ಮತ್ತು ...ಅವರ ಗುಂಪಿಗೆ ಸೇರಿದ ಅಧಿಕಾರಿಗಳ ನಿರ್ದೇಶನಕ್ಕನುಗುಣ...ವಾಗಿ ನಡೆಸಲಾದ ನ್ಯಾಯಬಾಹಿರ ಕೊಲೆಗಳೇ ಆಗಿದ್ದವೆಂಬು...ದಂತೂ ಸ್ಪಷ್ಟ. ಯಾರನ್ನು ಬಂಧಿಸಬೇಕು, ಯಾರನ್ನು ...ವಿಚಾರಣೆಗೆ ಒಳಪಡಿಸಬೇಕು, ಯಾರನ್ನು ಶಿಕ್ಷಿಸಬೇಕು ...ಎಂಬುದನ್ನು ಅವರೇ ನಿರ್ಧರಿಸಿದರು. ಅದನ್ನೆಲ್ಲಾ ಅವರು ...ಬಂದೂಕಿಯಿಂದ ಒಂದೇ ಬಾರಿಗೆ ಮಾಡಿ ಮುಗಿಸಿಬಿಟ್ಟರು.

ಅಂತಾರಾಷ್ಟ್ರೀಯ ಮಾನವಹಿತ ಕಾನೂನಿನಡಿಯಲ್ಲಿ ...'ಕಣ್ಮರೆಗೊಳಿಸುವಿಕೆ' ಹಾಗೂ ನ್ಯಾಯಬಾಹಿರವಾಗಿ ಕೊಲೆ...ಗಳನ್ನು ಮಾಡುವ ವ್ಯವಸ್ಥಿತ ಆಚರಣೆಗಳೆಲ್ಲವೂ ಮಾನುಕುಲ ...ವಿರೋಧಿ ಅಪರಾಧಗಳು ಎಂದು ಪರಿಗಣಿಸಲಾಗುತ್ತದೆ. ...ಇತ್ತೀಚೆಗೆ ಇಂಡಿಯನ್ ಲೀಗಲ್ ಕೋಡ್ ಹೇಳಬೇಕಾದರೂ ಪೊಲೀಸರ ವಿರುದ್ಧ ಸರಕಾರಗಳು ಯಾವುದೇ ಕ್ರಮ ಜರುಗಿಸದೇ ಇರುವುದರಿಂದ ನ್ಯಾಯಾಂಗ ವ್ಯವಸ್ಥೆಯೇ ದುರ್ಬಲಗೊಂಡಿದೆ ಎಂದರೆ ತಪ್ಪಾಗಲಾರದು.

ದಿನಾಂಕ 25.5.27ರ ಇಂಡಿಯನ್ ಎಕ್ಸ್‌ಪ್ರೆಸ್ ಮುಂಬಯಿ ಆವೃತ್ತಿಯಲ್ಲಿ ಹರಿದ್ವಾರದ ಎಸ್.ಎಸ್.ಪಿ. ಯೊಬ್ಬರ ಲೇಖನವೊಂದು ಪ್ರಕಟಗೊಂಡಿತ್ತು. ಅದರಲ್ಲಿ ಒಂದು ಪ್ರಶ್ನೆಯನ್ನು ಈ ಕೆಳಗಿನಂತೆ ಮುಂದಿಡಲಾಗಿತ್ತು: "ಕಾನೂನು ಬದ್ಧವಾಗಿ ಹೇಳುವುದಾದರೆ, ಪ್ರತಿಯೊಂದು ಪೊಲೀಸ್ ಎನ್‌ಕೌಂಟರ್‌ನ್ನೂ 'ಕೊಲೆ' ಎಂಬ ವ್ಯಾಖ್ಯಾನದಡಿಯಲ್ಲಿ ತರಲು ಸಾಧ್ಯ. ಏಕೆಂದರೆ ಒಬ್ಬನಿಗೆ ಗುಂಡು ತಗಲಿದಾಗ, ನಾವು ಗುಂಡು ಹಾರಿಸುವುದನ್ನು ನಿಲ್ಲಿಸಿ, ಅವನಿಗೆ ಪ್ರಥಮ ಚಿಕಿತ್ಸೆ ಕೊಟ್ಟು, ಆತನನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿ, ಆತನ ವಿರುದ್ಧ ಸೂಕ್ತ ಕಾನೂನುಗಳಡಿ ಕೇಸು ದಾಖಲಿಸಬೇಕು. ಈ ಸೂಕ್ಷ್ಮತೆಯನ್ನು ಒಪ್ಪಿಕೊಂಡರೆ ಎರಡನೇ ಗುಂಡನ್ನು ಎಂದೂ ಹಾರಿಸಲಾಗುವುದಿಲ್ಲ. ಹಾಗಿದ್ದ ಮೇಲೆ ನಾವು ಯಾಕೆ ಎರಡನೆ ಗುಂಡನ್ನು ಹಾರಿಸುತ್ತೇವೆ? ಮಾಧ್ಯಮಗಳ ಮತ್ತು ಗುಪ್ತ ದಳದ ಗಮನವನ್ನು ಸೆಳೆಯದೇ ಖರ್ಚು ಮಾಡಲಾಗದ ಹಣಕ್ಕಾಗಿಯೇ? ಅಥವಾ ಬೇಗನೆ ಮಾಸಿ ಹೋಗುವ ಪ್ರತಿಷ್ಠೆಗಾಗಿಯೇ? ಅಥವಾ ತತ್‌ಕ್ಷಣ ನ್ಯಾಯ ನೀಡುವ ಹುಂಬತನದಿಂದಾಗಿಯೇ?"

ತನ್ನ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಆತ ಅಸಮರ್ಪಕ ಸೌಕರ್ಯಗಳನ್ನು, ಸಾಕ್ಷಿಯನ್ನು ರಕ್ಷಿಸುವ ವ್ಯವಸ್ಥೆ ಇಲ್ಲದಿರುವುದನ್ನು, ನ್ಯಾಯವಿಚಾರಣೆಗಾಗಿ ಬೇಕಿರುವ ಸಮರ್ಥ ಕಾನೂನು ನೆರವಿನ ಅನುಪಸ್ಥಿತಿಯನ್ನು ಮತ್ತು ಭ್ರಷ್ಟ ನ್ಯಾಯಾಂಗವನ್ನು ಉಲ್ಲೇಖಿಸಿ ಕೊನೆಗೆ "ಎರಡನೇ ಗುಂಡನ್ನು ಹಾರಿಸಲು ಆಯ್ಕೆಮಾಡಿಕೊಳ್ಳುವುದು 'ಹಣದ ದುರಾಸೆಗಾಗಿಯೋ ಅಥವಾ ಪ್ರತಿಷ್ಠೆಗಾಗಿಯೋ" ಅಲ್ಲ' ಎಂಬ ತೀರ್ಮಾನಕ್ಕೆ ಬರುತ್ತಾರೆ. ಮಾತ್ರವಲ್ಲ "ಕಾನೂನುಬದ್ಧವಾಗಿಯೂ, ನೈತಿಕವಾಗಿಯೂ ಇದೊಂದು ಒಳದಾರಿ ಎಂಬುದೇನೋ ನಿಜ. ಆದರೂ, ಈ ಒಂದು ಘಟನೆ ನೂರು ಕ್ರಿಮಿನಲ್‌ಗಳಿಗೆ ಒಂದು ಉದಾಹರಣೆಯಾಗಿ ನಿಂತು ಸಾಮಾನ್ಯ ನಾಗರಿಕರ ಜೀವನದ ಮೇಲೆ ಸತ್ಪರಿಣಾಮವನ್ನು ಉಂಟು ಮಾಡುತ್ತದೆ ಎಂಬ ವ್ಯರ್ಥ ಆಶಾಭಾವನೆಯಿಂದ ಹೀಗೆ ಮಾಡಲಾಗುತ್ತದೆ" ಎಂದು ಆತ ಹೇಳುತ್ತಾನೆ.

ಇಂತಹ ಆಲೋಚನಾ ಲಹರಿಯಲ್ಲಿ ಅನೇಕ ಲೋಪದೋಷಗಳಿವೆ. ಮೊದಲನೆಯದಾಗಿ, ಯಾವುದೇ ಒಂದು ನೈಜ ಎನ್‌ಕೌಂಟರ್‌ನಲ್ಲಿ ಮೊದಲನೇ ಗುಂಡನ್ನೇ ಸಾಮಾನ್ಯವಾಗಿ ಹಾರಿಸುವುದಿಲ್ಲ. ಎರಡನೆಯದಾಗಿ, ಇದು ವ್ಯಕ್ತಿಯೊಬ್ಬ ಮುಗ್ಧ ಕೂಡ ಆಗಿರಬಹುದು ಎಂದು ತತ್ವವನ್ನೇ ಸಾರಾಸಗಟಾಗಿ ನಿರ್ಲಕ್ಷಿಸಿಬಿಡುತ್ತದೆ. ಮೂರನೆಯದಾಗಿ, 'ಮೂಲಭೂತ ಸೌಕರ್ಯಗಳ ಕೊರತೆ, ಕಾನೂನಿನ ನೆರವಿಲ್ಲದಿರುವುದು ಅಥವಾ ನ್ಯಾಯವ್ಯವಸ್ಥೆಯಲ್ಲಿ ಭ್ರಷ್ಟಾಚಾರವಿರುವುದು' ಇವ್ಯಾವೂ ಯಾವುದೇ ಒಬ್ಬ ವ್ಯಕ್ತಿಯನ್ನು ಕೊಲ್ಲುವುದಕ್ಕೆ ಯಾವ ದೃಷ್ಟಿಕೋನದಿಂದಲೂ ಸಮರ್ಥನೆಯಾಗಲಾರವು. ನಾಲ್ಕನೆಯದಾಗಿ, ಇದು ಪೊಲೀಸರು ಮಾಡಬೇಕಾದ ತನಿಖೆಯ ಕರ್ತವ್ಯವನ್ನೇ ಅಳಿಸಿಹಾಕುತ್ತದೆ. ಕೊನೆಯದಾಗಿ, ಇದು ಪೊಲೀಸರನ್ನು ತನಿಖೆಗಾರರನ್ನಾಗಿಯೂ, ವಿವರಣಾಕಾರನನ್ನಾಗಿಯೂ, ನ್ಯಾಯಾಧೀಶನನ್ನಾಗಿಯೂ ಹಾಗೂ ಅದನ್ನು ಜಾರಿಗೆ ತರುವವನನ್ನಾಗಿಯೂ ಮಾಡಿಬಿಡುತ್ತದೆ. ಇದು ನಿಜಕ್ಕೂ ಅಪಾಯಕಾರಿ.

ಗುಜರಾತ್ ಪೊಲೀಸರು ಸೊಹ್ರಾಬುದ್ದೀನ್ ಮತ್ತು ಕೌಸರ್‌ಬಿಯನ್ನು ಅಪಹರಿಸಿ ಕೊಂದುಹಾಕಿದ್ದು ಆತ ಕ್ರಿಮಿನಲ್ ಎಂಬ ಕಾರಣಕ್ಕಾಗಿಯೇ? ಸೊಹ್ರಾಬುದ್ದೀನ್ ನಿಜಕ್ಕೂ 'ಭಯಾನಕ ಕ್ರಿಮಿನಲ್' ಆಗಿದ್ದನೆ? ಹಾಗಾದರೆ ಕೌಸರ್‌ಬಿಯ ಕಥೆ ಏನು? ಅವಳನ್ನಾಕೆ ಕೊಂದರು? ಹಾಗೆಯೇ, ಡಿಸೆಂಬರ್ 2002ರಲ್ಲಿ ಮುಂಬಯಿ ಪೊಲೀಸರು ಲಾಕಪ್ಪಿನೊಳಗೆ ಖ್ವಾಜಾ ಯೂನುಸ್ ಎಂಬು ದವನ ಎದೆಗೆ ಕಬ್ಬಿಣದ ರಾಡಿನಿಂದ ಗುದ್ದಿಗುದ್ದಿ ಕೊಂದು ಹಾಕಿದರಲ್ಲ ಅವನೊಬ್ಬ ಭಯಾನಕ ಕ್ರಿಮಿನಲ್ ಆಗಿದ್ದ ಎಂಬ ಕಾರಣಕ್ಕಾಗಿ ಕೊಂದರೆ? ಗುಜರಾತ್ ಪೊಲೀಸರು ಸೊಹ್ರಾಬುದ್ದೀನ್‌ನನ್ನು ಎನ್‌ಕೌಂಟರ್‌ನಲ್ಲಿ ಕೊಲ್ಲಲಾಯಿತು ಎಂದು ಸುಳ್ಳು ಹೇಳಿದರು. ಮುಂಬಯಿಯಲ್ಲಿ 'ಭಯಾನಕ ಕ್ರಿಮಿನಲ್' ತಪ್ಪಿಸಿಕೊಂಡ ಎಂದು ಸುಳ್ಳು ಹೇಳಿದರು. ಆದರೆ, ಪೊಲೀಸರು ಹೇಳುವುದೇ ನಿಜ ಎಂದು ಜನರನ್ನು ನಂಬಿಸಲಾಯಿತು. ಮಾಧ್ಯಮಗಳು ಪೊಲೀಸರ ಕಥೆಗಳನ್ನೇ ಪ್ರಕಟಿಸಿದವು; ಅವು ಸಾಮಾನ್ಯ ಜನರ ಹರಟೆಗೆ ಮನ್ನುವಾಗಿ ಪೊಲೀಸರು ನಿಜವಾಗಲೂ ಮಾಡಿದ ಅಪರಾಧವನ್ನು ಮರೆಯುವಂತೆ ಮಾಡಿದವು. ಪೊಲೀಸರ ಇಂತಹ ವರ್ತನೆ ಗಳಿಗೆ ಒಂದು ಪ್ರಧಾನ ಕಾರಣವೆಂದರೆ ಪೋಟ, ಟಾಡ, ಎಂ.ಸಿ.ಓ.ಸಿ.ಎ, ಎ.ಪಿ.ಎಸ್.ಪಿ.ಎ, ಕಾನೂನುಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ ಮತ್ತು ಈ ಪಟ್ಟಿಗೆ ಹೊಸದಾಗಿ ಸೇರಿಕೊಂಡಿರುವ ಛತ್ತೀಸ್‌ಗಢ ವಿಶೇಷ ಸಾರ್ವಜನಿಕ ರಕ್ಷಣಾ ಕಾಯ್ದೆ-2006 ನಂತಹ ಕರಾಳ ಕಾನೂನುಗಳು ಅಸ್ತಿತ್ವದಲ್ಲಿರುವುದು. ಇವೆಲ್ಲವೂ ಕ್ರೂರ, ಅತಾರ್ಕಿಕ, ಅನ್ಯಾಯಯುತ ಮತ್ತು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿರುವ ಕಾನೂನುಗಳೇ ಆಗಿವೆ. ಈ ಎಲ್ಲಾ ಕಾನೂನುಗಳಲ್ಲಿಯೂ ಪೊಲೀಸರು ಯಾರನ್ನು ಬೇಕಾದರೂ ಯಾವಾಗಬೇಕಾದರೂ ಬಂಧಿಸಿ, ಹುರುಳಿಲ್ಲದ ಭೂಮಿಕೆಯನ್ನೇ ಆಧಾರವಾಗಿಟ್ಟುಕೊಂಡು ಅವರ ಮೇಲೆ ಕೇಸು ದಾಖಲಿಸಬಹುದು. ಬಹುತೇಕ ಕಾನೂನುಗಳು ಆರೋಪಿಗಳಿಂದ ಬಲವಂತವಾಗಿ ತಪ್ಪೊಪ್ಪಿಗೆಯನ್ನು ಪಡೆಯುವ, ಮತ್ತದಕ್ಕಾಗಿ ಯಾವ ವಿಧಾನವನ್ನು ಬೇಕಾದರೂ ಬಳಸುವ ಅಧಿಕಾರವನ್ನು ಪೊಲೀಸರಿಗೆ ನೀಡುತ್ತವೆ. ಹೀಗಾಗಿ, ಚಿತ್ರಹಿಂಸೆ ಎಂಬುದು ಪ್ರತಿಯೊಂದೂ ಪೊಲೀಸ್ ಸ್ಟೇಷನ್‌ನಲ್ಲಿ ದಿನನಿತ್ಯದ ಒಂದು ಕ್ರಮವಾಗಿ ಹೋಗಿದೆ. ಯಾರಾದರೂ ಪ್ರತಿರೋಧ ಒಡ್ಡಿದರೆ ಅಂಥವರನ್ನು ನಿಷ್ಕಾರಣವಾಗಿ ಕೊಂದುಹಾಕಲಾಗುತ್ತದೆ. ಇತ್ತೀಚೆಗೆ ಆರೋಪಿಗಳನ್ನು ನ್ಯಾರ್ಕೋ ಅನಾಲಿಸಿಸ್‌ನಂತಹ ಹಿಂಸಾತ್ಮಕ ಪರೀಕ್ಷೆಗಳಿಗೂ ಒಡ್ಡುವ ಮೂಲಕ ನ್ಯಾಯಾಲಯಗಳೂ ಪೊಲೀಸರ ದುರಾಕ್ರಮಗಳಿಗೆ ಪುಷ್ಟಿ ನೀಡುತ್ತಿರುವುದು ದುರದೃಷ್ಟಕರ ಬೆಳವಣಿಗೆಯಾಗಿದೆ. ಇತ್ತೀಚೆಗೆ ಪೊಲೀಸರು ತನಿಖೆ ನಡೆಸುವ ಕಲೆಯನ್ನೇ ಕಳೆದುಕೊಂಡಿದ್ದಾರೆಂದೂ, ಅವರಿಗೆ ಗೊತ್ತಿರುವ ಒಂದೇ ಒಂದು ತನಿಖಾ ವಿಧಾನವೆಂದರೆ ಚಿತ್ರಹಿಂಸೆ ಕೊಡುವುದು ಎಂದೂ ಇದೆಲ್ಲದರಿಂದ ತೀರ್ಮಾನಿಸಬಹುದು. ಆರೋಪಿಗೆ ಕೊಡುವ ಚಿತ್ರಹಿಂಸೆ ಫಲ ನೀಡದಿದ್ದರೆ, ಆತನನ್ನು 'ನಿರ್ನಾಮ' ಮಾಡಿಬಿಡಲಾಗುತ್ತದೆ. ಹೀಗೆ 'ಕಾಣೆಯಾಗಿಬಿಡುವ' ಆತ ಕೊನೆಗೆ ಜನರ ನೆನಪಿನಿಂದಲೂ ಮಾಸಿಹೋಗುತ್ತಾನೆ. ಪೊಲೀಸರು ಇಂತಹ ಅಪರಾಧಗಳನ್ನು ಎಸಗದಂತೆ ತಡೆಯುವುದು ಮತ್ತು ಅಂತಹ ಅಪರಾಧಗಳಿಗೆ ಅವರನ್ನು ...ವಿಚಾರಣೆಗೆ ಒಳಪಡಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿದೆ. ಇದಕ್ಕೆ ...

ಈ ಸಾಬ್ರಿಗೇನು ಬಂತು, ಹಿಂಗಾಯ್ತಾ ಅವುರಲ್ಲಾ?

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಮೋಡ ಮುಚ್ಚದ್ದರೂ ಮಳೆಬರದ ಕಾರಣವನ್ನು ಪತ್ತೆಹಚ್ಚುವವನಂತೆ ಕುಂತ ಕಾಳಮಾವ.

"ನಾನು ಮದ್ಲಿಂದ ನೋಡಿಕಂಡು ಬಂದಿದ್ದಿನಿ. ಮಲ್ನಾಡಿಗೆ ಮಳೆಯಾದ್ರೆ ನಮ್ಮ ಕಡಿಕೆ ಮಳೆ ಕಡಿಮೆ. ನಮಿಗೇನಾರ ಹಾಯ್ಕಂಡು ಚಚ್ಚುತೋ. ಆ ಕಡಿಕೆ ಇಲ್ಲ. ಹಿಂಗೇ ಆಯ್ತಾ ಅದಲ್ಲಾ" ಎಂದು ಯೋಚಿಸತೊಡಗಿದ. ಇದನ್ನೇನು ಅಷ್ಟು ತಲೆಗೆ ಹಚ್ಚಿಕೊಳ್ಳದ ಸೀರ,

"ಅವುನ್ಯಾರೊ ಸಾಬಿ ಈರಪ್ಲೇನ್ ಬಸ್ಟಾಂಡ್ ಮ್ಯಾಲೆ ಬಾಂಬು ಹಾಕಕ್ಕೋಗಿ ಸಿಗಾಯ್ಕಂಡಿದ್ದನಂತೆ, ನೋಡವುನ್ಯಂಗ ವುನೆ?" ಎಂದ.

"ಎಲ್ಲೀ?" ಎಂದ ಕಾಳಮಾವ.

"ನಮ್ಮ ದೇಸ ಆಳಿದ್ರಲ್ಲ ಇಂಗ್ರೀಸ್‌ನೋರು, ಅವುರ ದೇಸಕೋಗಿ ಏರಪ್ಲೇನ್ ಮ್ಯಾಲೆ ಬ್ಯಾಂಬ್ಯಸಿತನೆ ಅಂದ್ರೆ ಅವುನಿನ್ನಂಥಾ ಇವುನು ಲ್ಯಕ್ಕ ಹಾಕು."

"ನೋಡು ಮತ್ತೆ ಈ ಸಾಬುರ‍್ಯಾಕೆ ಹಿಂಗಾಗಿಬುಟ್ರೊ?"

"ಆಗದೇನು ಯಕುಟ್ಟ ಹೋಯ್ತಾ ಅವುರೆ ಕಣಮಾವ. ಆ ಪಾಕೀಸ್ತಾನದಲ್ಲಿ ಮಸೀದಿವಳಗೆ ಸೇರಿಕೊಂಡು ದೇಸನೆ ಹೆದ್ರಿಸಿದ್ದವಂತೆ. ಆ ಮೀಸೆರಪ್ಪ ಡೋಂಟ್‌ಕೇರ್ ಅನ್ನಕಂಡು ಯಲ್ಲಾರ‍್ನು ವಡದು ಯಸ್ದವುನೆ" ಎಂದ ಉಗ್ರಿ.

"ಅದೇನಾರ ಆಗ್ಲಿ ಕಂಡ್ರ ಅಲ್ಲಿ ಇಲ್ಲಿ ಹೋಗಿ ಬಾಂಬು ಹಾಕೋರ‍್ಯಲ್ಲ ನಮ್ಮ ಕಡೆ ಸಾಬರಂತಲ್ಲಾ ಇದಕೇನೇಳ್ತೀ?"

"ಅಷ್ಟೇ ಅಲ್ಲ ಕಣೊ, ಬೆಂಗಳೂರಲ್ಲಿ ಒಂದು ಸತಿ ಚರ್ಚಿಗೆ ಬಾಂಬ್ ಹಾಕಿದೋರು ನಾಗಮಂಗಲದ ಸಾಬರಂತೆ?" ಎಂದ ಉಗ್ರಿ.

"ನಾಗಮಂಗಲದ ಸಾಬ್ರ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಊ ಕಣೇ, ಸಾಬ್ರು ಯಾವಾಗ ಏನು ಮಾಡ್ತಾರೆ ಅಂತ್ಲೆ ಹೇಳಕ್ಕೆ ಬರದಿಲ್ಲ ಅಂಗಾಗ್ಯವುರೆ."

"ಸಿಟಿ ಸಾಬರೇನೊ ಅಂಗಿದ್ದ ಕಂಡು ನಿಭಾಯಿಸ್ತರೆ ಈ ಹಳ್ಳಿ ಸಾಬ್ರಿಗೆ ಭಾರಿ ಕಷ್ಟ ಕಂಡ್ಯ" ಎಂದ ಕಾಳಮಾವ.

"ಊ ಕಣ ಮಾವ, ಆ ಮಲ್ಲೆನಳ್ಳಿಲಿದ್ದ ಸಾಬ್ರು ಈ ಬಜೆಪಿಗಳ ಅಬ್ಬರಕೆ ಹೆದ್ರಿಕಂಡು ಯಲ್ಲ ಬಂದು ಬಿಂಡುನೂಲೆ ಪಟ್ನ ಸೇರಿಕಂಡು ಅವುರದೆ ಒಂದು ಗುಂಪು ಮಾಡಿಕಂಡವೆ."

"ಗುಂಪಲಿದ್ರೆ ಯಾರೂ ನಮ್ಮ ಮ್ಯಾಲೆ ಬೀಳದಿಲ್ಲ ಅನ್ನದು ಅವುರ ಲ್ಯಕ್ಕ."

"ಅದು ನಿಜ ಕಣಮಾವ, ಸಾಬ್ರು ಗುಂಪಾಗಿರದ್ಕೆ ಅವುರ ಮ್ಯಾಲೆ ಇವುರು ಅಷ್ಟು ಸುಲಭವಾಗಿ ಬೀಳಕ್ಕಾಯ್ತಾಯಿಲ್ಲ, ಇಲ್ಲ ಅಂದ್ರೆ ಈಟೊತ್ತಿಗೆ ಉರುಬಡಕಂಡು ತಿಂದಿರೋರು."

"ಆದ್ರು ಆ ಸಾಬಿ ನನ್ನ ಮಗನವುಕೆ ತಲೆ ಕಡಮೆ ಕಂಡ್ಯ" ಎಂದ ಸೀರ.

"ತಲೆ ಕಡಮೆ ಅಂತ ನೀನಂತಿ, ಅಮೆರಿಕದ ಬಿಲ್ಡಿಂಗ್ ಮ್ಯಾಲೆ ಇರಪ್ಲೇನ್ ತಗಂಡೋಗಿ ಗುದ್ದಿಸಿದಾಗ ಇಡೀ ಪ್ರಪಂಚನೆಯ ತಲೆ ಅಂದ್ರೆ ಸಾಬರ ತಲೆ ಕಣಯ್ಯ ಅಂತು. ಈಗ್ಲು ನೋಡು ಬೆಂಗಳೂರ್ ಕಪೀಲ್ ಸಾಬಿ ಕ್ಯಲಸ ನೋಡಿ ಯಲ್ಲ ಬೆಚ್ಚಬಿದ್ದವುರೆ" ಎಂದ ಉಗ್ರಿ.

"ಕಪಿ ಸಾಬಿ ಅವುನ್ಯಾರ್ಲ?"

"ಕಪಿನೆ ಕಣೆ ಆ ಮುಂಡೆ ಮಗ. ನಮ್ಮ ಕರ್ನಾಟಕದ ಅನ್ನ ತಿಂದು ಬ್ಯಳದು ಹೋಗಿ ಆ ಇಂಗ್ಲೆಂಡ್ ಏರ್ ಪೋರ್ಟ್ ಮ್ಯಾಲೆ ಬಾಂಬಾಕಿ ಕರ್ನಾಟಕದ ಸಾಬರು ಅಂದ್ರೆ ಹೆದರಂಗೆ ಮಾಡಿದನಲ್ಲ ಹೇಳು?"



"ಸಾಬ್ರು ಎಲ್ಲಿದ್ರು ಸಾಬ್ರೆ ಕಣೊ ಉಗ್ರಿ ಮತ್ತೆ ಸಾಯೋವರಿಗೂ ಸಾಬ್ರೆಯ" ಎಂದುಕೊಂಡು ವಾಟಿಸ್ಸೆ ಬಂದ.

"ಸಾಯಗಂಟ ಸಾಬ್ರು ಅಂದ್ರೇನ್ಲ?"

"ನೋಡಕ್ಕ ನಾವ್ಯಲ್ಲ ಏನೇನಾರ ಆಗಬವುದು, ಆಗಿ ಜಯಿಸಿಗತ್ತಿವಿ. ನಿಮ್ಮ ದೇವರ ಬೋದು ಜಯಿಸಿಗತ್ತಿವಿ. ನಿಮ್ಮ ಚಲ್ರೆ ದೇವರನ್ನಲ್ಲ ಬೋದು ಜಯಿಸಿಗತ್ತಿವಿ. ಆದ್ರೆ ಸಾಬಿ ಆಗಿ ಹುಟ್ಟದೋನು ಸಾಯಗಂಟ ಸಾಬಿಯಾಗೇ ಇರಬೇಕು. ಇಲ್ಲ ಅಂದ್ರೆ ಸಾಬ್ರೆ ಅವುನ್ನ ಸಾಯಿಸ್ತರೆ

"ಅದ್ಕೆ ಅಲವೆ ಸಾಬರಲ್ಲಿರೊ ಸಾಯಿತಿಗಳು, ಕಲಾವಿ... ಇನ್ನು ಯಂತ್ಯಂಥವೊ ಸಾಬ್ರು ಉಸುರೆತ್ತದಂಗೆ ... ಮಾಡ್ತವೆ. ಅದರಲ್ಲೂ ಸಾಯಿತಿ ಸಾಬರಂತೂ ವಿ... ಮಾತಾಡದಿದ್ರೆ ಹಿಂದೂ ಧರ್ಮದ ಬಗ್ಗೆ ಮಾತಾ... ವರತೂ, ಮುಸ್ಲಿಂ ಧರ್ಮದ ಬ... ಉಸುರೆತ್ತದಿಲ್ಲ" ಎಂದ ಉಗ್ರಿ.

"ಅದೇನಾರ ಆಗ್ಲಿ ಅವರ... ಅವುರಿದ್ದು ನಮ್ಮಷ್ಟಕ್ಕೆ ನಾವಿ... ಅಂದ್ರೆ ಬಾಂಬು ಮಾಡ್ತ ಕುಂತಮು... ಹೇಳೂ?" ಎಂದ ಕಾಳಮಾವ.

"ಬಾಂಬಷ್ಟೇ ಅಲ್ಲ ದೊಡ... ನೀನ್ಯಾವುದೇ ಅಪರಾಧ ತಗ... ಅದರಲ್ಲಿ ಹತ್ತು ಜನ ಸಿಕ್ಕಿದ್ರೆ ಏ... ಜನ ಸಾಬರಿರತರೆ ಇದಕೇನೇಳ್ತೀ..." ಎಂದು ವಾಟಿಸ್ಸೆ ಹೇಳಿದಾ... ಕಾಳಮಾವ ಒಳಗಣ್ಣಾದ. ಆಗ,

"ಇದಕೇನೇಳ್ತೀ ಅಂದ್ರೆ ಅಪ... ಮಾಡಕ್ಕೆ ಕ್ಯಲಸಿಲ್ಲ ಕಣೊ ವಾಟಿ... ದುಡಿಯೋ ಕೈಗೆ ಕ್ಯಲಸ ಕೊ... ಅವು ಯಾಕಂಗೆ ಮಾಡ್ಯವು... ಅದರಲ್ಲೂ ಸಾಬ್ರು ಯಾವತ್ತು ಕುಂತಗಂಡು ತಿನ್ನೋರ... ದುಡುದೇ ತಿಂತರೆ. ಅಂತ ದುಡಿಯೋ ಕೈಗೆ ಕ್ಯಲ... ಸಿಗಲಿಲ್ಲ ಅಂದ್ರೆ ಅಂಗಾಯ್ತವೆ" ಎಂದ ಉಗ್ರಿ.

"ಎಜ್ಜಾಟ್ಲಿ ಕರಟ್. ಮದ್ಲು ಸ್ಯಾಂಡಲ್‌ವು... ಕಡಿಯೋರ‍್ಯಲ್ಲ ಸಾಬರಾಗಿದ್ರು. ಈಗ ನಮ್ಮೋರು ಸೇ... ಕಂಡವುರೆ."

"ಅಂತು ಸಾಬ್ರು ನಮ್ಮೋರಿಗೂ ಮರ ಕಡಿಯ... ಕಲಿಸಿದ್ರು" ಎಂದ ಸೀರ.

"ಅವುರು ಭಾರಿ ಮಕ್ಕಳು ಮಾಡಿಕತ್ತರಲ್ಲಾ ಅವುನ...

ಶೆಖಾವತ್ ಅವರ 'ಆದರ್ಶ ಸೇವೆ!'

ಛೇ... ನೋಡೋಕೆ ಎರಡು ಕಣ್ಣು ಸಾಲದು. ಮನಸ್ಸಿಗೆ ಏನು ರೋಚಕ ಅನುಭವ ನೀಡುತ್ತೆ ಅಂತೀರಿ. ರಾಷ್ಟ್ರಪತಿ ಚುನಾವಣೆ ಎಷ್ಟೋ ನಡೆದಿದಾವೆ. ಆದರೆ ಯಾವುದರಲ್ಲೂ ಇಂತಹ ಘಟನೆಗಳು ನಡೆದೇ ಇರಲಿಲ್ಲ. ಪ್ರೆಸ್‌ಮೀಟ್ ಅಂತ ಮಾಡಿ ವಿರೋಧಿ ಅಭ್ಯರ್ಥಿಯ ಮೇಲೆ ಲಾರಿಗಟ್ಟಲೆ ಕೆಸರು ಎರಚಿ, ಜನರಿಗೆ ಮನರಂಜನೆ ನೀಡುವ ಪುಣ್ಯಕಾರ್ಯವನ್ನು ಯಾರೂ ಮಾಡಿರಲಿಲ್ಲ. ಹಾಗೆ ನೋಡಿದರೆ ಚುನಾವಣೆ ಯಾವಾಗ ಬಂತು, ಯಾವಾಗ ನಡೀತು ಅನ್ನೋದೆ ಗೊತ್ತಾಗುತ್ತಿರಲಿಲ್ಲ. ಈಗ ನೋಡಿ. ಅಭ್ಯರ್ಥಿಗಳ ಹೆಸರು ಹೊರಬೀಳುತ್ತಿದ್ದಂತೆಯೇ ವಿರೋಧ ಪಕ್ಷದವರು ಅವರ ಮನೆಯ ಕಬೋರ್ಡುಗಳಲ್ಲಿ ಬಚ್ಚಿಡಲಾಗಿದ್ದ ಅಸ್ಥಿಪಂಜರಗಳನ್ನೆಲ್ಲ ಬೀದಿಗೆ ತರುತ್ತಿದ್ದಾರೆ. ಸುಸಂಸ್ಕೃತ ಭಾರತೀಯ ಜನತಾಪಕ್ಷ ಯುಪಿಎ ಅಭ್ಯರ್ಥಿ ಪ್ರತಿಭಾ ಪಾಟೀಲರ ಮಾನಭಂಗಕ್ಕೆ ಯಾವ ದುಶ್ಶಾಸನನಿಗೂ ಕಡಿಮೆ ಇಲ್ಲದಂತೆ ಮುಗಿಬೀಳುತ್ತಿದೆ!

ಹೌದು, ಈ ಪ್ರತಿಭಾ ಪಾಟೀಲ್ ಎಂತಹವರು?

ದುಷ್ಟೆ! ಭ್ರಷ್ಟಾಚಾರಿ! ಮೋಸಗಾರ್ತಿ!

ಇದಕ್ಕೆ ಇಲ್ಲಿದೆ ನೋಡಿ ಪುರಾವೆ!

ಪ್ರತಿಭಾ ಮಹಾರಾಷ್ಟ್ರದಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಿದ್ದರು. ಅದು ನಷ್ಟದಲ್ಲಿ ಮುಳುಗಿಹೋಯಿತು. ಇದರಿಂದ ರೈತರು ಆತ್ಮಹತ್ಯೆಯ ಹಾದಿ ಹಿಡಿದರು!

ಇದು ಒಂದೇ ಆಕೆ ಮಾಡಿದ ಅಪರಾಧ?

ಇಲ್ಲ, ಇನ್ನೂ ಇದೆ. ಮಹಿಳಾ ಸಹಕಾರಿ ಬ್ಯಾಂಕ್ ಸ್ಥಾಪಿಸಿದಳು. ಅದರಿಂದ ಲಾಭ ಆದದ್ದು ಯಾರಿಗೆ? ಪ್ರತಿಭಾ ಕುಟುಂಬದವರಿಗೆ! ಲಕ್ಷಾಂತರ ರೂಪಾಯಿ ಸಾಲ ಪಡೆದರು. ಹಿಂತಿರುಗಿಸಲಿಲ್ಲ, ಪರಿಣಾಮ? ಬ್ಯಾಂಕು ದಿವಾಳಿ ಆಯಿತು!

ಸಂಸದರ ನಿಧಿ ಅಂತ ಇರುತ್ತಲ್ಲ, ಈಕೆ ಸಂಸದೆ ಯಾಗಿದ್ದಾಗ ಯಾರಿಗೆ ನೀಡಿದರು ಇದರಲ್ಲಿನ ಹಣವನ್ನು? ತನ್ನ ಗಂಡನ ಶಿಕ್ಷಣ ಸಂಸ್ಥೆಗೆ!

ಇವೆಲ್ಲ ಆರ್ಥಿಕ ಅಪರಾಧಗಳಾಯಿತು. ಪಾತಕೀಕರಣವೂ ಉಂಟೋ?

ಉಂಟು! ಆಕೆಯ ತಮ್ಮ ಓರ್ವ ಉಪಾಧ್ಯಾಯನ ಕೊಲೆಗೆ ಕಾರಣಕರ್ತನಾದ. ಪ್ರತಿಭಾ ತನ್ನ ಅಧಿಕಾರದ ಸ್ಥಾನ ಬಳಸಿ ಮುಚ್ಚಿಹಾಕಿದರು.

ಇದೆಲ್ಲಾ ಮಹಾಜನತೆಗೆ ತಿಳಿಯಬೇಡವೆ?

ಅದಕ್ಕಾಗಿ ಅಂತರ್ಜಾಲ ಬಳಕೆ.

ಅದರೆ ಅದನ್ನು ನೋಡುವವರು ಯಾರು?

ಇಲ್ಲವೆ ಪತ್ರಿಕೆಗಳು? ಪ್ರೆಸ್‌ಮೀಟ್ ಮಾಡಿದರು.

ಪೂರ್ಣ ವಿವರ ವರದಿಯಾಗುವುದಿಲ್ಲವಲ್ಲ?

ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್‌ನಂತಹ ಜನಪರ ಪತ್ರಿಕೆಗಳು ಇದಾವಲ್ಲ, ಅವನ್ನ ಬಳಸಿಕೊಂಡರು! ದೈನಿಕ ಧಾರಾವಾಹಿಯಂತೆ ಪ್ರತಿಭಾ ಅಪರಾಧಗಳ ಸರಮಾಲೆಯನ್ನು ಬರೆಸಿದರು! ಅದು ಎಂತಹ ನಿಷ್ಪಕ್ಷಪಾತವಾದ ಪತ್ರಿಕೆ ಅಂತೀರಿ. ವಾಚಕರೊಬ್ಬರು ಪ್ರತಿಭಾ ವಿರೋಧವಾಗಿ ಬರೆದ ಒಂದು ಪತ್ರವನ್ನು ಮುಖಪುಟದಲ್ಲಿಯೇ ಪ್ರಕಟಿಸಿ ಪತ್ರಿಕಾಧರ್ಮವನ್ನು ಎತ್ತಿ ಹಿಡಿಯಿತು!



ಪ್ರತಿಭಾ ನಿಂದನಾ ಕಾರ್ಯಕ್ರಮ ಅದ್ದೂರಿಯಿಂದ ನಡೆಯಿತಾದರೂ, ಎಷ್ಟು ದಿವಸ ಅಂತ ಅದನ್ನೇ ಜಗ್ಗಾಡುವುದಕ್ಕೆ ಸಾಧ್ಯ? ಚುನಾವಣೆ ಇನ್ನೂ ಮುಗಿದಿಲ್ಲ, ಅದಕ್ಕೆ ಪ್ರಜ್ಞಾವಂತ ಭಾರತೀಯರ ಮುಂದೆ ಒಂದು ಪ್ರಶ್ನೆ ಹಾಕಿತು. ಇಂತಹವರು ರಾಷ್ಟ್ರದ ಉನ್ನತ ಸ್ಥಾನವನ್ನು ಏರಬೇಕೆ?

'ಕೂಡದು' ಎಂದಿತು 'ಅವರ'ಪ್ರಜ್ಞಾವಂತ ಜನ!

ಆದರೇನು ಮಾಡುತ್ತೀರಿ, ಯುಪಿಎ ಅಭ್ಯರ್ಥಿಗೆ ಮತಗಳ ಬೆಂಬಲ ಇದೆ. ಇವರಿಗೆ ಇಲ್ಲ.

ಈ ಸಮಸ್ಯೆಗೆ ಪರಿಹಾರ ಏನು?

ಆತ್ಮಸಾಕ್ಷಿ!

ಆತ್ಮಸಾಕ್ಷಿಯಂತೆ ಮತನೀಡಿ. ನಿಮ್ಮ ಪಕ್ಷದ ಆಜ್ಞೆಯನ್ನು ಕಡೆಗಣಿಸಿ!

1969ರ ರಾಷ್ಟ್ರಪತಿ ಚುನಾವಣೆಯಲ್ಲಿ ಇಂದಿರಾಗಾಂಧಿ 'ಆತ್ಮಸಾಕ್ಷಿ'ಗೆ ಶರಣಾಗಿ ತಮ್ಮ ಅಭ್ಯರ್ಥಿ ವಿ. ವಿ. ಗಿರಿಯನ್ನು ಸಂಜೀವರೆಡ್ಡಿಯವರ ವಿರುದ್ಧ ಗೆಲ್ಲಿಸಿದ್ದರು. ಈಗ ಭೈರೋನ್ ಸಿಂಗ್ ಶೆಖಾವತ್ ಅವರನ್ನು ಆತ್ಮಸಾಕ್ಷಿ ಗೆಲ್ಲಿಸಬೇಕು!

ನಮ್ಮ ಜನಪ್ರತಿನಿಧಿಗಳಿಗೆ ಆತ್ಮಸಾಕ್ಷಿ ಅಂತಾನೂ ಇದೆಯೆ ಎಂಬುದೇ ಪ್ರಶ್ನೆ, ಇರಲಿ. ಪಕ್ಷ ವಿರೋಧಿ ಚಟುವಟಿಕೆಗಳಿಗೆ ಒಂದು ಪ್ರಮುಖ ರಾಜಕೀಯ ಪಕ್ಷವೇ ಪ್ರೋತ್ಸಾಹ ನೀಡಬಹುದೇ? ಇದುವೆ ಪ್ರಶ್ನೆ.

ಪ್ರೋತ್ಸಾಹಿಸಬೇಕು! ಕೆಟ್ಟ ವ್ಯಕ್ತಿ ಉನ್ನತ ಸ್ಥಾನ ಏರುವುದನ್ನು ತಡೆಯಲು ಇದು ಅತ್ಯವಶ್ಯಕ!

ಹೌದಾ? ಹಾಗಾದರೆ ಭೈರೋನ್ ಸಿಂಗ್ ಶೆಖಾವತ್ ಸರ್ವಗುಣ ಸಂಪನ್ನರಾ?

1942ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ಇಡೀ ದೇಶವೇ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದಾಗ ಈ ಮಹಾಶಯರು ಏನು ಮಾಡುತ್ತಿದ್ದರು? ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಇವರು ಚಳವಳಿಗಾರರ ಮೇಲೆ ಲಾಠಿ ಚಾರ್ಜ್ ಮಾಡುತ್ತಿದ್ದರು!

ಇಷ್ಟೇ ಅಲ್ಲ, ಇವರ ಪ್ರತಾಪ. ಲಂಚ ಪಡೆದ ಆರೋಪದ ಮೇಲೆ ಸಬ್‌ಇನ್ಸ್‌ಪೆಕ್ಟರ್ ಸಾಹೇಬರು ಅಮಾನತುಗೊಂಡಿದ್ದರು.

ನಡೆದದ್ದು ಇಷ್ಟೆ. 1947ರಲ್ಲಿ ಈ ಸಾಹೇಬರು ಸಿಕಾರ್ ಪೊಲೀಸ್ ಠಾಣೆಯ ಮುಖ್ಯಸ್ಥರಾಗಿದ್ದರು. ಒಂಟೆಯ ಮೇಲೆ ಉಪ್ಪನ್ನು ಸಾಗಿಸುವ ವ್ಯಾಪಾರಗಾರರು ತೆರಿಗೆ ನೀಡಬೇಕಾಗಿತ್ತು, ಶೆಖಾವತ್ ಠಾಣೆಯ ಮುಖ್ಯಸ್ಥರಾಗಿದ್ದರಿಂದ ತೆರಿಗೆ ವಸೂಲಿ ಅವರ ಕರ್ತವ್ಯ ಆಗಿತ್ತು, ಒಂದು ದಿವಸ ಸಿಕಾರ್‌ನ ರಾಜ ಕಲ್ಯಾಣಸಿಂಗ್ ಬಾಲಾಜಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ಉಪ್ಪನ್ನು ಹೊತ್ತು ಬರುತ್ತಿದ್ದ ಒಂಟೆಗಳ ಸಾಲು ಅವರಿಗೆ ಎದುರಾಯಿತು. ತೆರಿಗೆ ನೀಡಿದ್ದಾರೆಯೇ ಎಂದು ರಾಜರು ವಿಚಾರಿಸಿದರು. ಅವ... ನೀಡಿದ್ದೇವೆ ಎಂದರು. ರಶೀದಿ ತೋರಿಸುವಂತೆ ರಾಜ... ಕೇಳಿದರು. ಶೆಖಾವತ್ ತೆರಿಗೆ ಹಣ ಪಡೆದು ರಶೀ... ನೀಡಿರಲಿಲ್ಲ! ಇದನ್ನೇ ಅವರು ರಾಜನಿಗೆ ಹೇಳಿದರ... ಇದರಿಂದ ಕೋಪಗೊಂಡ ಕಲ್ಯಾಣಸಿಂಗ್ ನಿಂ... ನಿಲುವಿನಲ್ಲೇ ಶೆಖಾವತ್ ಅನ್ನು ಅಮಾನತುಗೊಳಿಸಿದರ... ಪೊಲೀಸರು ಎಂದರೆ 'ಸಮವಸ್ತ್ರದ ಪಾತಕಿಗಳು' ಎಂಬುದ... 1947ರಲ್ಲಿಯೇ ಶೆಖಾವತ್ ಸಾಹೇಬರು ತೋರಿಸಿದ್ದರು...

ನಂತರ ಅವರು ಮತ್ತೆ ಪೊಲೀಸ್ ಅಧಿಕಾರಿಯಾದರು... ಯಾಕೋ ಏನೋ ರಾಜೀನಾಮೆ ನೀಡಿದರು. ಅವ... ಸೇವೆಯನ್ನು ತೊರೆದಾಗ ಘನ ಸರ್ಕಾರ ಅವರ 'ಆದರ್ಶ ಸೇವೆ'ಯನ್ನು ಶ್ಲಾಘಿಸಿ ಪತ್ರ ನೀಡಿದೆಯಂತೆ! ಸರ್ಕಾರದಿಂ... ತಾರೀಫು ಸಿಗುವುದು ಇಂತಹವರಿಗೆ ತಾನೆ!!

ಎಚ್.ಎಲ್. ಕೇಶವಮೂರ್ತಿ

ಭಾಜಪ ಇವರಿಗೆ ನೀಡಿದ ಈ ಆದರ್ಶ ಸೇ... ಸರ್ಟಿಫಿಕೇಟ್ ಅನ್ನೇ ಎಲ್ಲರಿಗೂ ತೋರಿಸುತ್ತಿದ್ದರು... ಯಾಕೋ ಏನೋ ಇವರು ಆದರ್ಶ ಸೇವೆಯಿಂ... ಅಮಾನತುಗೊಂಡಿದ್ದನ್ನು ಎಲ್ಲೂ ಹೇಳುತ್ತಿಲ್ಲ!

ಪೊಲೀಸ್ ಸೇವೆಯನ್ನು ಹೀಗೆ ಅಸಮಾನ್ಯ ರೀತಿಯ... ಸಲ್ಲಿಸಿದ ಶೆಖಾವತ್ ಸಾಹೇಬರು ಮೂರು ಬಾ... ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದಾಗ ಸಾಧಿಸಿದ್ದೇನು...

ಸಾಹೇಬರಿಗೆ ಪಾಪ ಒಬ್ಬಳೇ ಮಗಳು. ಅಂದಮೇ... ಅಳಿಯ ಅಂದರೆ ಅಗಾಧ ಪ್ರೇಮ. ಈ ಅಳಿಯ... ಸಾಹೇಬರು ಯಾವುದಾದರೂ ನಾಜಿ ರಾಜಸ್ಥಾನದ... ಬಂದರೆ ಬಹಳ ಆನಂದಪಡ್ತಾರಂತೆ.. ಇಂತಹ ನಾಜಿಗಳ... ಭೂಮಿ ವಶಪಡಿಸಿಕೊಳ್ಳಬೇಕಲ್ಲ ಸರ್ಕಾರ. ಅದೇ... ಆಶ್ಚರ್ಯ ಅಂತೀರಿ ಅಲ್ಲೆಲ್ಲ ಇವರದ್ದೇ ಜಮೀ... ಇರುತ್ತಿತ್ತಂತೆ! ಹೀಗೆ ಭೂ ದಾಖಲಾತಿಗಳನ್ನು ತಿ... ಬಚಾವಾಗುತ್ತಿದ್ದರೂ 520 ಎಕರೆ ಭೂಮಿಗೆ ಪರಿಹಾ... ಪಡೆಯುವಾಗ ಯಡವಟ್ಟಾಗಿ ಸಿಗಾಕಿಕೊಂಡರಂ... ವಿಧಾನಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾ... ಶೆಖಾವತ್ ಸಾಹೇಬರು 'ಇದು ಈಗಾಗಲೇ ಸಿಬಿ... ತನಿಖೆ'ಗೊಳಪಟ್ಟಿರುವುದರಿಂದ ಚರ್ಚೆ ಅನವಶ್ಯಕ ಅಂ... ಗುಡುಗಿದರಂತೆ! ಅದು ಸರಿ ಸಿಬಿಐ ತನಿಖೆಗೊಳಪಟ್ಟ...

ಯಂಗೆ ಸಾಕಬೇಕೊ? ಅದ್ಕೆ ಮರ ಕಡಿಯಕ್ಕೆ ಮಷಿ ಹೋಯ್ತವೆ. ದನ ಕಡಿಯಕ್ಕೆ ಮಷಿ ಹೋಯ್ತವೆ. ದರೋಡೆ ಮಾಡಕ್ಕೆ ಮಷಿ ಹೋಯ್ತವೆ. ಅಂತೂ ಸಾಬ್ರು ತಲೆಸವ್ವಾದ್ರು ಕಂಡ್ಯ" ಎಂದ ಕಾಳಮಾದ.

"ನಮ್ಮ ಕಾಳ ದ್ವದಪ್ಪನ ಬಾಯಲೇ ಈ ಮಾತು ಬತ್ತು ಅಂದ್ರೆ, ಸಾಬ್ರು ಜನಗಳ ನಂಬುಕೆ ಕಳಕಂದ್ರು ಕಣೊ ಉಗ್ರಿ" ಎಂದ ವಾಟಿಸ್ಸೆ.

"ನಂಬುಕೆ ಯಾಕ್ಕಳಕಂದ್ರು ಗೊತ್ತೇನೊ? ಈ ಸಾಬ್ರು ಬಾಂಬಾಕದು ಜನ ಕೊಲ್ಲದು ಇಂತ ಕ್ಯಲಸ ಮಾಡಿದಾಗ ಯಾವನಾದ್ರು ಸಾಬಿ ಲೀಡ್ರಾಗ್ಲಿ, ಮಸೀದಿ ಲೀಡ್ರಾಗ್ಲಿ ಖಂಡಿಸಿರದ ಬೋದಿರದ ನೋದಿದ್ದೀವಾ? ಅದ್ಕೆ ಈ ನನಮಕ್ಳೆಲ್ಲ ಒಂದೆಯಾ ಅಂತ ಕಾಳಮಾವ ಸೀರಮಾವ ಸಾರಸಾಗಟು ತೀರ್ಮಾನ ಮಾಡ್ಯವುರೆ."

"ಅಲ್ಲಾ ಸಾಬರಿಗೆ ಎಜುಕೇಷನ್ ಕೊಟ್ರೆ ಯಲ್ಲ ಸರಿಯಾಯ್ತದೆ ಅಂದ್ರು. ಅಂಗಂತ ದಾಗುಟ್ರಾದೋರ್ಕಲ್ಲ ಹಿಂಗಾದ್ರು, ಇಂಜನಿಯರ್ರಾದೋರ್ಕಲ್ಲ ಅಂಗಾದ್ರು. ಇದ್ದಿದ್ರಲ್ಲಿ ನಮ್ಮ ನಡುವೆ ಮೂಟೆ ಹೊರವು ಕೂಲಿ ಮಾಡೊ ಸಾಬ್ರೆ ಪರವಾಗಿಲ್ಲ ಅನ್ನಂಗಾಯ್ತಪ್ಪ."

"ಅಂಗೆ ಕಾಣ್ತಾ ಅದೆ. ನಕ್ಸಲ್ಯೈಟ್ರು ಅಂಗೆ ಅಲವೇನೊ? ಅದರಲ್ಲಿರೋರ್ಕಲ್ಲ ತುಂಬಾ ಓದಿಕಂಡವುರೆ ತುಂಬಾ ತಿಳಕಂಡೂ ಇದ್ದರಂತೆ."

"ಏನು ತಿಳಕಂಡಿದ್ರು ತಾನೆ ಏನೊ ಉಗ್ರಿ. ಹೋಗಿ ಹೋಗಿ ಅಂತ ಬಸ್ನೆ ಸುಟ್ಹಾಕಿದ್ರು, ನಾನು ಬಸ್ ಚಾರ್ಜ್ ಏರಿಸಿದ್ಕೆ ಸುಟ್ಟವುರೆ ಅಂದ್ರೆ, ಇವುರದೆ ಯಾವುದೊ ಕಾರಣ ಕೊಟ್ರು."

"ಅವುರು ಮಾಡ್ತಯಿರೋದೊಂದಾದ್ರೆ ಆಯ್ತಾಯಿರದೇ ಬ್ಯಾರೆ ಕಣೊ ವಾಟಿಸ್ಸೆ, ಅದ್ಕೆ ಇದೀ ಮಲ್ನಾಡ್ನಲ್ಲ ಬಿಜೆಪಿ ಕಡೆ ಹೋಯ್ತಾ ಅದಂತೆ."

"ಅದ್ಯಾಕ್ ಬಿಜೆಪಿಗೋದರ್ಲ?" ಎಂದಳು ಜುಮ್ಮಿ.

"ಅಲ್ಲಿ ನಕ್ಸಲ್ಯೈಟ್ರು ಚಳವಳಿ ನೋಡಿ ಕಾಂಗ್ರೆಸ್‌ನವು ಸುಮ್ಮನಿದ್ದವಂತೆ. ಈ ಬಿಜೆಪಿ ನನಮಕ್ಳ ಬಟ್ಟೆವಡದೂ ವಡದೂ, ನಾವು ನಕ್ಸಲೈಟರಿಂದ ನಿಮ್ಮ ರಕ್ಷಣೆ ಮಾಡ್ತಿವಿ ಅಂತ ಹೇಳಿಕಂಡು ತಿರುಗ್ತ ಅವುರೆ. ಇವುರೆ ವಾಸಿ ಅಂತ ಜನ್ನಲ್ಲ ಬಿಜೆಪಿ ಕಡಿಕೋಯ್ತಾ ಅವುರಂತೆ."

"ಅಂಗಾದ್ರೆ ಇನ್ನೂ ಡ್ಯೆಂಜರಲ್ವೊ ಉಗ್ರೀ?"

"ಡ್ಯೆಂಜರು ಅಂತ ಕೇಳಿಯಾ? ಇನ್ನು ನೋಡಿವಿರು."

"ಈಗ್ಲೆ ಸಾಕಾಗ್ಯದೆ ಕಣೊ ಉಗ್ರಿ, ಈ ಡರ್ಟಿ ಫೆಲೋಸ್ ಪವರ್ರಿಗೆ ಬಂದಮ್ಯಾಲೆ ನಮ್ಮಣ್ಣಾವುರು ತೀರೋದ್ರು, ತೇಜಸ್ವಿ ತೀರೋದ್ರು, ನಮ್ಮ ಬ್ರದರ್ ತರ ಇದ್ದ ರಾಂದಾಸ್ ತೀರೋದ್ರು, ಪಾಪ ನಕ್ಸಲೈಟ್ರಿಗೆ ಅನ್ನ ಕೊಟ್ಟಿದ್ಕೆ ಆ ರಾಮೇಗೌಡನ ಕುಟುಂಬ ಕೊಲಾಪ್ಸಾಯ್ತು. ದಿಸೀಸ್ ವೆರಿಬ್ಯಾಡ್ ಸಿಚುಯೇಶನ್ನು ಕಣೊ" ಎಂದು ವಾಟಿಸ್ಸೆ ಅಲ್ಲಿಂದ ಕಾಲ್ಕಿತ್ತ. ■

ಅಂದರೆ ಸಿಬಿಐನವರಿಗೆ ಈ ವಿಷಯ ತಿಳಿದಿರಲಿಲ್ಲವಂತೆ! ಹೇಗಿದೆ ಶೆಖಾವತ್ ಸಾಹೇಬರ ದರ್ಬಾರು!

ಬ್ಲೇಡ್ ಕಂಪನಿಗಳು ಎಲ್ಲಾ ಕಡೇನೂ ಇರ್ತಾವೆ. ಆದರೆ 'ಆಮ್‌ವೋರ್ಟ್' ಕಂಪನಿಯ ವಿಶೇಷ ಅಂದರೆ ಅದರ ಪ್ರಾರಂಭೋತ್ಸವ ನಡೆದದ್ದೇ ಶೆಖಾವತ್ ಸಾಹೇಬರ ಅಮೃತಹಸ್ತದಿಂದ. ಆಮೇಲೆ ಮಾಮೂಲಿ ಬಡರೈತರ, ಅಮಾಯಕರ ಕೋಟ್ಯಂತರ ರೂಪಾಯಿಗಳಿಗೆ ತಿರುಪತಿ ಮಾಡಿ ಮಾಯ! ರಾಜಸ್ತಾನದ ಹಲವೆಡೆ ಈ ಕಂಪನಿಯ ವಿರುದ್ಧ ಕೇಸುಗಳು ದಾಖಲಾದೋ. ನ್ಯಾಯಾಲಯದ ಆದೇಶದ ಮೇರೆಗೆ ಒಂದು ಎಫ್‌ಐಆರ್‌ನಲ್ಲಿ ಶೆಖಾವತ್ ಹೆಸರೂ ದಾಖಲಾಯಿತು. ಆಮೇಲೇನಾಯಿತು? ಹೀಗೆ ನ್ಯಾಯಾಲಯದಿಂದ ಆಜ್ಞೆ ಜಾರಿ ಮಾಡಿಸಿದ ಎಸ್‌ಪಿ ಮಹಾವೀರ ಪ್ರಸಾದ್‌ಗೆ ಸಲ್ಲದ ಕಿರುಕುಳ. ಈ ಮಾನಸಿಕ ಒತ್ತಡ ತಾಳಲಾರದೆ ಆ ದಲಿತ ಎಸ್‌ಪಿ ಮೆದುಳಿನ ರಕ್ತಸ್ರಾವದಿಂದ ಮರಣ ಹೊಂದಿದ.

ದಲಿತರ ಬಗ್ಗೆ ಇವರ ಕಾಳಜಿ ಇದು! ಹೋಗಲಿ ಮಹಿಳೆಯ ಬಗ್ಗೆ ಸುಸಂಸ್ಕೃತ ಭಾರತೀಯ ಜನತಾಪಕ್ಷದ ನೇತಾರರ ವರ್ತನೆ ಹೇಗಿತ್ತು?

ಭಾರತೀಯ ಜನತಾಪಕ್ಷದ ನೇತಾರರಿರಲಿ, ಕಾರ್ಯಕರ್ತರಿರಲಿ ಮಹಿಳೆಯರನ್ನು ಕುರಿತು ಬಲೇ ಒಲವು. ಶಾಲಿನಿ ಶರ್ಮ ಅನ್ನೋ ರಾಜಸ್ತಾನದ ಆಳ್ವಾರ ನಿವಾಸಿ ಕಂಡರೆ ಶೆಖಾವತ್ ಸಾಹೇಬರಿಗೆ ಇನ್ನಿಲ್ಲದ ಪ್ರೀತಿ. ಆಕೆ ಉನ್ನತ ಸ್ಥಾನದಲ್ಲಿರುವವರಿಗೆ ಸುಂದರವಾದ ಕನ್ನೆಯರನ್ನೂ ಒದಗಿಸುತ್ತಿದ್ದರು ಅನ್ನೋ ಆಪಾದನೆಯೂ ಇದೆ. ಅದು ಹಾಗಿರಲಿ ಪಕ್ಷದಲ್ಲಿ ಅಷ್ಟೇನೂ ಪ್ರಮುಖ ಸ್ಥಾನ ಪಡೆಯದಿದ್ದ ಆಕೆಯನ್ನು ಸಾಹೇಬರು ರಾಜ್ಯ ಸಮಾಜ ಕಲ್ಯಾಣ ಸಂಸ್ಥೆಯ ಉಪಾಧ್ಯಕ್ಷರನ್ನಾಗಿ ನೇಮಿಸಿದರು!

ಇಷ್ಟಕ್ಕೆ ಮುಗಿಯಲಿಲ್ಲ ಇವರ ಹೆಂಗಸರ ಮೇಲಿನ ಪ್ರೀತಿ. ತಾವು ಪಡೆಯುವ ಆನಂದವನ್ನು ತಮ್ಮ ರಾಜ್ಯದ ಜನತೆಯೂ ಪಡೆಯಲಿ ಎಂದಿರಬೇಕು. 1993-98ರ ಅವಧಿಯಲ್ಲಿನ ಅವರ ಆಳ್ವಿಕೆಯಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ ಇನ್ನಿಲ್ಲದಷ್ಟು ಹೆಚ್ಚು ಆಯಿತು. ರೇಪುಗಳ ಸಂಖ್ಯೆ ಎಂಟರಷ್ಟು ಅಧಿಕವಾಯಿತು. ಇದರ ವಿರುದ್ಧ ಮಹಿಳಾ ಸಂಘಟನೆಗಳು ಪ್ರತಿಭಟಿಸಿದಾಗ ಈ ಸಭ್ಯ ಮುಖ್ಯಮಂತ್ರಿ ಉತ್ತರಿಸಿದ್ದು 'ಒಂದೆರಡು ರೇಪು ಆದದ್ದಕ್ಕೆ ಯಾಕೆ ಹೀಗೆ ಕೂಗಾಡ್ತೀರಿ'. ಇದು ಮುಖ್ಯಮಂತ್ರಿಯೊಬ್ಬನ ವಿಚಾರ ಸರಣಿ ಆದರೆ ಉಪಮುಖ್ಯಮಂತ್ರಿ ಹೇಳಿದ್ದು - ಮನುಷ್ಯರ ಮಾತು ಬಿಡಿ. ಹೆಂಗಸರ ಬಾದನ್ನು ಆ ದೇವನೂ ಕಂಡುಹಿಡಿಯಲಾರ!

ಇದು ಮಹಿಳೆಯರ ಬಗ್ಗೆ ಅವರಿಗೆ ಇರುವ ಗೌರವ!

ಹೀಗೆ ಹೇಳುತ್ತಾ ಹೋದರೆ 'ಸೌಮ್ಯಮುಖ'ದ ಶೆಖಾವತ್ ಎಂತಹ ಮರುಳ ಎಂಬುದಕ್ಕೆ ಹಲವಾರು ಸಾಕ್ಷ್ಯಾಧಾರಗಳು ಸಿಗುತ್ತವೆ. ಅಲ್ಲ, ಇಂತಹ ಅಭ್ಯರ್ಥಿಯನ್ನು ಮುಂದಿಟ್ಟುಕೊಂಡು ಭಾಜಪ ಯಾಕೆ ಪ್ರತಿಭಾ ಪಾಟೀಲ್ ಬಗ್ಗೆ ಇಷ್ಟೊಂದು ಅವಹೇಳನಕಾರಿಯಾಗಿ ಮಾತನಾಡುತ್ತಿದೆ? ಆ ಪಕ್ಷವೇ ಹಾಗೆ. ಇತರರ ತೂತುಗಳನ್ನು ಕಂಡುಹಿಡಿಯುವುದರಲ್ಲಿ ಯಾವಾಗಲೂ ಮುಂದು! ಇತರೆ ಪಕ್ಷದವರು ಇಷ್ಟು ಕೀಳುಮಟ್ಟಕ್ಕೆ ಇಳಿಯಲಾರರು ಎಂಬ ಹೊಂದು ಧೈರ್ಯ!

ಗಾಜಿನಮನೆಯಲ್ಲಿ ವಾಸಿಸುವವರು ಇತರರ ಮನೆಗೆ ಕಲ್ಲು ಹೊಡೆಯ ಬಾರದು ನಿಜ. ಆದರೆ ಇತರರು ಕಲ್ಲು ಹೊಡೆಯಲಾರರು ಎಂದು ತಿಳಿದರೆ.... ■

ಮರೆಯುವ ಮುನ್ನ




ಪಿ. ಲಂಕೇಶ್

ಜನವರಿ 29, 1989

ಕೃಷ್ಣ ಒಂದು ಸಂತಾಪ ಸಭೆ

"ಕನ್ನಡ ಕಾವ್ಯ ಒಂದು ಗಂಭೀರ, ಅರ್ಥಪೂರ್ಣ ದನಿಯನ್ನು ಕಳೆದುಕೊಂಡಿದೆ. ಈತನ ಪ್ರೀತಿಯ ಎದುರು ಮಂತ್ರಮುಗ್ಧನಾಗುತ್ತಿದ್ದೆ. ಈತ ಏನು ಕೇಳಿದರೂ ಸಂತೋಷದಿಂದ ಕೊಡುತ್ತಿದ್ದೆ" ಅಂದರು ಸು.ರಂ.ಎಕ್ಕುಂಡಿ. ಆಲನಹಳ್ಳಿ ಕೃಷ್ಣನಿಗೆ ಎಕ್ಕುಂಡಿಯವರು ಸಂತಾಪ ಸೂಚಿಸುತ್ತಿದ್ದರು. ಹಳ್ಳಿಯ ಸೊಗಡು, ಗ್ರಾಮ ನುಡಿಗಟ್ಟಿನ ಚಂದವನ್ನು ಉಕ್ಕಿಸುತ್ತಿದ್ದ ಕೃಷ್ಣ ತಣ್ಣಗಾಗಿದ್ದ. ಅನ್ವೇಷಣೆ, ಸ್ವಾತಿ ಸಿಂಡಿಕೇಟ್ಸ್, ಸಂವಾದ ಎಂಬ ಗುಂಪುಗಳ ಸದಸ್ಯರು ಹಡಪದ್ ಅವರ ಕಲಾಶಾಲೆಯಲ್ಲಿ ಏರ್ಪಡಿಸಿದ್ದ ಈ ನೆನಪಿನ ಸಭೆಗೆ ಮುನ್ನ ಎರಡು ನಿಮಿಷ ಮೌನ ಆಚರಿಸೋಣವೇ ಎಂಬ ಪ್ರಶ್ನೆ ಬಂತು. ನಾನು ಬೇಡ ಅಂದೆ. ಕೃಷ್ಣ ಮಾತಾಡತೊಡಗಿದರೆ ನಾವೆಲ್ಲ ಅದನ್ನು ನಿಲ್ಲಿಸುವುದೇ ಕಷ್ಟವಾಗಿತ್ತು; ಈಗ ಸಾವು ಅವನನ್ನು ಮೌನವಾಗಿಸಿದೆ. ಇದರ ಲಾಭ ಪಡೆದು ಮೌನ ಆಚರಿಸುವುದು ತಪ್ಪು, ಆತ ಮಾತಾಡುತ್ತಲೇ ಇದ್ದಾನೆ ಎಂದು ಭಾವಿಸೋಣ. ನಿಲ್ಲದ ಅವನ ಮಾತಿನ ನಡುವೆಯೇ ನಮ್ಮ ಮಾತು ಸೇರಿಸೋಣ, ಎಂದು ಚಿಂತಿಸಿದೆ.

ಇದು ನನಗೆ ಅಸಹಜವಾಗಿ ಕಾಣುವುದಿಲ್ಲ, ಕೃಷ್ಣನ ದೋಷಗಳನ್ನು ನೆನೆಯುತ್ತಲೇ ಅವನ ಗುಣಗಳನ್ನು, ಸಾಧನೆಯನ್ನೂ ಚಿಂತಿಸುವುದು ತಪ್ಪಲ್ಲ. ಎಲ್ಲ ಸಾಹಿತ್ಯಕ್ಕೆ ಮನುಷ್ಯನ ದ್ವಂದ್ವಮಯ ಬದುಕೇ ವಸ್ತುವಾದ್ದರಿಂದ ಮನುಷ್ಯನಾಗಿ ಕೃಷ್ಣ ಹೇಗಿದ್ದ ಎಂದು ಕುತೂಹಲವಾಗುವುದು ಸಹಜ. ಅವತ್ತು ಮಾತಾಡಿದ ಬಿ.ಟಿ.ಲಲಿತಾನಾಯಕ್ ಅವರು, "ಕೃಷ್ಣ ಅವರಿಗೆ ನಾನು ವಿಧಾನಪರಿಷತ್ ಸದಸ್ಯೆಯಾದದ್ದರ ಬಗ್ಗೆ ಸಿಟ್ಟು, ತಾತ್ಸಾರ ಇತ್ತು, ನೀವು ವಿಧಾನಸೌಧ ಸೇರಿ ಸಾಹಿತಿಯಾಗಿ ಸತ್ತುಹೋಗ್ತೀರಿ ಎಂದು ಹೇಳುತ್ತಿದ್ದರು. ಮತ್ತು ನನ್ನನ್ನು ಒಮ್ಮೆಯೂ ವಿಶ್ವಾಸದಿಂದ ನೋಡಲಿಲ್ಲ, ಆದರೂ ನನಗೆ ಅವರ ಮೇಲೆ ಸಿಟ್ಟಿರಲಿಲ್ಲ, ಅವರ ಪ್ರತಿಭೆ ನನ್ನಲ್ಲಿ ಗೌರವ ಹುಟ್ಟಿಸಿತ್ತು" ಅಂದರು. ತಮಾಷೆ ಎಂದರೆ, ಆಮೇಲೆ ಮಾತಾಡಿದ ಕೆ.ಎನ್. ನಾಗೇಗೌಡರು "ಕೃಷ್ಣ ನನ್ನಲ್ಲಿ ವಿಧಾನಸಭೆಯ ಚುನಾವಣೆಗೆ ಟಿಕೆಟ್ ಕೊಡಿಸಲು ಕೇಳಿಕೊಂಡಿದ್ದರು" ಅಂದರು. ಇದು ತೋರಿಸುವುದು, ಕೃಷ್ಣನಿಗೆ ಲಲಿತಾ ನಾಯಕರ ಬಗ್ಗೆ ತಾತ್ಸಾರದ ಜೊತೆಗೆ (ಅಥವಾ ಬದಲು) ಮತ್ಸರವಿತ್ತು. ಮೇಲಾಗಿ, ಕೃಷ್ಣನಿಗೆ (ಲಲಿತಾ ನಾಯಕರಂತೆಯೇ) ವಿಧಾನಸಭೆಗೆ ಯಾಕೆ ಹೋಗಬೇಕೆಂದು ಗೊತ್ತಿರಲಿಲ್ಲ.



"ಹೆಂಗಸರನ್ನು ಕಂಡರೆ ಕೃಷ್ಣನಿಗೆ ತುಂಬ ಆಶೆ!" ಎಂದು ನಾಗೇಗೌಡರು ತಮಾಷೆಯ ಧ್ವನಿಯಲ್ಲಿ ಹೇಳಿದರು. ಅದು ನಿಜ. ಕೃಷ್ಣ ಪ್ರೇಮಿ ಮತ್ತು ಕಾಮುಕ ಎರಡೂ ಆಗಿದ್ದನೆಂದು ಕಾಣುತ್ತದೆ. ಈತನನ್ನು ನೆನೆಯುವಾಗ ಕಾಮ, ಪ್ರೇಮ, ವ್ಯಭಿಚಾರ, ಸ್ತ್ರೀಧ್ಯಾನ, ಭ್ರಮೆ ಮುಂತಾದುವೆಲ್ಲ ಒಂದರೊಡನೊಂದು ಸೇರಿಕೊಳ್ಳುತ್ತವೆ. ಇಲ್ಲಿ ಕೂಡ ಕೃಷ್ಣನಿಗೆ ಅನ್ಯಾಯ ಮಾಡುವುದು ತಪ್ಪು, ಯಾಕೆಂದರೆ, ನನ್ನ ಭಾಷಣದಲ್ಲಿ ಸೂಚಿಸಿದಂತೆ, ಹೆಂಗಸರನ್ನು ಇಷ್ಟಪಡದ ಗಂಡಸು ಒಬ್ಬನೂ ಇರಲಾರ. ಆದರೆ ಕೃಷ್ಣ ಹೇಳಿಕೊಳ್ಳುವ ಸ್ವಭಾವದವನು ಅಷ್ಟೆ. ಪ್ರೇಮಕ್ಕಿರುವ ಬಿಂಕ, ಶೈಲಿ, ವಿರಹದ ಬಗ್ಗೆ ಅಷ್ಟು ಗಮನ ಕೊಡದವನು ಕೃಷ್ಣ. ಪ್ರೇಮ ಮತ್ತು ಕಾಮ ಎಷ್ಟು ಸಂಕೀರ್ಣವೆಂದರೆ, ವಂಶದ ಕುಡಿಯನ್ನು ಬೆಳೆಸುವ ಉದ್ದೇಶದಿಂದ ಕುಂತಿ ಕಾವ್ಯದ ನೆರವು ಪಡೆದು ಪ್ರೇಮಿಸಬೇಕಾಯಿತು; ವಂಶದ ಬಗ್ಗೆ ಚಿಂತಿಸಲು ಕೂಡ ಹೋಗದ ದ್ರೌಪದಿ ಐದು ಜನ ಗಂಡಂದಿರ ಆಲಿಂಗನದಲ್ಲಿನ ಕಾವು ಕಳೆದ ದಿನ ಆರನೆಯವನ ಬಗ್ಗೆ ಸ್ಪಂದಿಸಿದಳು. ಇದೂ ಕಾವ್ಯದಲ್ಲಿ. ಕಾವ್ಯ ಹೀಗೆ ಚಿಲ್ಲರೆ ಎನ್ನಿಸಿಕೊಳ್ಳುವ ವಿಷಯಗಳನ್ನು ಅಮೂಲ್ಯವಾಗಿಸುತ್ತದೆ; ಹೇಳಿಕೆಯಲ್ಲಿ ಅಶ್ಲೀಲವಾಗಬಹುದಾದ್ದು ಕಾವ್ಯದ ಮೂಲಕ ಮನುಷ್ಯನ ಪ್ರಾಣಿ ಸಹಜ ವಾಂಛಲ್ಯಗಳನ್ನು ಹಿಡಿದಿಟ್ಟು ಮನುಕುಲದ ವ್ಯಸನ, ಕಾಮುಗಳನ್ನು ಬಿಂಬಿಸುತ್ತದೆ. ಆಲನಹಳ್ಳಿ ಕೃಷ್ಣನಂತಹ ಕವಿ ವಿಧಾನಸಭೆ, ವಿಧಾನ ಪರಿಷತ್ ಬಗೆಗಿನ ವ್ಯಸನಗಳ ಜೊತೆಗೇ ಮನುಷ್ಯನ ಬದುಕೇ ಹೇಗೆ ಆವೃತ ಮಯೂರ ನರ್ತನ ಎಂಬುದನ್ನು ತೋರಬೇಕಿತ್ತು, ಎಲ್ಲ ಆಂದೋಲನ ಕದನ, ಮಹಾಕಾವ್ಯ, ವೈಜ್ಞಾನಿಕ ಸಂಶೋಧನೆ, ಕೃಷಿಯ ಸಾಧನೆಗಳ ಹಿಂದುಗಡೆ ಸರಳ ಮಯೂರಿ, ಸಾಲಂಕೃತ ಮಯೂರನ ನಡಿಗೆ, ನರ್ತನ ಇರುತ್ತದೆನ್ನಿಸುತ್ತದೆ.

ಕೃಷ್ಣನ ಬಗ್ಗೆ ನೆನೆಯುತ್ತ ಚೆನ್ನಾಗಿ ಮಾತಾಡಿದ ನಾಗೇಗೌಡರು ವಯಸ್ಸಿನಲ್ಲಿ ಸ್ವಲ್ಪ ಚಿಕ್ಕವರಾದರೂ ಟಿಪಿಕಲ್ ರಾಜಕಾರಣಿ. ನಮ್ಮ ರಾಜಕಾರಣಿಯ ಸ್ಯಾಂಪಲ್ ನಿಮಗೆ ಗೊತ್ತು, "ನಾನು ರಾಜಕಾರಣಿ. ದಿನನಿತ್ಯದ ವಾಸ್ತವದಲ್ಲಿ ಮುಳುಗಿರುವವನು, ನನಗೆ ಪುಸ್ತಕ ಓದಲು ವೇಳೆ ಇರುವುದಿಲ್ಲ, ಆದ್ದರಿಂದ ಕೃಷ್ಣನಂಥ ಸೂಕ್ಷ್ಮಮತಿಯ ವ್ಯಕ್ತಿ ರಾಜಕೀಯಕ್ಕೆ ಬರಲು ಇಷ್ಟಪಟ್ಟಾಗ ವ್ಯಥೆಯಾಯಿತು" ಅಂದರು ನಾಗೇಗೌಡರು. ಇಂಥ ಮಾತನ್ನು ನಾವೆಲ್ಲ ಅನೇಕ ಸಲ ಕೇಳಿದ್ದೇವೆ. ರಾಜಕಾರಣಿಗಳು ಅಧಿಕಾರವನ್ನು ಮತದ ಡಬ್ಬಿಯಲ್ಲಿ ಮತ್ತು ವಿಧಾನಸೌಧದಲ್ಲಿ ಕಾಣುತ್ತಾರೆ. ಆದರೆ ನನ್ನ ಪ್ರಕಾರ ಅಧಿಕಾರವಿರುವುದು ಬದುಕಿನ ಪೂರ್ಣ ಗ್ರಹಿಕೆಗೆ, ಸಂಕೀರ್ಣ ಪುನರ್ರಚನೆಗೆ. ಆದ್ದರಿಂದಲೇ ರಾಜಕಾರಣಿ ಅಮೆಚೂರ್ ಆಗಿಯಾದರೂ ಇದೀ ಬದುಕಿಗೆ ಪ್ರತಿಕ್ರಿಯೆಗೊಳ್ಳಬೇಕಾಗುತ್ತದೆ. ಇಲ್ಲಿಯ ಕಸುಬು, ಕಲೆ, ಸಾಹಿತ್ಯವೆಲ್ಲವನ್ನೂ ಸ್ವಲ್ಪವಾದರೂ ತಿಳಿದಿರಬೇಕಾಗುತ್ತದೆ. ಆಗ ಮಾತ್ರ ಸಂಗೀತಗಾರನ ಕೈಯಲ್ಲಿ ಗುದ್ದಲಿ ಪಿಕಾಸಿ ಇಡುವುದು, ನೃತ್ಯಗಾರನ ಕೈಯಲ್ಲಿ ಗುಮಾಸ್ತನ ಲೇಖನಿ ಇಡುವುದು ತಪ್ಪುತ್ತದೆ. ಜೀವನವನ್ನು ಇಡಿಯಾಗಿ ನೋಡಬಲ್ಲವನು ಮಾತ್ರ ಜೀವನವನ್ನು ತಿದ್ದಬಲ್ಲ, ಮುನ್ನಡೆಸಬಲ್ಲ, ಇದೆಲ್ಲ ನಿಜ. ಅಷ್ಟೇ ಮುಖ್ಯವಾದದ್ದು, ಸಹಸ್ರಾರು ವರ್ಷದಿಂದ ಉತ್ತರವೇ ದೊರಕದೆ ಉಳಿದಿರುವ ಪ್ರಶ್ನೆ, ಚಿಂತನೆ ಮತ್ತು ಕ್ರಿಯೆಗಿರುವ ಸಂಬಂಧ ಕುರಿತದ್ದು. ಬರೀ ಚಿಂತಿಸಬಲ್ಲವನು, ವಿಚಾರ ಮಾಡಬಲ್ಲವನು ಬರಡು ಮನುಷ್ಯ ಎಂದು ಹದಿನಾರನೆ ಶತಮಾನದ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್ ಹೇಳಿದ; ಅನುಷ್ಠಾನದಲ್ಲಿ ಪರೀಕ್ಷೆಗೊಳಗಾದಾಗ ಮಾತ್ರ ವಿಚಾರಕ್ಕೆ ಬೆಲೆ ಬರುತ್ತದೆ. ಹಾಗೆಯೇ ತತ್ವಜ್ಞಾನಿಯ ಬದುಕು ಸಾರ್ಥಕವಾಗುತ್ತದೆ.

"ಕೃಷ್ಣನ ತಪ್ಪಿಲ್ಲ, ಆತ ಆಧುನಿಕ ಕಾಲದ ಒತ್ತಡಕ್ಕೆ ಬಲಿಯಾಗಿ ದ್ವಂದ್ವಗಳ ಮನುಷ್ಯನಾದ ಅಷ್ಟೆ" ಅಂತ ಕ.ವೆಂ. ರಾಜಗೋಪಾಲ ಎಂಬ ನನ್ನ ಹಳೆಯ ಮಿತ್ರ ಹೇಳಿದ. ಆದರೆ ಬೇಕಂತಲೇ ದ್ವಂದ್ವ ಸೃಷ್ಟಿಸಿಕೊಳ್ಳುವವನ ಬಗ್ಗೆ ಏನು ಹೇಳಬೇಕು? ಒಂದು ಕುತೂಹಲದ ಕಾಕತಾಳೀಯವಿದೆ. ಫ್ರಾನ್ಸಿಸ್ ಬೇಕನ್ ಕೂಡ ತತ್ವಜ್ಞಾನಿ ಮತ್ತು ರಾಜಕಾರಣಿ. ಆತ ಚಿಕ್ಕವನಾಗಿದ್ದಾಗ ಒಂದು ಅಧಿಕಾರ ಸ್ಥಾನ ಅಲಂಕರಿಸಿದ್ದ. ಬೇರೆ ಪಕ್ಷ ಅಧಿಕಾರಕ್ಕೆ ಬಂದೊಡನೆ ಆ ಕೆಲಸ ಹೋಯಿತು. ಮತ್ತೆ ತನ್ನವರು ಅಧಿಕಾರಕ್ಕೆ ಬಂದಾಗ ಬೇಕನ್ ತನಗೆ ಸ್ಥಾನಮಾನ ಕೊಡುವಂತೆ ಬೇಡಿಕೊಂಡ. ತನ್ನ ಅರ್ಹತೆಯನ್ನೆಲ್ಲ ವಿವರಿಸಿದ, ಸ್ಥಾನದ ಅಗತ್ಯ ತನಗೆ ಎಷ್ಟಿದೆಯೆಂದು ಗೋಗರೆದ. ಅವನಿಗೆ ಸ್ಥಾನ ಸಿಕ್ಕಲಿಲ್ಲ, ಆಮೇಲೆ ಬೇಕನ್ ಹೇಳಿದ, "ರಾಜಕೀಯದಲ್ಲಿ ನಮ್ಮ ಬಂಡವಾಳವನ್ನೆಲ್ಲ ಬಿಚ್ಚಿಡಬಾರದು, ಅನೇಕ ವಿಷಯಗಳನ್ನು ಗುಪ್ತವಾಗಿಯೇ ಇಟ್ಟುಕೊಳ್ಳಬೇಕು."

ಒತ್ತಡಕ್ಕೆ ಮಣಿದು ಕೃಷ್ಣ ನಾಶವಾಗಿದ್ದರೆ, ಅರೀಲಿಯಸ್ ತರಹದ ರಾಜ, ಮಾವ್ಹೋ ತರಹದ ಕವಿ, ನೆರೂಡ ತರಹದ ಆಡಳಿತಗಾರ- ಕ್ಷಣಾರ್ಧದಲ್ಲಿ ನಾಶವಾಗುವಷ್ಟು ಒತ್ತಡಗಳು ಅವರ ಮೇಲಿದ್ದವು.

ಅವತ್ತಿನ ಸಂತಾಪಸೂಚಕ ಸಭೆಯಲ್ಲಿ ಎಲ್ಲರೂ ಹೇಳಿದ್ದು ನೆನಪಾಗುತ್ತಿಲ್ಲ. ಆದರೆ ಒಂದೆರಡು ವಿಚಿತ್ರಗಳು ನೆನಪಾಗುತ್ತಿವೆ. ಅವುಗಳಲ್ಲಿ ಒಂದು, ಕೃಷ್ಣನ ನೆನಪು ಕೇಳಿ ಗೊಳ್ಳನೆ ನಗುತ್ತಿದ್ದ ಎಲ್ಲರಲ್ಲೂ ಕೃಷ್ಣನ ಸಾವನ್ನು ಕುರಿತು ವಿಷಾದದಿಂದ ತುಂಬಿದ್ದುದು. ಅದು ಕೃಷ್ಣನ ಬದುಕಿನಂತೆಯೇ ಇತ್ತು, ಅಲ್ಲಿ ಪ್ರಚಂಡ ಹರಟೆ, ದುಸ್ಸಾಹಸಗಳು, ಸೂಕ್ಷ್ಮಗ್ರಹಿಕೆ, ತೀವ್ರ ವಿಫಲತೆಯೆಲ್ಲ ಇದ್ದವು. ಆದ್ದರಿಂದಲೇ ಈ ವಿಚಿತ್ರ ಸಂತಾಪಸೂಚಕ ಸಭೆಯಲ್ಲಿ ಕಣ್ಣೀರಿಗೆ ಬದಲು ನಿಟ್ಟುಸಿರು, ಬೊಗಳೆಗೆ ಬದಲು ಸಾವಿನ ಬಗ್ಗೆ ದುಗುಡ ಇದ್ದವು.

ಅಲ್ಲಿ ಕಂಡುಬಂದ ಇನ್ನೊಂದು ವಿಚಿತ್ರ, ಸಾವು ಒಬ್ಬ ವ್ಯಕ್ತಿಗೆ ಎಸಗುವ ನ್ಯಾಯ. ಯಮನ ಸುಪರ್ದಿಗೆ ಸೇರಿದ ವ್ಯಕ್ತಿ ತನ್ನ ನೆನಪಿನ ಮೂಲಕವೇ ಎಲ್ಲರಿಗೆ ತೊಂದರೆ ಕೊಡುವುದು ಅಪರೂಪಕ್ಕೊಮ್ಮೆ. ಜವಹರಲಾಲ್ ನೆಹರೂ, ಅವರ ಮೂಲಕ ಇಂದಿರಾ, ರಾಜೀವರ ಮೂಲಕ ಇಂದಿರಾ ಮಾಡಿದ್ದು ನಮಗೆಲ್ಲ ತಿಳಿದಿದೆ. ಆದರೆ ಸಾಹಿತಿಯ ಬದುಕಿಗೆ ವಾರಸುದಾರರು ಓದುಗರು. ಆದ್ದರಿಂದಲೇ ನಾಗೇಗೌಡರ ಮೂಲಕ ಎಲ್ಲ ರಾಜಕಾರಣಿಗಳಿಗೆ ವಿನಮ್ರನಾಗಿ ಸೂಚಿಸಿದೆ: "ಕೃಷ್ಣನ ದೇಹವನ್ನು, ಚಟುವಟಿಕೆಯನ್ನು ಮಾತ್ರ ನೋಡಿದ್ದ ನೀವು ಅವನ ಪುಸ್ತಕಗಳನ್ನು ಈಗ ಓದಬೇಕು." ಓದಾಡುವ ಮನುಷ್ಯ ಮೂರ್ಖನಂತೆ ಕಾಣುತ್ತಾನೆ; ಸಾಹಿತ್ಯ ಕೃತಿ ಆತನಿಂದ ಮುಕ್ತವಾಗಿ ವಿಚಿತ್ರ ಸಂದೇಶಗಳನ್ನು ಕಳಿಸುತ್ತದೆ. ■

ಪ್ರೇಮಿಗಳಿಗಾಗಿ ಬಸ್ಸುಗಳನ್ನು ಮೀಸಲಿಟ್ಟರೆ?

ಕಣ್ಣಾಮುಚ್ಚಾಲೆ

ಆರ್. ಮಂಜುನಾಥ, ಗೆದರೆ

ಸಿ.ಎಂ. ಗ್ರಾಮವಾಸ್ತವ್ಯಕ್ಕೂ, ಯಡ್ಡಿ ಶೋಭಾಸ್ತ್ರ ಮಕ್ಕೂ ಏನು ವ್ಯತ್ಯಾಸ?

◆ ಕಲಿಗಾಲ ಕರ್ಣ. ಒಬ್ಬನಿಗೆ ಅವಧಿಗೆ ಮೊದಲೇ ವೈರಾಗ್ಯ. ಇನ್ನೊಬ್ಬನಿಗೆ ಮುಪ್ಪು ಬಂದರೂ ಬಿಡದ ವ್ಯಾಮೋಹ!

ಕುತ್ಬುದ್ದೀನ್ ಎಸ್. ಶಿರಹಟ್ಟಿ, ಗೋಕಾಕ್

ಮಧ್ಯರಾತ್ರಿ, ಎಚ್ಚೆತ್ತವಳಿಗೆ ಪತಿದೇವ ಹೊರಗಣ ವನು ಅನಿಸಿದರೆ?

◆ 'ಮುಟ್ಟು'ಗೋಲು ಹಾಕಬೇಡಿ!

ಓಮಸಿದ್ದೇಗೌಡ ಕೆಬ್ಬೆಳ್ಳಿ, ಕನಕಪುರ

"ಎಲ್ಲರೊಳಗೊಂದಾಗು ಗೌರಿ" ಅಂದ್ರೆ ಆಗೋಲ್ಲ ಅಂತಾರಲ್ರೀ?

◆ ದುಷ್ಟರನ್ನು ಕಂಡ್ರೆ ದೂರ ಇರು ಅಂತ ಅವರಪ್ಪ ಹೇಳಿಕೊಟ್ಟಿದ್ದಾರಂತೆ.

ಡಿ.ಎಲ್. ನಾಗರಾಜ್, ಹರಪನಹಳ್ಳಿ

ಹುಡುಗಿಯರು ಬಂದಾಗ ಹುಡುಗ್ರು ಎದ್ದು ನಿಲ್ಲುತ್ತಾರೆ ಯಾಕೆ?

◆ ಹಾಗಂತ ತೀರಾ ಕಾಲುಚಾಚಿ ಮಲಗಲಿ ಅಂತ ನಿಮ್ಮ ಆಸೆ ಏನ್ರಿ?

ಪಿ.ಎನ್. ಶ್ರೀವತ್ಸ, ಬೆಂಗಳೂರು

ಹೆಣ್ಣಿನ ಸಂತತಿ ಹೀಗೇ ನಶಿಸುತ್ತಾ ಹೋದರೆ ಮುಂದೆ ಗಂಡುಗಳ ಗತಿ.....?!

◆ ವಿಧಿ ಇಲ್ಲದೆ ಸ್ತ್ರೈವತ್ಸ ಆಗುತ್ತಾರೆ!

ಬಾಣಾವರ ಪಟ್ಟಾಭಿ, ಬೆಂಗಳೂರು

ಬುದ್ಧಿಜೀವಿಗಳ ಭಿನ್ನಾಭಿಪ್ರಾಯ ಹಾದಿರಂಪ ಬೀದಿ ರಂಪ ಆಗುತ್ತಿದೆಯಲ್ಲಾ?

◆ ಸರ್ಕಾರದ ಭೀತಿ ಮತ್ತು ಭಕ್ಷೀಸಿಗೆ ಬಲಿಯಾದ ವರಿಂದಾದದ್ದು ಬಿಡಿ.

ಬಸವರಾಜ ಹೂಗಾರ್, ಸವದತ್ತಿ

ಕಷ್ಟವಾದರೂ-ಇಷ್ಟವಾಗುವ ಕೆಲಸ ಯಾವುದು?

◆ ಓದುಗರನ್ನು ಮಾತ್ರ ನಂಬಿ ಪತ್ರಿಕೆ ನಡೆಸೋದು.

ಡಿ.ಎಲ್. ಸುರೇಶ್, ಹರಪನಹಳ್ಳಿ

ಕನ್ನಡಿಗರ ಹಿಟ್ಲರ್?

◆ ನಾರಾಯಣಗೌಡ ಮತ್ತು ಪ್ರವೀಣ್ ಶೆಟ್ಟಿ ನಡುವೆ ಫೈನಲ್ ನಡೆಯುತ್ತಿದೆ, ಕಾಯಿರಿ!

ಕಾಳೀಹುಂಡಿ ಶಿವಕುಮಾರ್, ಮೈಸೂರು

ಮೊದಲ ಕಿಸ್ಸಿಗೆ 'ಧಮಾರ್' ಆದವರು ಸಪ್ಲಿಮೆಂಟರಿ ಕಟ್ಟಿದರೆ ಹೇಗೆ?

◆ ದಡ್ಡ ಗಾಳಿ ಬಂದಾಗ ತೂರ್ಕೊಬೇಕು ಗೊತ್ತಾ?

ಬಹುಮಾನಿತ ಪ್ರಶ್ನೆ

ಹಸೀನಾ ಸರಫರಾಜ್, ಗೋಕಾಕ್

ಪ್ರೇಮಿಗಳಿಗಾಗಿ ಬಸ್ಸುಗಳನ್ನು ಮೀಸಲಿಟ್ಟರೆ?

◆ ಅದು 'ಸ್ಲೀಪರ್' ಕೋಚ್ ಆಗಿರಲಿ ಅಂತಾ ಬೇಡಿಕೆ ಇಡ್ತಾರೆ!

ಬಿ. ಚಂದ್ರೇಗೌಡ, ಬೆಂಗಳೂರು

ಮದುವೆಗೆ ಯಾಕೆ ಎಲ್ಲರನ್ನೂ ಕರೀತಾರೆ?

◆ ಆಕ್ಸಿಡೆಂಟ್ ಆದಾಗ ಜನ ಮುತ್ತಿಕೊಂಡು ನೋಡ್ತಿರ್ತಾರೆ ಯಾಕೆ?

ರಾಜ್‌ಕುಮಾರ್, ಬೆಂಗಳೂರು

ಅಕಸ್ಮಾತ್ ಲೈಂಗಿಕ ಶಿಕ್ಷಣದ ಬಗ್ಗೆ ಸರ್ಕಾರ ತನ್ನ ನಿಲುವನ್ನು ಬದಲಾಯಿಸಿದರೆ ಪಠ್ಯಪುಸ್ತಕವನ್ನು ಯಾರು ಬರೆಯುತ್ತಾರೆ?

◆ ಶ್ರೀಮಾನ್ ಎಸ್.ಎಲ್. ಭೈರಪ್ಪನವರು ಈಗಾಗಲೇ 'ಮಂಧ್ರ' ಎಂದು ಬರೆದಿಟ್ಟಿದ್ದಾರಲ್ಲ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ದೇವೇಗೌಡರಿಗೆ ತಾವು ಗಂಡಸೆಂಬುದರ ಅರಿವು ಈಗೇಕಾಯಿತು?

ಜುಲೈ 11ರ ಸಂಚಿಕೆಯ ನಮ್ಮ ಪ್ರಶ್ನೆ: ಆತ್ಮಹತ್ಯೆ ಮಾಡಿಕೊಂಡು ದೇವೇಗೌಡರ ಕುಟುಂಬವನ್ನು ಪೀಡಿಸುತ್ತಿರುವ ರೈತರಿಗೆ ಯಾವ ಶಿಕ್ಷೆ ನೀಡಬೇಕು?

ನಿಮ್ಮ ಉತ್ತರ: ಜಲಿಯನ್ ವಾಲಾಬಾಗ್ ಶಿಕ್ಷೆ.


ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಸೀನಾ, ಶಿವಮೊಗ್ಗ

ಚೆನ್ನಿಗೆ ಹೇಳಿದ ಟಾಟ, ಸೌಹಾರ್ದ ಪ್ರಿಯರಿಗಿದು ಪಾಠ



ಅಂಬೇಡ್ಕರ್ ಒಂದು ಮಾತನ್ನು ಹೇಳುತ್ತಾರೆ 'ಹತ್ತು ಜನ ಸಂಪ್ರದಾಯವಾದಿ ಬ್ರಾಹ್ಮಣರನ್ನು ನಂಬು ಆದರೆ ಒಬ್ಬನೇ ಒಬ್ಬ ಜಾತ್ಯತೀತ ಬ್ರಾಹ್ಮಣನ ಬಗ್ಗೆ ಎಚ್ಚರದಿಂದಿರು' ಎಂದು. ಇದೇ ಮಾತನ್ನು ಚೆನ್ನಿ, ಜೆ.ಕೆ.ಜಿ.ಯವರ ಕುರಿತು ಹೇಳಬಹುದೇ? ಇವರೀರ್ವರೂ ಸ್ವಯಂಘೋಷಿತ ದಂಡನಾಯಕರೆಂಬ ಭ್ರಮೆಯಲ್ಲಿರುವುದರಿಂದಲೇ ಇಂತಹ ಹೇಳಿಕೆಗಳು ಹೊರಬರುತ್ತಿರುವುದು.

ನನ್ನನ್ನು ತೀವ್ರವಾಗಿ ಬಾಧಿಸುತ್ತಿರುವ ಅಂಶವೆಂದರೆ ಸೂಕ್ಷ್ಮ ಮನಸ್ಸುಗಳೆಲ್ಲ ಸಾಲುಸಾಲಾಗಿ ಸಾವಿನೆಡೆಗೆ ಸಾಗುತ್ತಿರು ವಾಗಲೇ ಫ್ಯಾಸಿಸ್ಟ್ ಮನೋಭಾವದ ಹಿನ್ನೆಲೆಯುಳ್ಳ ಪಕ್ಷವೊಂದು ಅಧಿಕಾರಕ್ಕೆ ಏರುತ್ತಿರುವುದು. ಮುಗ್ಧ ಜನರ ಗೋರಿಯ ಮೇಲೆ ಅಧಿಕಾರದ ಗದ್ದುಗೆಯನ್ನು ಭದ್ರಪಡಿಸಿಕೊಳ್ಳಬೇಕೆಂಬ ಹಂಬಲ ಇದ್ದವರಿಗೆ ತಡೆಗೋಡೆಯಾಗಿದ್ದೇ 'ಕೋಸಾವೇ.' ಆದರೆ ಹೇಗಾದರೂ ಮಾಡಿ ಹೋರಾಟದ ಮನೋಭಾವವನ್ನೆ ಹತ್ತಿಕ್ಕಬೇಕೆಂದು ಹಾತೊರೆಯುವವರಿಗೆ ಕಂಡವರೆಲ್ಲ 'ನಕ್ಸಲೈಟ್'ರಾಗಿ ಕಾಣುತ್ತಿದ್ದಾರೆ.



ಶಾಸಕರ ಭವನಕ್ಕೆ ಬಾಂಬ್ ಇಟ್ಟ ಮುತಾಲಿಕ ಮಟ್ಟಣ್ಣನನ್ನು ಯುವ ಜನಾಂಗದ ನಾಯಕನನ್ನಾಗಿ ಬಿಂಬಿಸಲು ಹೊರಟವರ ಮನದೊಳಗೆ ಇನ್ನೆಂಥ 'ಟೆರರಿಸಮ್' ಸ್ವಭಾವ ಇರುವುದೋ ಗೊತ್ತಿಲ್ಲ. ಮೇಲುಜಾತಿಯ, ಶ್ರೀಮಂತರ ಮನೆಗಳಲ್ಲಿ ಇನ್ನೂ ಜೀತದಾಳುಗಳಂತೆ ದುಡಿಯುವ ಬಡವರ ಮುಕ್ತಿ ಎಂದು? ಶೋಷಣೆ ಎಂಬುದು ಹೊಸಹೊಸ ಮುಖವಾಡಗಳನ್ನು ಹೊತ್ತು ಬರುತ್ತಿರುವಾಗ ಹೋರಾಟವನ್ನೇ ಹತ್ತಿಕ್ಕುವುದು ಸೂಕ್ತ ಪರಿಹಾರ ಎಂದು ಭಾವಿಸಿದಂತಿದೆ ಪೊಲೀಸ್ ಪಡೆ. ಮೈಮೇಲೆ ಖಾಕಿ ಧರಿಸಿ ಹಗಲು ದರೋಡೆ ಮಾಡುವ, ಹಣದಾಸೆಗಾಗಿ ನಕಲಿ ಎನ್‌ಕೌಂಟರ್ ಮಾಡುವವರ, ಕೀರ್ತಿಗಾಗಿ ಮುಗ್ಧ ಜನರನ್ನು ಬಲಿಕೊಟ್ಟವರ ಪಟ್ಟಿ ತಯಾರು ಮಾಡಬೇಕೆ ಹೊರತು ಸಾಮಾಜಿಕ ನ್ಯಾಯಕ್ಕಾಗಿ ಧ್ವನಿ ಎತ್ತುವವರ ಪಟ್ಟಿಯನ್ನಲ್ಲ.

ಹಿಂಸೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ ಎಂಬುದನ್ನು ಜಗತ್ತಿಗೆ ತಿಳಿಸಿಕೊಟ್ಟ ಗಾಂಧಿಯ ನಾಡಲ್ಲಿ ಬದುಕಿಗಾಗಿ ಬಂದೂಕುಗಳು ಮೊಳಗುತ್ತಿವೆ ಎಂದರೆ ಇಲ್ಲಿ ಎಲ್ಲರ ಬದುಕು ಹಸನಾಗಿಲ್ಲ ಎಂದೇ ಅರ್ಥ. ಇಷ್ಟಕ್ಕೂ, ನಕ್ಸಲರಿಗೂ ನಮಗೂ ಇರುವ ವ್ಯತ್ಯಾಸವಾದರೂ ಏನು? ನಾವು ಲೇಖನಿ ಹಿಡಿದು ಕೇಳುತ್ತೇವೆ. ಅವರು ಬಂದೂಕು ಹಿಡಿದು ಘರ್ಜಿಸುತ್ತಾರೆ.

'ಒಲೆ ಹತ್ತಿ ಉರಿದರೆ ನಿಲ್ಲಬಹುದು, ಧರೆ ಹತ್ತಿ ಉರಿದರೆ ನಿಲಲಾಗದು' ಎಂಬ ಬಸವಣ್ಣನ ಎಚ್ಚರಿಕೆ ಅಧಿಕಾರದಲ್ಲಿದ್ದವರಿಗೆ ಬಲುಬೇಗ ಅರ್ಥವಾದರೆ ಸಾಕು.

ಬಾಬ್ರಿ ಮಸೀದಿ ಕೆಡವಲು ಕಾರಣರಾದವರು ಕೇಂದ್ರದಲ್ಲಿ ಅಧಿಕಾರ ಕಂಡರು. ಗುಜರಾತ್‌ನ 'ನರಮೇಧ' ನಡೆಸಿದ ಮೋದಿ ಅಧಿಕಾರದ ಮೋಜು ಕಂಡ. ಭ್ರಷ್ಟಾಚಾರದಲ್ಲಿರುವ ರಾಜಕಾರಣಿಗಳಿಗೆ ರಾಜಮರ್ಯಾದೆ ದೊರೆಯುವ ಈ ಹೊತ್ತಿನಲ್ಲಿ ಬದುಕಿನ ಮೂಲಭೂತ ಅವಶ್ಯಕತೆಗಳ ಈಡೇರಿಕೆಗಾಗಿ ಹೋರಾಡುವವರನ್ನು ಗಡಿಪಾರು ಮಾಡಿ, ಎನ್‌ಕೌಂಟರ್ ಮಾಡಿ ಎಂದು ಕೇಳುವುದು ವಿಪರ್ಯಾಸ.

-ಮಂಜಣ್ಣ, ಸೊರಬ

ತುಂಬ ತಮಾಷೆಯ ಮತ್ತು ವ್ಯಂಗ್ಯವೆನ್ನುವ ವಿಷಯವೆಂದರೆ, ಆಳುವವರ ಕಪಿಮುಷ್ಟಿಯಲ್ಲಿ ಪೊಲೀಸರಿರುವುದು ಮತ್ತು ಪೊಲೀಸರ ಮುಷ್ಟಿಯಲ್ಲಿ ನಕ್ಸಲ್ ಪಟ್ಟಿ ಇರುವುದು. ಇದು ಅಪ್ಪಟ ಸತ್ಯವೆಂದರೂ ಅದು ಹಾಗಲ್ಲ ಎನ್ನುವ ತರ್ಕ ಆಳುವವರಿಂದಲೂ ಇದೆ, ಪೊಲೀಸರಿಂದಲೂ ಇದೆ.

ಇಷ್ಟಕ್ಕೂ ಈ ನಕ್ಸಲೈಟ್ ಎಂದರೆ ಯಾರು? ಉತ್ತರ ಬಹಳ ಸುಲಭ. ನಕ್ಸಲೈಟ್ಸ್ ಅಂದರೆ ಕೇವಲ ಅತೃಪ್ತರು. ವ್ಯವಸ್ಥೆಯ ವಿರೋಧಿಗಳು. ವ್ಯವಸ್ಥೆ ಅವ್ಯವಸ್ಥೆಯ ದಾರಿ ಹಿಡಿದಾಗ ಅದನ್ನು ವಿರೋಧ ಮಾಡುವವರು ಹೊರತು ಅವರು ಆಕಾಶದಿಂದ ಉರಿದವರಲ್ಲ.

ಅವ್ಯವಸ್ಥೆಯನ್ನು, ಜನವಿರೋಧಿ ಆಡಳಿತ ನೀತಿಯನ್ನು ವಿರೋಧಿಸುವವರು ನಕ್ಸಲೈಟ್ಸ್ ಎಂದು ಹೇಳುವುದಾದರೆ ಭಾರತದ ನೂರಾಮೂರು ಕೋಟಿ ಜನರಲ್ಲಿ ಶೇ. 85 ಜನರು ನಕ್ಸಲೈಟ್ಸ್‌ಗಳೇ.

ಸರ್ಕಾರದ ನೀತಿಯನ್ನು ವಿರೋಧಿಸಿ, ಸದಾ ಇಲ್ಲಿ ಸತ್ಯಾಗ್ರಹಗಳು, ಬಂದ್ ಕರೆಗಳು, ರಾಸ್ತಾ ರೋಕೋ ಕಾರ್ಯಗಳು, ಬಸ್ಸಿಗೆ ಬೆಂಕಿ ಹಚ್ಚುವುದು, ಅಂಗಡಿ ಲೂಟಿ, ಕಾರು ರಿಕ್ಷಾ ಪುಡಿಗೈಯುವುದು, ಸರ್ಕಾರದ ವಿರುದ್ಧ ರ್‍ಯಾಲಿ ನಡೆಸುವುದು, ಡಿಸಿ ಕಚೇರಿ ಮುಂದೆ ಸತ್ಯಾಗ್ರಹ ನಡೆಸುವುದು, ಧಿಕ್ಕಾರ ಕೂಗುವುದು, ಮಂತ್ರಿಗಳ ಪ್ರತಿಕೃತಿ ದಹಿಸುವುದು, ಕಲ್ಲು ತೂರಾಟ ಮಾಡುವುದು ಇತ್ಯಾದಿ ದಿನಂಪ್ರತಿ ನಡೆಯುತ್ತಲೇ ಇದೆಯಲ್ಲಾ? ಇವರೂ ನಕ್ಸಲ್ ಪಟ್ಟಿಗೆ ಅರ್ಹರಾಗುತ್ತಾರೆಯೇ?

ಕಾಲೇಜು ಪ್ರೊಫೆಸರುಗಳು, ಅಧ್ಯಾಪಕರುಗಳು, ಪತ್ರಕರ್ತರು, ಗೌರವಾನ್ವಿತ ಉದ್ಯೋಗಸ್ಥರು ನಕ್ಸಲೈಟ್ಸ್ ಎಂದಾದರೆ ಸರ್ಕಾರದ ಜನವಿರೋಧಿ ನೀತಿಯನ್ನು ವಿರೋಧಿಸಿದವರು ಎಷ್ಟು ಶೇ. ಇರಬಹುದು?


ಈಗ ನಂದಗುಡಿ ಹೋಬಳಿಯ 36 ಗ್ರಾಮದ ರೈತರು, ಕಾರ್ಮಿಕರು, ಸರ್ಕಾರದ ಭೂಕಬಳಿಕೆ ವಿರುದ್ಧ ಸೆಟೆದು ನಿಂತು-ಪ್ರಾಣ ಹೋದರೂ ಭೂಮಿ ಕೊಡಲಾರೆವು ಎಂದು ಈ ಆಜ್ಞಾಧಾರಕ ಪ್ರಭುಗಳ ಜನವಿರೋಧಿ ವ್ಯವಸ್ಥೆಯನ್ನು ಖಂಡಿಸಿ ಸತ್ಯಾಗ್ರಹ ನಡೆಸುತ್ತಾರಲ್ಲಾ? ಅವರೂ ನಕ್ಸಲೈಟರೇ?

ಬ್ಯಾಂಕ್ ಉದ್ಯೋಗಿಗಳು, ಸರ್ಕಾರಿ ಉದ್ಯೋಗಸ್ಥರು, ಅಧ್ಯಾಪಕರು, ಕಾರ್ಮಿಕರು, ತಮ್ಮ ಬೇಡಿಕೆ ಮುಂದಿಟ್ಟು ಸರ್ಕಾರದ ವಿರುದ್ಧ ಹೋರಾಡುತ್ತಾರಲ್ಲಾ? ಇವರೂ ನಕ್ಸಲೈಟ್ಸ್‌ಗಳೇ? ಉತ್ತರ ಏನು?

ಅಷ್ಟೂ ವರ್ಷ ಕಾಲ ದಂತಚೋರ, ನರಮೇಧದ ಹೀರೋ ವೀರಪ್ಪನ್ ಇಲ್ಲಿ ನಿರ್ಭೀತಿಯಿಂದ ಮೆರೆದಾಡುತ್ತಿದ್ದ! ಆತನ ದಮನಕ್ಕಾಗಿ ಪ್ರಾಮಾಣಿಕ ಕಾರ್ಯಕ್ಕಿಳಿದ ಕೆಲವಾರು ಪೊಲೀಸ್ ಯುವಕರು ಜೀವತೆತ್ತರು. ಈಗ ಈ ನಕ್ಸಲೈಟ್ ಪಟ್ಟಿ ತಯಾರು ಮಾಡಿರುವ ಈ ದೇಶ ಭಕ್ತ ಮತ್ತು ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಪ್ರತಿಷ್ಠಿತ ಪೊಲೀಸರು ಆಗ ಎಲ್ಲಿದ್ದರು?

ಬರಿಗುಲ್ಲು ಎಬ್ಬಿಸಿ ಅಥವಾ ಖಾಲಿ ಡಬ್ಬ ಬಡಿದು ಸದ್ದು ಮಾಡಿ ಜನರ ಬಾಯಿ ಮುಚ್ಚಿಸಲಾದೀತು ಎಂಬುದು ಕೇವಲ ಭ್ರಮೆ ಮಾತ್ರ!

ಇದರಿಂದ ಜನ ಇನ್ನಷ್ಟು ಕೆರಳಿ ಏನಾದರಾಗಲಿ ಎಂದು ಛಲವಂತರಾಗುವುದು ನಿಶ್ಚಿತ. ನಕ್ಸಲ್ ದಮನ ಮಾಡಲು ಪಟ್ಟಿ ತಯಾರಿ ಎಂದರೆ-ಅದು ಅಡುಗೆ ಭಟ್ಟರಿಗೊಪ್ಪಿಸುವ ಸಾಮಾನು ಪಟ್ಟಿಯೇ?



ಮುಖ್ಯವಾಗಿ ಜನರ ಸಮಸ್ಯೆ ಏನು? ಅದ[illegible] ಪರಿಹಾರ ಹೇಗೆ? ಎಂಬುದನ್ನು ತಾರ್ಕಿಕವಾ[illegible] ಯೋಚಿಸಿ, ನಿವಾರಿಸುವ ಕಾರ್ಯವಾಗಬೇಕೇ ಹೊರತು ಯಾರ್‍ಯಾರೋ ತಮಗಾಗದವರನ್ನೂ, ತಮ್ಮ ರಾಜಕೀಯ ಕಾರ್ಯಸಾಧನೆಗೆ ವಿರೋಧವಾದವರನ್ನು, ತಮ[illegible] ನಿರಂಕುಶ ಅಧಿಕಾರಕ್ಕೆ ಅಡ್ಡಿಯಾದಾರು ಎಂಬ ಗುಮಾ[illegible]ಯೊಂದಿಗೆ ನಕ್ಸಲ್ ಪಟ್ಟಿ ತಯಾರಾದವೆ? ಈ ಅನೀ[illegible] ವ್ಯವಸ್ಥೆಯನ್ನು ವಿರೋಧಿಸುವವರ ಬೇರು ಇನ್ನಷ[illegible] ಗಟ್ಟಿಯಾಗುತ್ತದೆ.

ಎಲ್ಲಿ ಕ್ರಿಯೆ ಇದೆಯೋ ಅಲ್ಲಿ ಪ್ರತಿಕ್ರಿಯೆ ಇದ್ದೆ[illegible] ಇರುತ್ತದೆ. ನಕ್ಸಲ್ ವಿರೋಧಿಗಳು ನಿಧಾನ ಚಿಂತನ[illegible] ಮಾಡಬೇಕು.

-ಕೆ.ಜಿ. ಶೆಟ್ಟಿ, ಕದಂದಲ[illegible]

ಜುಲೈ 18ರ ಸಂಚಿಕೆಯಲ್ಲಿ ಪ್ರಕಟವಾದ 'ಮಕ್ಕಳ[illegible] ದಾರಿ ತಪ್ಪಿದ್ದೆಲ್ಲಿ' ಎಂಬ ಲೇಖನ ಸಮಯೋಚಿತವಾಗಿತ್ತು[illegible] ದೇಶದ ಬಹುಜನವಾಗಿ ಆಳುವ ವರ್ಗವಾಗಬೇಕಿದ[illegible] ಹಿಂದುಳಿದ, ಅಲ್ಪಸಂಖ್ಯಾತ, ಎಸ್.ಸಿ., ಎಸ್‌ಟಿಗಳ[illegible] ಕೇವಲ 3% ಇರೋ ಮನುವಾದಿಗಳ ಕೈಗೆ ಸಿಕ[illegible] ಅಧಿಕಾರ ವಂಚಿತರಾಗಿದ್ದಾರೆ. ಬಾಬಾ ಸಾಹೇಬರು ಬರೆದ[illegible] 'ಸಮಸಂವಿಧಾನದಲ್ಲಿ ಸರ್ವರಿಗೂ ಸಮಪಾಲು[illegible] ಸರ್ವರಿಗೂ ಸಮಬಾಳು' ಎಂಬ ಧ್ಯೇಯ ತತ್ವ ಸ್ವಾತಂತ್ರ[illegible] ನಂತರ ಬಂದ ಎಲ್ಲಾ ಮನುವಾದಿಗಳ ಕುತಂತ್ರದಿಂದ[illegible] ಸಂವಿಧಾನದಲ್ಲೇ ಅದು ಭದ್ರವಾಗಿ ಕೂತಿದೆ. "ನನ[illegible] ಸಂವಿಧಾನ ಸಂಪೂರ್ಣ ಜಾರಿಯಾಗಿದೆ. ಕೇವಲ 20[illegible] ವರ್ಷದಲ್ಲಿ ಭಾರತ ಪ್ರಬುದ್ಧವಾಗುತ್ತದೆ" ಎಂಬ ಬಾಬಾ[illegible] ಕನಸಿಗೆ ಇಂದು ಪಟ್ಟಭದ್ರ, ಸಂವಿಧಾನ ವಿರೋಧಿಗಳ[illegible] ಅಡ್ಡಗಾಲಾಗಿದ್ದಾರೆ. ಹೀಗಿರುವಾಗ ಶೋಷಣೆಗೆ ಒಳಗಾದ[illegible] ಬಹುಸಂಖ್ಯಾತ ಜನ ಸಿಡಿದೇಳುವ ಪ್ರವೃತ್ತಿ ಆಶ್ಚರ್ಯ[illegible]ವೇನಲ್ಲ. ಸಂವಿಧಾನದ ಕೀಲಿ ಕೈಯನ್ನು ಬಹುಜನರು[illegible] ಪಡೆಯುವ ತನಕ, ಈ ಭಯೋತ್ಪಾದನೆ, ನಕ್ಸಲಿಸಂ[illegible] ಅಸಮಾನತೆ, ತಾರತಮ್ಯ ನಿಲ್ಲುವುದು ದುಸ್ತರ[illegible] ಆದ್ದರಿಂದ ಮಾಧ್ಯಮಗಳು ಸಹ ಸಂವಿಧಾನದ ರಾಜ[illegible]ಕೀಯ ಆಶಯಗಳ ಬಗ್ಗೆ ಎಲ್ಲರಿಗೂ ಅರಿವು ಮೂಡಿ[illegible] ಬೇಕಿದೆ.

-ಗಾನಾಸುಮಾ, ಪಟ್ಟಸೋಮನಹ[illegible]

ನಿಮ್ಮ ದಿಟ್ಟ ನಿಲುವು, ನಿಮ್ಮ ಶೈಲಿ, ನಿಮ[illegible] ಬರಹ ನಾಡಿನ ಎಲ್ಲಾ ವರ್ಗದ ಜನರು ಗಮನಿಸ[illegible]ತ್ತಿದ್ದಾರೆ. ನಿಮ್ಮ ಜನಪರ ಚಿಂತನೆಯಿಂದ ನನ್ನಂತರ[illegible] ಸಾವಿರಾರು ಜನರ ಹೃದಯದಲ್ಲಿ ಮೇಷ್ಟ್ರ ನೀವ[illegible] ಭದ್ರವಾಗಿ ಇದ್ದೀರಿ. ನಿಮ್ಮ ದಿಟ್ಟ ನಿರ್ಧಾರದ ಹಿಂದ[illegible] ಲಕ್ಷಾಂತರ ಜನರ ಕನಸಿದೆ. ಧೈರ್ಯವಾಗಿ ಮುನ್ನು[illegible] ಇಂದಿನ ಪರಿಸ್ಥಿತಿಯಲ್ಲಿ ಇಡೀ ಸರ್ಕಾರವನ್ನ[illegible] ಕೇಸರಿಕರಣ ಮಾಡಲು ಹೊರಟಿರುವ ಕೆಲವ[illegible] ಪಟ್ಟಭದ್ರ ಶಕ್ತಿಗಳು ನಿಮಗೆ ತೊಂದರೆ ಕೊಡುವುದ[illegible] ಸದಾ ಕಾಯುತ್ತಿರುತ್ತದೆ. ಇದನ್ನೆಲ್ಲ ಸೂಕ್ಷ್ಮವಾಗಿ ಗ್ರಹಿ[illegible] ಮುನ್ನುಗ್ಗಿ. ಸೌಹಾರ್ದ ಬಯಸುವ ನಾಡಿನ ಎಲ[illegible] ಜನರ ಶ್ರೀರಕ್ಷೆ ನಿಮಗಿದೆ.

-ಮುಕ್ರಂಪಾಷ[illegible]
ಕೊಳ್ಳೆಗಾ[illegible]

ಒಳ್ಳೆಯ ಪುಸ್ತಕವನ್ನು ಆಯ್ಕೆ ಮಾಡಬೇಕಿದ್ದರೆ, ಮುಟ್ಟುಗೋಲಿಗೆ ಒಳಗಾದ ಪುಸ್ತಕಗಳ ಪಟ್ಟಿಯನ್ನು ಹುಡುಕಿರಿ -ಜಾನ್ ಐಕಿನ್

ದೊಡ್ಡವರೆಲ್ಲ ಜಾಣರಲ್ಲ, ಚಿಕ್ಕವರೆಲ್ಲ ಕೋಣರಲ್ಲ!





ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ರೀತಿಯ ಸಂದಿಗ್ಧ ಪರಿಸ್ಥಿತಿ ಸೃಷ್ಟಿಯಾಗಿದೆ. ಅದೇನೆಂದರೆ, ಈ ಹಿಂದೆ ಎರಡೆರಡು ವರ್ಷಗಳ ತನಕ ತಮ್ಮ ಕಾಲ್‌ಶೀಟುಗಳನ್ನು ಹಂಚಿರುತ್ತಿದ್ದ ಹಿರಿಯ ನಾಯಕ ನಟರ ಹೊಸ ಚಿತ್ರಗಳು ಸೆಟ್ಟೇರದೇ ಇರುವುದು. ಸದ್ಯಕ್ಕೆ ವಿಷ್ಣುವರ್ಧನ್ ಆದಿಯಾಗಿ ದರ್ಶನ್‌ತನಕ ಎಲ್ಲರೂ ಕೇವಲ ಒಂದೇ ಒಂದು ಚಿತ್ರದಲ್ಲಿ ನಟಿಸುತ್ತಿದ್ದು ಅದಾದನಂತರ 'ಮುಂದೇನು?' ಎಂಬ ಆತಂಕದಲ್ಲಿದ್ದಾರೆ.


ಉದಾಹರಣೆಗೆ 'ಈ ಬಂಧನ' ಚಿತ್ರದ ನಂತರ ವಿಷ್ಣು ಕೈಯಲ್ಲಿ ಯಾವುದೇ ಚಿತ್ರಗಳಿಲ್ಲ. ಈಗ 'ಮಂಜಿನ ಹನಿ' ಚಿತ್ರದಲ್ಲಿ ತೊಡಗಿರುವ ರವಿಚಂದ್ರನ್ ಕೂಡ ಅದೇ ಪರಿಸ್ಥಿತಿಯಲ್ಲಿದ್ದಾರೆ. ಮೊನ್ನೆ ಮೊನ್ನೆ ತನಕ ಹೊಡಿ, ಬಡಿ, ಕಡಿ ಚಿತ್ರಗಳಲ್ಲಿ ನಟಿಸುವುದಿಲ್ಲ ಎನ್ನುತ್ತಿದ್ದ ಸುದೀಪ್ ತನ್ನ 'ಶಾಂತಿನಿವಾಸ'ದ ನಂತರ 'ಗೂಳಿ' ಎಂಬ ಚಿತ್ರದಲ್ಲಿ ಉಲ್ಟ ಹೊಡೆದಿದ್ದಾರೆ. ಹಾಗೆಯೇ ದರ್ಶನ್ 'ಇಂದ್ರ'ದಲ್ಲಿ ಮಾತ್ರ ತಮ್ಮ ಲಾಂಗು, ಮಚ್ಚು ಸಂಸ್ಕೃತಿಯನ್ನು ಮುಂದುವರೆಸಿದ್ದಾರೆ. ಇವರೆಲ್ಲರಿಗಿಂತ ಉಪೇಂದ್ರರ ಸ್ಥಿತಿ ಚಿಂತಾಜನಕವಾಗಿದೆ. ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್‌ಬ್ಯಾಂಗ್ ಕಿಡ್ಸ್' ಎಂಬ ಮಕ್ಕಳ ಚಿತ್ರದ ಹೀರೋ ಆಗಿರುವ ಉಪ್ಪಿಗೆ ತನ್ನ ಪ್ರೇಕ್ಷಕ ವರ್ಗ ಯಾವುದೆಂಬುದೇ ಗೊತ್ತಾಗದಂತಾಗಿದೆ.

ಒಂದೇ ಒಂದು ಕುತೂಹಲದ ವಿಷಯ ಯಾವುದೆಂದರೆ, ಒಂದು ರೀತಿಯಲ್ಲಿ ಹೀರೋ ಆದರೂ ಸಾಂಪ್ರದಾಯಿಕ ಹೀರೋ ಆಗಿರದೆ ಕಾಮಿಡಿ ಸಿನಿಮಾಗಳಿಗೆ ಹೇಳಿ ಮಾಡಿಸಿದಂತಿರುವ ಜಗ್ಗೇಶ್ ಮಾತ್ರ ಇವತ್ತಿಗೂ ಮೇಲೆ ಹೆಸರಿಸಿದ ಎಲ್ಲ ನಟರಿಗಿಂತಲೂ ಬ್ಯುಸಿ ಆಗಿರುವುದು. ಜಗ್ಗೇಶ್ ಕೈಯಲ್ಲಿ ಇವತ್ತು ಕನಿಷ್ಟವೆಂದರೂ ಹತ್ತು ಚಿತ್ರಗಳಿವೆ.

ಇದೆಲ್ಲದಕ್ಕೆ ವ್ಯತಿರಿಕ್ತವಾಗಿ ಇವತ್ತು ಗಾಂಧಿನಗರದಲ್ಲಿ ಇನ್ನೊಂದು ರೀತಿಯ ಬೆಳವಣಿಗೆ ಕಾಣಿಸಿಕೊಂಡಿದೆ. ಒಂದೆಡೆ ಹಿರಿಯ ನಟರು ಬರಿಗೈಯಲ್ಲಿ ಕೂತಿರುವಾಗ ಇನ್ನೊಂದು ಕಡೆ ಈ ವರ್ಷ ಕನಿಷ್ಟವೆಂದರೂ 45ರಿಂದ 50 ಚಿತ್ರಗಳಿಗೆ ಹೊಸ ನಟರು, ನಿರ್ದೇಶಕರು ಮತ್ತು ನಿರ್ಮಾಪಕರು ಕೈ ಹಾಕಿರುವುದು. ಮೊನ್ನೆ ಮೊನ್ನೆ ಇಂತಹ ಹೊಸ ಹೀರೋ, ಹೀರೋಯಿನ್, ನಿರ್ದೇಶಕ ಮತ್ತು ನಿರ್ಮಾಪಕರಿರುವ ನಾಲ್ಕು ಚಿತ್ರಗಳು ಒಂದೇ ದಿನ ಸೆಟ್ಟೇರಿದವು.

ಇದೆಲ್ಲದರಿಂದ ಹಳಬರು ನೇಪಥ್ಯಕ್ಕೆ ಸರಿಯುತ್ತಾ ಹೊಸಬರು ಲೈಮ್‌ಲೈಟಿಗೆ ಬರುತ್ತಿದ್ದಾರೆ ಎಂದು ತರ್ಕಿಸಬಹುದಾದರೂ ಅದು ಅಷ್ಟು ಸರಳವಾದ ವಿಷಯವಲ್ಲ. ಇವತ್ತು ಗಾಂಧಿನಗರಕ್ಕೆ ಕಾಲಿಟ್ಟಿರುವ ಹೊಸಬರ ಉತ್ಸಾಹಕ್ಕೆ 'ಮುಂಗಾರು ಮಳೆ' ಮತ್ತು 'ದುನಿಯಾ' ಚಿತ್ರಗಳ ಅಭೂತಪೂರ್ವ ಯಶಸ್ಸೇ ಕಾರಣವಾಗಿದ್ದರೂ ಎಲ್ಲ ಹೊಸನಟರು ಗಣೇಶನಂತೆ, ವಿಜಯ್‌ನಂತೆ ದಿನಬೆಳಗಾಗುವುದರೊಳಗೆ ಹೀರೋಗಳಾಗಲು ಸಾಧ್ಯವಿಲ್ಲ. ಹಾಗೆಯೇ 'ಮುಂಗಾರು ಮಳೆ'ಯ ನಿರ್ಮಾಪಕ ಕೃಷ್ಣಪ್ಪನವರಂತೆ ಎಲ್ಲ ಹೊಸ ನಿರ್ಮಾಪಕರೂ ಜಾಕ್‌ಪಾಟ್ ಹೊಡೆಯುವುದು ಅಷ್ಟು ಸುಲಭವಲ್ಲ.

ಹೀಗಾಗಿ ಈ ಐವತ್ತು ಹೊಸ ನಿರ್ದೇಶಕರ, ನಾಯಕ ನಟರ, ನಿರ್ಮಾಪಕರಲ್ಲಿ ಕಾಳೆಷ್ಟು, ಜೊಳ್ಳೆಷ್ಟು ಎಂಬುದನ್ನು ಅರಿಯಲು- ಹೆಚ್ಚಿನ ಸಮಯವೇನೂ ಬೇಕಾಗಿಲ್ಲ. ಈ ವರ್ಷದ ಅಂತ್ಯದೊಳಗಡೆ ಬಹಳಷ್ಟು ಹೊಸಬರ ಉತ್ಸಾಹ ಭಂಗವಾಗುವುದರಲ್ಲಿ



ಯಾವುದೇ ಸಂಶಯವಿಲ್ಲ. ಏಕೆಂದರೆ ಇವತ್ತಿನ ಬೆಳವಣಿಗೆ ಒಂದು ರೀತಿಯಲ್ಲಿ ನೀರಿನ ಮೇಲಿರುವ ಗುಳ್ಳೆಯಂತೆ. ಅದು ಯಾವುದೇ ಕ್ಷಣ ಪಟ್ಟನೆ ಒಡೆದುಹೋಗಬಹುದು.






ಅಂದಹಾಗೆ 'ಹೊಸಬರ ಹವಾ' ಎಂಬ ಟ್ರೆಂಡ್ ಇವತ್ತಿದೆಯಾದರೂ, ಇಂತಹ ಟ್ರೆಂಡ್‌ಗಳು ಗಾಂಧಿನಗರಕ್ಕೆ ಹೊಸದೇನಲ್ಲ. ಉದಾಹರಣೆಗೆ ಶಿವರಾಜ್ ಕುಮಾರ್ 'ಓಂ' ಚಿತ್ರದಲ್ಲಿ ನಟಿಸಿದ ನಂತರ ಸಾಲುಸಾಲಾಗಿ ರೌಡಿಸಂ ಚಿತ್ರಗಳು ಬಂದವು. ಆನಂತರ 'ಎ' ಚಿತ್ರದಲ್ಲಿ ಉಪೇಂದ್ರ "ಪ್ರೀತಿ ಅಂದ್ರೇ ಪುಸ್ತಕದ ಬದನೇಕಾಯಿ" ಎಂದು ಘೋಷಿಸಿದ ಮೇಲೆ ಅಂತಹದ್ದೇ ರಸ್ತೆಬದಿಯ ಫಿಲಾಸಫಿಯನ್ನು ಹೊಂದಿದ್ದ ಚಿತ್ರಗಳು ತೆರೆಕಂಡವು. ಅದಾದ ನಂತರ ಥ್ರಿಲ್ಲರ್ ಮಂಜು ಕೃಪೆಯಿಂದ 'ಪೊಲೀಸ್ ಸ್ಟೋರಿ' ಮತ್ತು 'ಲಾಕಪ್ ಡೆತ್' ಚಿತ್ರಗಳು ಗೆದ್ದಿದ್ದವು. ಇದನ್ನು ಕಂಡು ಪೊಲೀಸ್ ಪಾತ್ರವೇ ಕೇಂದ್ರವಾಗಿದ್ದ ಸುಮಾರು ಐವತ್ತು ಚಿತ್ರಗಳು ತಯಾರಾದವು. ಅಂತಹ ಚಿತ್ರಗಳಲ್ಲಿ ಮಿಂಚಿದ ನಟ ದೇವರಾಜ್ ತಮ್ಮ ಮನೆಯಲ್ಲಿ ಹತ್ತಾರು ಖಾಕಿ ಸಮವಸ್ತ್ರಗಳನ್ನು ತಯಾರಿಸಿಟ್ಟುಕೊಂಡಿರಬಹುದೇ ಎಂಬ ಗುಮಾನಿಯೂ ಶುರುವಾಗಿತ್ತು.

ಕೊನೆಗೂ ತೆರೆಯ ಮೇಲಿನ ಪೊಲೀಸರ ಅಬ್ಬರಕ್ಕೆ ಪ್ರೇಕ್ಷಕ ಬೇಸತ್ತನಂತರ ವಿಷ್ಣುವರ್ಧನ್‌ರವರ ಗಿರಿಜಾ ಮೀಸೆ ಯುಗ ಪ್ರಾರಂಭವಾಯಿತು. 'ಯಜಮಾನ' ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದಿದ್ದೇ ವಿಷ್ಣು ಹಲವಾರು ಚಿತ್ರಗಳಲ್ಲಿ ದಪ್ಪಪುಷ್ಟ ಮೀಸೆಯಲ್ಲಿ ಮಿಂಚಿದರು. ಹೀಗೆ ಗಾಂಧಿನಗರದಲ್ಲಿ ಕಳೆದ ಐದು ವರ್ಷಗಳಲ್ಲಿ ಐದಾರು ತರಹದ ಟ್ರೆಂಡುಗಳು ಬಂದು, ಮೆರೆದು ಅಷ್ಟೇ ವೇಗವಾಗಿ ಮಾಯವಾದ ಇತಿಹಾಸವೇ ಇದೆ.

ಹೀಗಾಗಿ ಇವತ್ತು ನೂರಕ್ಕಿಂತಲೂ ಹೆಚ್ಚು ಸಿನಿಮಾಗಳು ತಯಾರಾಗುತ್ತಿದ್ದು ಚಿತ್ರರಂಗದಲ್ಲಿ ಹೊಸ ದಾಖಲೆಯೇ ನಿರ್ಮಾಣವಾಗುತ್ತಿದ್ದರೂ ಇದೂ ಒಂದು ಟ್ರೆಂಡ್ ಎಂಬುದನ್ನು ಮರೆಯಲಾಗದು. ಇಂದು ಹೊಸಬರು ಉತ್ಸಾಹದಿಂದ ಮೆರೆದಾಡುತ್ತಿದ್ದರೂ, ಅದನ್ನು ಕಂಡು ಹಳಬರು ಗರ ಬಡಿದವರಂತೆ ಕೂತಿದ್ದರೂ, ನಾಳೆ ಗೆಲ್ಲುವವರ್ಯಾರು?



ಶೆಣೈ



ನಿರ್ದೇಶಕಿಯಾಗಿ ವಿನಯಾ ಆರಂಗೇಟ್ರಂ

ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಮಹಿಳಾ ನಿರ್ದೇಶಕಿ ಕಾಲೂರುವ ಸುದ್ದಿ ಕೇಳಿಬರುತ್ತಿದೆ.

ವಿನಯಾ ಪ್ರಸಾದ್ ಎಂಬ ಕರಾವಳಿ ಕಡೆಯ ನಟಿ ನಿರ್ದೇಶನದ ಕಡೆಗೆ ಒಲವು ತೋರಿಸುತ್ತಿದ್ದಾರೆ. ಅವರೇ ಕತೆ, ಸಂಭಾಷಣೆ ಬರೆದು ಚಿತ್ರಕತೆಯನ್ನು ಮುಗಿಸಿದ್ದಾರೆ. ಅಂದಹಾಗೆ ಇನ್ನೊಂದು ರೌಂಡ್ ಚರ್ಚೆ ಮಾಡಿದ ನಂತರ ಅವರ ನಿರ್ದೇಶನದ ಚಿತ್ರ ಸೆಟ್ಟೇರುವುದು ಗ್ಯಾರಂಟಿ.


ವಿನಯಾ ಪ್ರಸಾದ್ ವೃತ್ತಿ ಜೀವನವೇ ಹಲವಾರು ತಿರುವುಗಳಿಂದ ಕೂಡಿದೆ. ಆಕೆ ಚಿತ್ರರಂಗಕ್ಕೆ ಕಾಲಿಡುವ ಮೊದಲೇ ಕಿರುತೆರೆಯಲ್ಲಿ ಸೂಪರ್ ಸ್ಟಾರ್ ಆಗಿದ್ದವರು. ಹಾಗೆಯೇ ಮದುವೆಯಾಗಿ, ಮಕ್ಕಳಾದ ನಂತರ 'ಗಣೇಶನ ಮದುವೆ' ಚಿತ್ರದಲ್ಲಿ ನಾಯಕಿಯಾಗಿ ಚಿತ್ರರಂಗಕ್ಕೆ ಕಾಲಿಟ್ಟ ಅಪರೂಪದ ಮಹಿಳೆ ಈಕೆ. ಒಂದಿಷ್ಟು ಸಮಯ ನಾಯಕಿಯಾಗಿ ವಿಜೃಂಭಿಸಿದ ನಂತರ ಗಾಂಧಿನಗರದವರು ಆಕೆಯನ್ನು ಪೋಷಕನಟಿ ಪಟ್ಟದಲ್ಲಿ ಕುಳ್ಳಿರಿಸಿದರು. ಆಗ ಆಕೆ ಜಾಣತನದಿಂದ ಮತ್ತೆ ಟೀವಿ ಕಡೆಗೆ ವಾಲಿದರು. ದಕ್ಷಿಣ ಭಾರತದ ನಾಲ್ಕು ಭಾಷೆಯ ಟಿ.ವಿ ಧಾರಾವಾಹಿಗಳಲ್ಲಿ ನಟಿಸಿರುವ ಈಕೆ ಅಲ್ಲಿ, ಇಲ್ಲಿ, ಎಲ್ಲೆಡೆಯೂ ಸಲ್ಲುವ ಅಪರೂಪದ ನಟಿ. ಪತಿ ಪ್ರಸಾದ್‌ರ ವಿಯೋಗದ ನಂತರ ಆಕೆ ಪ್ರಕಾಶ್ ಎಂಬುವವರನ್ನು ಮದುವೆಯಾಗಿದ್ದರಿಂದ ವಿನಯಾ ಪ್ರಸಾದ್ ಆಗಿದ್ದವರು ವಿನಯಾ ಪ್ರಕಾಶ್ ಆಗಿ ರೂಪಾಂತರಗೊಂಡರು. ಆರ್ಕೆಸ್ಟ್ರಾಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಹಾಡುವ ಈಕೆ ಈಗ ನಿರ್ದೇಶನದ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳಲು ಹೊರಟಿದ್ದಾರೆ.

ವಿಷ ಕಳೆದುಕೊಂಡ 'ಶ್ವೇತನಾಗ'


ಸೌಂದರ್ಯ ನಟಿಸಿದ್ದ 'ಶ್ವೇತನಾಗ' ಎಂಬ ಹಳೆಯ ಚಿತ್ರವೊಂದು ಮೊನ್ನೆ ಚಿತ್ರೋದ್ಯಮದವರ ನಿದ್ರೆ ಕೆಡಿಸಿತು. ಇದಕ್ಕೆ ಕಾರಣವಿಷ್ಟೇ: ಈ ಚಿತ್ರದ ಟಿವಿ ಹಕ್ಕನ್ನು ಸುವರ್ಣ ಚಾನೆಲ್‌ನವರು ಖರೀದಿಸಿದ್ದರು. ಅದನ್ನು ಅವರು ಪ್ರಸಾರ ಮಾಡಲು ಹೊರಟಾಗ ಉದ್ಯಮದ ಕೆಲವರು ಅದು ಡಬ್ಬಿಂಗ್ ಸಿನಿಮಾವೆಂದು ಆಕ್ಷೇಪ ವ್ಯಕ್ತಪಡಿಸಿದರು. ಕೊನೆಗೆ ಛೇಂಬರು, ನಿರ್ದೇಶಕರ ಸಂಘ, ನಿರ್ಮಾಪಕರ ಸಂಘ, ಸಂಬಂಧಪಟ್ಟ ಅನೇಕ ಪದಾಧಿಕಾರಿಗಳು ಮೀಟಿಂಗ್ ನಡೆಸಿ ಈ ಚಿತ್ರವನ್ನು ಪ್ರಸಾರ ಮಾಡುವಂತಿಲ್ಲ ಎಂದು ಸಂಬಂಧಪಟ್ಟವರಿಗೆ ತಿಳಿಸಿದರು. ಅಲ್ಲಿಗೆ 'ಶ್ವೇತನಾಗ' ಪ್ರಸಾರ ನಿಂತುಹೋಯಿತು. ಒಂದು ದೊಡ್ಡ ರಾದ್ಧಾಂತವಾಗಬಲ್ಲ ವಿಷಯವನ್ನು ಆರಂಭದಲ್ಲೇ ಚಿವುಟಿಹಾಕಿದರು.

'ಚಿತ್ರತಾರಾ.ಕಾಂ' ಎಂಬ ತಾರೆಗಳ ಲೋಕ

ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಸಿನಿಮಾ ಡಾಟ್ ಕಾಂ ಬಂದಿದೆ. ಹವ್ಯಾಸಿ ಛಾಯಾಗ್ರಾಹಕ ಮನು 'ಚಿತ್ರತಾರಾ.ಕಾಂ' ಅನ್ನು ಮೊನ್ನೆ ಆರಂಭಿಸಿದ್ದಾರೆ. ಸುದ್ದಿಗಳು, ಫೋಟೋಗಳು, ಫೋಟೋ ಗ್ಯಾಲರಿ, ಸ್ಟುಡಿಯೋ ರೌಂಡ್‌ಅಪ್... ಹೀಗೆ ಸಿನಿಮಾಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ಇದರಲ್ಲಿ ಇರುತ್ತವೆ. ಇತ್ತೀಚೆಗಷ್ಟೇ ಸಿನಿಮಾ ಛಾಯಾಗ್ರಾಹಕರಾಗಿ ಉದ್ಯಮಕ್ಕೆ ಬಂದ, ಕಡಿಮೆ ಮಾತಿನ ಮನುಗೆ 'ಲಂಕೇಶ್' ಪರವಾಗಿ ಶುಭಾಶಯಗಳು.



ಗೋವಿಂದುಗೆ ದರ್ಶನ್ ಕಾಲ್‌ಶೀಟ್



ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಹೊಸ ಚಿತ್ರವೊಂದನ್ನು ಆರಂಭಿಸುವ ಸುದ್ದಿ ಕೇಳಿಬರುತ್ತಿದೆ. ಚಿತ್ರೋದ್ಯಮದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಗೋವಿಂದು ಇತ್ತೀಚೆಗೆ ಯಾಕೋ ಚಿತ್ರ ನಿರ್ಮಾಣಕ್ಕೆ ಕೈ ಹಾಕಿರಲಿಲ್ಲ. ಇದಕ್ಕೆ ಕಾರಣ ಅವರಲ್ಲಿ ಚಿತ್ರ ನಿರ್ಮಾಣದ ಬಗ್ಗೆ ಆಸಕ್ತಿ ಇರಲಿಲ್ಲವೋ, ಅಥವಾ ಹೋರಾಟದಲ್ಲಿ ಸಿಕ್ಕಾಪಟ್ಟೆ ಬಿಜಿಯಾಗಿದ್ದರೋ, ಅಥವಾ ಕಲಾವಿದರು ಕಾಲ್‌ಶೀಟ್ ಕೊಟ್ಟಿರಲಿಲ್ಲವೋ ಎಂಬುದು ಗೊತ್ತಿಲ್ಲ. ಸದ್ಯಕ್ಕಂತೂ ಅವರನ್ನು "ಗೋವಿಂದು ಮಾಮ" ಎಂದೇ ಕರೆಯುವ ದರ್ಶನ್ ತಮ್ಮ ಕಾಲ್‌ಶೀಟ್ ನೀಡಿದ್ದಾರೆ.

ಮುಂದಿನ ತಿಂಗಳು ಚಿತ್ರ ಸೆಟ್ಟೇರಲಿದೆಯಂತೆ. ಈ ಹಿಂದೆಯೂ ದರ್ಶನ್ ಗೋವಿಂದುಗೆ ಎರಡು ಬಾರಿ ಕಾಲ್‌ಶೀಟ್ ನೀಡಿ 'ಲಾಲಿಹಾಡು' ಮತ್ತು 'ಭಗವಾನ್' ಚಿತ್ರಗಳಲ್ಲಿ ನಟಿಸಿದ್ದರು.

ಆದರೆ ದರ್ಶನ್‌ಗಿಂತ ಮೊದಲು ಗೋವಿಂದು ಪಾಲಿಗೆ ಜಗ್ಗೇಶ್ ಫೇವರಿಟ್ ನಟರಾಗಿದ್ದರು. ಜಗ್ಗೇಶ್-ಗೋವಿಂದು ಕಾಂಬಿನೇಶನ್ನಿನ ಮೂರು ಚಿತ್ರಗಳು ಬೆಳ್ಳಿತೆರೆಗೆ ಬಂದಿದ್ದವು. ಇದೀಗ ಗೋವಿಂದು-ದರ್ಶನ್ ಮೂರನೇ ಬಾರಿಗೆ ಒಟ್ಟಿಗೆ ಸೇರುತ್ತಿದ್ದಾರೆ.

R.B.P. LANKESH, Kannada Weekly Price Rs. 10/- 25-7-2007 RNI No. KARKAN2005/14648 Regd.No.KA/BG(S)/2036/2005-

ಪ್ರೇಮ್‌ಗೆ ನಟಿಯರ ಕಾಟ



ನಿರ್ದೇಶಕ ಕಂ ನಾಯಕ ನಟ ಪ್ರೇಮ್‌ನ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರ ಕುಂಟುತ್ತಾ, ತೆವಳುತ್ತಾ ಸಾಗಿದೆ. ವರಮಹಾಲಕ್ಷ್ಮಿ ಹಬ್ಬದ ಸಮಯಕ್ಕೆ ಚಿತ್ರ ಬಿಡುಗಡೆಯಾಗುತ್ತದೆಂದು ಮೊದಲು ಹೇಳಲಾಗಿತ್ತಾದರೂ ಈಗ ವಿಜಯದಶಮಿಗೆ ಬಿಡುಗಡೆ ಕಾಣುತ್ತದೆ ಎಂದು ಹೇಳಲಾಗುತ್ತಿದೆ.

ಇದಕ್ಕೆ ಕಾರಣ ಬೇರೇನೂ ಅಲ್ಲ, ಅದರಲ್ಲಿ ನಟಿಸುತ್ತಿರುವ ಇಬ್ಬರು ನಾಯಕಿಯರೂ ತುಂಬಾ ತೊಂದರೆ ಕೊಡುತ್ತಿದ್ದಾರಂತೆ. ಒಬ್ಬಳು ಮಾಡಲಿಂಗ್ ಅಸೈನ್‌ಮೆಂಟ್ ಇದೆಯೆಂದೂ, ಇನ್ನೊಬ್ಬಳು ಹಿಂದಿ ಚಿತ್ರರಂಗದಲ್ಲಿ ಬ್ಯುಸಿ ಆಗಿದ್ದೇನೆಂದೂ ಹೇಳುತ್ತಾ ಸಾಗಿದ್ದಾರಂತೆ. "ಅಲ್ಲ, ಇದೆಲ್ಲ ಗೋಜಲು ಯಾಕೆ ಬೇಕಾಗಿತ್ತು? ಇಲ್ಲಿಯವರನ್ನೇ ಹಾಕಿಕೊಂಡಿದ್ದರೆ ಇದೆಲ್ಲ ಸಮಸ್ಯೆಗಳಿರುತ್ತಿರಲಿಲ್ಲ ಅಲ್ವಾ?" ಎಂದು ಕೇಳಿದರೆ ಪ್ರೇಮ್ ನಿರುತ್ತರರಾಗುತ್ತಾರೆ...

ಆ ಬಂಧನದಲ್ಲಿ 'ಈ ಬಂಧನ'



ವಿಜಯಲಕ್ಷ್ಮಿ ಸಿಂಗ್ ಯಾನೆ ಜೈ ಜಗದೀಶರ ಧರ್ಮಪತ್ನಿ ತನ್ನ ಚೊಚ್ಚಲ ನಿರ್ದೇಶನದ ಚಿತ್ರ 'ಈ ಬಂಧನ'ವನ್ನು ಸದ್ಯದಲ್ಲೇ ಮುಗಿಸಲಿದ್ದಾರೆ. ಇಪ್ಪತ್ತೈದು ವರ್ಷಗಳ ಹಿಂದೆ ಅವರ ಸಹೋದರ ರಾಜೇಂದ್ರಸಿಂಗ್ ಬಾಬು ನಿರ್ಮಿಸಿ, ನಿರ್ದೇಶಿಸಿದ್ದ 'ಬಂಧನ' ಸಿನಿಮಾ ಎಲ್ಲರ ಮನ ಗೆದ್ದಿತ್ತು. ವಿಶೇಷವೆಂದರೆ 'ಆ ಬಂಧನದ' ನಾಯಕ ವಿಷ್ಣುವರ್ಧನ್ 'ಈ ಬಂಧನದ' ನಾಯಕ ಕೂಡ ಹೌದು. (ಆದರೆ ಅದರಲ್ಲಿ ಸುಹಾಸಿನಿ ನಾಯಕಿಯಾಗಿದ್ದರೆ, ಇದರಲ್ಲಿ ಜಯಪ್ರದಾ ನಾಯಕಿ.) ಕುತೂಹಲದ ಅಂಶಯಾವುದೆಂದರೆ, ಸಹೋದರ ಬಾಬು ಜನಮನ ಗೆದ್ದಂತೆ ಸಹೋದರಿ ಗೆಲ್ಲಬಲ್ಲರೆ ಎಂಬುದು.

ಈ ಪ್ರಶ್ನೆ ವಿಜಯಲಕ್ಷ್ಮಿಯವರನ್ನೂ ಕಾಡಿರಬೇಕು. ಅದಕ್ಕೆಂದೇ ಅವರು ಆ ಬಂಧನದ 'ಬಣ್ಣಾ... ಒಲವಿನ ಬಣ್ಣಾ' ಹಾಡನ್ನು 'ಈ ಬಂಧನ'ದಲ್ಲೂ ತುಂಬಾ ಲೆಕ್ಕಾಚಾರದಿಂದ ಬಳಸಿಕೊಂಡಿದ್ದಾರೆ. ಹಾಗೆಯೇ ಅಂದಿನ ಸಿನಿಮಾವನ್ನು ನೆನಪಿಸುವ ರೀತಿಯಲ್ಲಿ ನಾಯಕನ ಹೆಸರನ್ನು ಹರೀಶ್ ಎಂದೂ, ನಾಯಕಿಯ ಹೆಸರನ್ನು ನಂದಿನಿ ಎಂದೂ ಉಳಿಸಿಕೊಂಡಿದ್ದಾರೆ. ಇದೇ ರೀತಿ ಹಲವಾರು ಗಿಮ್ಮಿಕ್ಕುಗಳನ್ನು ಮಾಡಿದ್ದಾರೆ. ಇದನ್ನೆಲ್ಲ ನೋಡಿ "ನಿಮ್ಮ ಮೇಲೆ ಅಣ್ಣ ರಾಜೇಂದ್ರ ಸಿಂಗ್ ಬಾಬು ಪ್ರಭಾವ ಬೀರಿದ್ದಾರೆಯೇ?" ಎಂದು ಕೇಳಿದರೆ, ಯಾವುದೇ ಮುಲಾಜಿಲ್ಲದೇ "ಖಂಡಿತವಾಗಿಯೂ ನನ್ನ ಆದರ್ಶ ನಿರ್ದೇಶಕ ಅವರೇ" ಎನ್ನುತ್ತಾರೆ ವಿಜಯಲಕ್ಷ್ಮಿಸಿಂಗ್.

ಒಂದೇ ಒಂದು ಸಮಸ್ಯೆ ಯಾವುದೆಂದರೆ, ಅಂದು ವಿಷ್ಣುರವರಿಗೆ ಇನ್ನೂ ವಯಸ್ಸಾಗಿರಲಿಲ್ಲ, ಆದರೆ ಈಗ ಅವರಿಗೆ ವಯಸ್ಸಾಗಿದೆಯಲ್ಲದೆ, ಇಂದು ಯುವಕರೇ ಕನ್ನಡ ಚಿತ್ರರಂಗದಲ್ಲಿ ಮೆರೆಯುತ್ತಿದ್ದಾರೆ. ಆದ್ದರಿಂದ 'ಈ ಬಂಧನ' ಎಷ್ಟರಮಟ್ಟಿಗೆ ಜನಮನ ಗೆಲ್ಲುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಸೋಲಲ್ಲೂ ಸುಖ



ಕ್ರೇಜಿ ಸ್ಟಾರ್ ರವಿಚಂದ್ರನ್ ಮೊನ್ನೆ ಪತ್ರಕರ್ತರೊಂದಿಗೆ ಮಾತನಾಡುತ್ತಾ ಇಪ್ಪತ್ತೈದು ವರ್ಷಗಳ ತಮ್ಮ ವೃತ್ತಿಜೀವನದಲ್ಲಿ ತಮಗೆ ಅತ್ಯಂತ ಇಷ್ಟವಾಗಿದ್ದು 'ಏಕಾಂಗಿ' ಚಿತ್ರ ಎಂದು ಹೇಳಿ ಎಲ್ಲರನ್ನು ಬೆಚ್ಚಿಬೀಳಿಸಿದರು. ಏಕೆಂದರೆ ಅವರ ಎಲ್ಲ ಚಿತ್ರಗಳಿಗಿಂತ ಅತಿ ದಾರುಣವಾಗಿ ಸೋತಿದ್ದ ಸಿನಿಮಾ ಇದು (ಆದರೆ ಅದೇ ಚಿತ್ರ ಅವರಿಗೆ ರಾಜ್ಯ ಪ್ರಶಸ್ತಿಯನ್ನು ತಂದಿತ್ತು ಎಂಬುದು ಬೇರೆ ಮಾತು).

ಹಾಗೆ ನೋಡಿದರೆ ಸಾಹಸಸಿಂಹ ವಿಷ್ಣುವರ್ಧನ್ ಕೂಡಾ ತಾವು ನಟಿಸಿದ ಅತ್ಯಂತ ಮೆಚ್ಚಿನ ಚಿತ್ರ 'ಮುತ್ತಿನ ಹಾರ' ಎಂದೇ ಹೇಳುತ್ತಾರಲ್ಲದೆ, ಅದರ ಬಗ್ಗೆ ಮಾತನಾಡಲು ಪ್ರಾರಂಭಿಸಿದರೆ ಸುತ್ತಲಿರುವವರೆಲ್ಲ ನಿದ್ದೆಗೆ ಜಾರುವಷ್ಟು ಬೋರ್ ಹೊಡೆಸುತ್ತಾರೆ. ಅಂದಹಾಗೆ ಇದು ಕೂಡ ಬಾಕ್ಸ್ ಆಫೀಸಿನಲ್ಲಿ ಅಮೋಘವಾಗಿ ಸೋತಿದ್ದ ಚಿತ್ರವೇ!

ಅದೇನೇ ಇರಲಿ, ಎಲ್ಲರೂ ತಮ್ಮ ಗೆದ್ದ ಚಿತ್ರಗಳನ್ನೇ ನೆನೆಯುವಾಗ, ಇವರಿಬ್ಬರು ತಮಗೆ ಇಷ್ಟವಾದದ್ದು — ಆ ಚಿತ್ರಗಳು ಸೋತಿದ್ದರೂ ಸಹ — ತಮಗೆ ನೆಮ್ಮದಿ ತಂದ ಚಿತ್ರ ಎಂದು ನೆನೆಯುವುದು ಶ್ಲಾಘನೀಯ. 'ಸೋಲಲ್ಲೂ ಸುಖ ಕಾಣಿರಿ' ಎಂಬ ದಾಸರವಾಣಿಯಂತಿದೆ ಇವರಿಬ್ಬರ ನಿಲುವುಗಳು.

'ಗೂಳಿ' ಸುದೀಪ್‌ಗೆ ಗೂಳಿ ತಿವಿತ



ಸುದೀಪ್ ಅಪಾರ ಶ್ರದ್ಧೆ ಮತ್ತು ಪ್ರೀತಿಯಿಂದ ನಿರ್ಮಿಸಿ, ನಿರ್ದೇಶಿಸಿದ '73 ಶಾಂತಿನಿವಾಸ' ಚಿತ್ರಕ್ಕೆ ಅವರು ನಿರೀಕ್ಷಿಸಿದಷ್ಟು ಪ್ರತಿಕ್ರಿಯೆ ಬಾರದಿದ್ದಾಗ ಸಹಜವಾಗಿಯೇ ಅವರ ಉತ್ಸಾಹ ಕುಗ್ಗಿತ್ತು. ಅದರಿಂದ ಹೊರಬರಲೆಂದೋ, ಏನೋ ಅವರು ತಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾದ 'ಗೂಳಿ' ಎಂಬ ಡಿಶುಂ, ಡಿಶುಂ ಚಿತ್ರಕ್ಕೆ ತಮ್ಮ ಕಾಲ್‌ಶೀಟ್ ನೀಡಿದ್ದರು. ಆದರೆ ಅದರ ಚಿತ್ರೀಕರಣ ನಡೆಯುತ್ತಿದ್ದಾಗ ಗೂಳಿಯೊಂದು ಸುದೀಪ್‌ಗೆ ತಿವಿದು ಅವರಿಗೆ ಸಣ್ಣ ಫ್ರಾಕ್ಚರ್ ಆಗಿ ಈಗ ಅವರು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

'ಶಾಂತಿನಿವಾಸದಿಂದ' ಸಿಗದದ್ದು 'ಗೂಳಿ'ಯಿಂದಲೂ ಸಿಗಲಿಲ್ಲವಲ್ಲ ಎಂದು ಅವರ ಅಭಿಮಾನಿಗಳು ಬೇಸರ ಪಡುತ್ತಿದ್ದರೆ ಅಚ್ಚರಿ ಏನಿಲ್ಲ.



'ಸ್ನೇಹನಾ ಪ್ರೀತಿನಾ' ಚಿತ್ರದಲ್ಲಿ ಸಿಂಧು

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44